
೨೦ನೇ ವರ್ಷದಲ್ಲಿ

ಅನ್ವೇಷಣೆ


ಸಂಚಿಕೆ ೬೭

ಸಾಹಿತ್ಯ ಸಂಸ್ಕೃತಿ ಕಲೆ



ಆರ್.ಎಂ. ಹಡಪದ್ ಅವರ ಕಲಾಕೃತಿಗಳು





ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಆರ್.ಎಂ. ಹಡಪದ್, ಕೆ.ಎಸ್. ನರಸಿಂಹಸ್ವಾಮಿ, ವಿಭಾ ತಿರುಕಪದಿ ಅವರುಗಳ ನೆನಪಿನ ಸಂಚಿಕೆ.

ರೂ.೨೦



* ಸರ್ವೋತ್ತರ ಕನ್ನಡ ಸಾಹಿತ್ಯ ವಿಸ್ತರಿಸಿಕೊಳ್ಳುತ್ತಿರುವ ಬದುಕಿನ ವಿವಿಧ ಆಯಾಮಗಳ ಬಗ್ಗೆ ಬದಲಾಗಲೇಬೇಕಾದ ಸೃಷ್ಟಿ ಕ್ರಿಯೆಯ ಶೈಲಿ, ವಸ್ತು, ವಿನ್ಯಾಸ, ವಿಮರ್ಶಾ ಮಾನದಂಡಗಳ ಬಗೆಗೆ ಮುಕ್ತ ಚರ್ಚೆಯ ಅಗ್ರವೇದಿಕೆ — ಅನ್ವೇಷಣೆ.

* ಹಿರಿಕಿರಿಯ ಲೇಖಕರನ್ನೊಳಗೊಂಡು ನಡೆಯುತ್ತಿರುವ ಸಮಕಾಲೀನ ಸಾಂಸ್ಕೃತಿಕ ಸಂವಾದಕ್ಕೆ ತೆರೆದ ವೇದಿಕೆ — ಅನ್ವೇಷಣೆ.

* ಪ್ರಗತಿಪರ ವಿಚಾರಗಳ ದಾಖಲಾತಿಗೆ

ಅನ್ವೇಷಣೆ

ಚಂದಾ ವಿವರ

ವಾರ್ಷಿಕ ಚಂದಾ ರೂ.೧೦೦/-

ಆಜೀವ ಚಂದಾ ರೂ.೧೦೦೦/-

ಪೋಷಕ ನಿಧಿ ರೂ.೫೦೦೦/-

ಚಂದಾ ಹಣವನ್ನು ಎಂ.ಓ. ಅಥವಾ ಡಿ.ಡಿ. ಮೂಲಕ ಕಳುಹಿಸಿ.

ಎಂ.ಓ. ಕೂಪನ್‌ನಲ್ಲಿ ತಮ್ಮ ಪೂರ್ಣವಿಳಾಸ ನಮೂದಿಸಿ.

ವಾರ್ಷಿಕ ಚಂದಾ ರೂ.೧೦೦

ಪ್ರಗತಿಪರ ವಿಚಾರಗಳಿಗೆ

ಅನ್ವೇಷಣೆ

ಸಂಪುಟ: ೨೦ ಸಂಚಿಕೆ: ೬೭

ಜುಲೈ-ಆಗಸ್ಟ್ ೨೦೦೪

ಸಂಪಾದಕ:
ಆರ್.ಜಿ. ಹಳ್ಳಿ ನಾಗರಾಜ್

ಗೌರವ ಸಂಪಾದಕರು :
ಡಾ॥ ಸರಜೂ ಕಾಟ್ಕರ್
ಡಾ॥ ಎಚ್.ಎಲ್. ಪುಷ್ಪ

ಸಹ ಸಂಪಾದಕ :
ನಜೀರ ಚಂದಾವರ



ಡಿ.ಟಿ.ಪಿ.:
ಆರಾಧ್ಯ ಜಿ.ಎಸ್.


ವಿಳಾಸ

ಸಂಪಾದಕ, ಅನ್ವೇಷಣೆ
೩೭/೨ಎ, 'ನಿಸರ್ಗ'
ನಾಗರಬಾವಿ ರಸ್ತೆ, ವಿಜಯನಗರ,
ಬೆಂಗಳೂರು - ೫೬೦ ೦೪೦.

ದೂರವಾಣಿ :
080 - 5760 6488 / 2340 4244

ಮೊಬೈಲ್: 9243 440881

ಸಾಂಸ್ಕೃತಿಕ ಚಟುವಟಿಕೆಗಳಿಗೆ



ಈ ಸಂಚಿಕೆಯ ಲೇಖಕರು / ವಿಳಾಸ

- ಬಿ.ಎಸ್. ವೆಂಕಟಲಕ್ಷ್ಮಿ, ಸಂಪಾದಕಿ - 'ಚರ್ಚೆಗೊಂದು ಚಾವಡಿ', ಸಿ - ೩೦೨, ಇನ್‌ಫೋಸಿಸ್ ಪ್ರೈಡ್ ಅಪಾರ್ಟ್‌ಮೆಂಟ್ಸ್, ಬಿಳೇಕಹಳ್ಳಿ, ಬನೇರುಘಟ್ಟ ರಸ್ತೆ, ಬೆಂಗಳೂರು - ೫೬೦ ೦೭೬.
- ಡಾ. ಎಚ್.ಎಲ್. ಪುಷ್ಪ, ೩೭/೨ಎ, 'ನಿಸರ್ಗ', ನಾಗರಬಾವಿ ರಸ್ತೆ, ವಿಜಯನಗರ, ಬೆಂಗಳೂರು - ೪೦.
- ಎಸ್.ಎಸ್. ಶ್ರೀಧರಮೂರ್ತಿ, ಸಹ ಸಂಪಾದಕ, ಮಲ್ಲಿಗೆ, ಮೈಸೂರು ರಸ್ತೆ, ಬೆಂಗಳೂರು - ೧೮.
- ಪ್ರೊ. ಕಿ.ರಂ. ನಾಗರಾಜ, ಕನ್ನಡ ಅಧ್ಯಯನ ಕೇಂದ್ರ, ಬೆಂ.ವಿ.ವಿ., ಬೆಂಗಳೂರು - ೫೬೦ ೦೫೬.
- ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಹ್ಯಾಂಡ್‌ಪೋಸ್ಟ್, ಮೂಡಗೆರೆ ತಾ., ಚಿಕ್ಕಮಗಳೂರು ಜಿಲ್ಲೆ.
- ವಿಷ್ಣುನಾಯ್ಕ, ಸಂಪಾದಕ - 'ಸಕಾಲಿಕ', ರಾಘವೇಂದ್ರ ಪ್ರಕಾಶನ, ಅಂಕೋಲ - ಉ.ಕ. ಜಿಲ್ಲೆ.
- ಡಾ. ಯು.ಬಿ. ಪವನಜ, ೬೫, ೩ನೇ ಕ್ರಾಸ್, ಅಮರಜ್ಯೋತಿನಗರ, ವಿಜಯನಗರ, ಬೆಂಗಳೂರು - ೪೦.
- ಬಿದರಹಳ್ಳಿ ನರಸಿಂಹಮೂರ್ತಿ, ಅನಿಮಿಷ, ದುರ್ಗಿಗುಡಿ ಹತ್ತಿರ, ಹೊನ್ನಾಳಿ, ದಾವಣಗೆರೆ ಜಿಲ್ಲೆ.
- ಡಾ. ವಿಕ್ರಮ ವಿಸಾಜಿ, ಕನ್ನಡ ಪ್ರಾಧ್ಯಾಪಕರು, ಗುಲಬರ್ಗಾ ವಿ.ವಿ. ಸ್ನಾತಕೋತ್ತರ ಕೇಂದ್ರ, ಸೊಂಡೂರು.
- ಜಯದೇವಪ್ಪ ಜೈನಕೇರಿ, ಕಾರ್ಯದರ್ಶಿಗಳು, ಕರ್ನಾಟಕ ಸಂಘ, ಶಿವಮೊಗ್ಗ - ೫೭೭ ೨೦೧.
- ಎಂ. ವೆಂಕಟಸ್ವಾಮಿ, 'ಕ್ರಾಂತಿ', ೫೭ಎ, ಸಾಯಿಲೋಟಸ್ ಬಡಾವಣೆ, ಸುಬ್ರಹ್ಮಣ್ಯಪುರ ಪೋಸ್ಟ್ ಬೆಂಗಳೂರು - ೫೬೦ ೦೬೧.
- ದೇಶ ಕುಲಕರ್ಣಿ, ೧೯೨, ಮಾಗಡಿ ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು - ೫೬೦ ೦೪೦.
- ಡಾ. ಯು.ಆರ್. ಅನಂತಮೂರ್ತಿ, ೪೯೮, ೬ನೇ 'ಎ' ಮೈನ್, ಹೆಚ್.ಐ.ಜಿ. ಕಾಲೋನಿ, ಆರ್.ಎಂ.ವಿ. ೨ನೇ ಸ್ಟೇಜ್, ಬೆಂಗಳೂರು - ೫೬೦ ೦೯೪.
- ಸತ್ಯನಾರಾಯಣರಾವ್ ಅಣತಿ, 'ರಚನ', ೨ನೇ ಕ್ರಾಸ್, ಹೊಸಮನೆ ಚರ್ಚ್ ಬಳಿ, ಶರಾವತಿ ನಗರ, ಶಿವಮೊಗ್ಗ - ೫೭೭ ೨೦೧.
- ಜಯಶ್ರೀ ಕೆ.ಸಿ., 'ಸಿರಿ ಸಂಪಿಗೆ', ನಂ. ೪೪, ೧ನೇ ಮೇನ್, ೪ನೇ ಬ್ಲಾಕ್, ಬನಶಂಕರಿ ೩ನೇ ಸ್ಟೇಜ್, ಬೆಂಗಳೂರು - ೫೬೦ ೦೮೫.
- ಜೆ.ಪಿ. ಬಸವರಾಜು, ಪ್ರಜಾವಾಣಿ, ನಂ. ೭೫, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು - ೫೬೦ ೦೦೧.
- ಬಿ.ಆರ್. ಪೋಲೀಸ್ ಪಾಟೀಲ, ವಾತ್ಸಲ್ಯ ವಿಚಾರ ವೇದಿಕೆ, ಬನಹಟ್ಟಿ, ಬಾಗಲಕೋಟೆ ಜಿಲ್ಲೆ.
- ವಿಶ್ವನಾಥ ಜಿ.ಎಸ್., ನಂ. ೬೬೬, ೮ನೇ ಮೇನ್, ೬ನೇ ಕ್ರಾಸ್, ವಿಜಯನಗರ, ಬೆಂಗಳೂರು - ೪೦.
- ಡಾ. ಪಂಚಾಕ್ಷರಪ್ಪ, 'ಪ್ರತಿಮಾ', ೧೬೪೯/೧೨, ತರಳಬಾಳು ಬಡಾವಣೆ, ದಾವಣಗೆರೆ - ೫೭೭ ೦೦೪.



ಈ ಸಂಚಿಕೆಯಲ್ಲಿ...

ಸಂಪಾದಕನ ಟಿಪ್ಪಣಿ....



ಬಸವನ ನಡೆ ಪರುಷ, ನುಡಿ ಪರುಷ, ದೃಷ್ಟಿ ಪರುಷ
ಹಸ್ತ ಪರುಷ, ಮನ ಪರುಷ, ತನು ಮನ ಧನವ
ಗುರುಲಿಂಗಜಂಗಮಕ್ಕೆ ಸವೆಸುವಾತ ಬಸವಣ್ಣ
ಬಸವಣ್ಣನ ನೆನೆವುದೇ ಪರಮ ಕಲ್ಯಾಣವೆನಗೆ...
- ಮಾಚಿದೇವ

ಬಸವ ಹಾಗೂ ಸಮಾಜವಾದ

ಸರ್ವರ ಒಳಿತನ್ನು ಬಯಸುವ ಸಮಾಜ ನಿರ್ಮಾಣ ಬಸವಣ್ಣನ ಗುರಿಯಾಗಿತ್ತು. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕನಸು ಬಸವಣ್ಣನದ್ದು. ಅವನ ಅಂತರಂಗದ ಮಹೋದ್ದೇಶವೂ ಅದೇ ಆಗಿತ್ತು. ಹೀಗಾಗಿ 'ಬಸವ ಮತ್ತು ಸಮಾಜವಾದ'ವೆಂದರೆ; ಬಸವನಷ್ಟೇ ಕಾಣುವುದಿಲ್ಲ. ಬಸವನ ಸಮಕಾಲೀನ ನೂರೆಂಟು ಜಾತಿ-ಜನಾಂಗಗಳ ಶರಣ ಸಂಕುಲವೂ ಸೇರಿಕೊಳ್ಳುತ್ತದೆ.

ಸಮಾಜವಾದದ ಬೇರುಗಳು ಹನ್ನೆರಡನೇ ಶತಮಾನದ ಶರಣ ಧರ್ಮದಲ್ಲಿ ಆಳವಾಗಿ ಇಳಿದಿವೆ. 'ಸಮಾಜವಾದ' ಎಂಬುದು ಒಂದು ಸಿದ್ಧಾಂತಕ್ಕೆ ಬದ್ಧವಾದದ್ದು. ಈ ಮುಖೇನ ಬದುಕಿನ ಕವಲುದಾರಿಯನ್ನು ಚಿಂತನಾಕ್ರಮದಲ್ಲಿ ಪೋಣಿಸುತ್ತ ಪ್ರಸ್ತುತ ಸನ್ನಿವೇಶದಲ್ಲಿ ವಿಶ್ವದೆಡೆಗೆ ಕೊರಳೆತ್ತಿ ನೋಡಬೇಕಾಗಿದೆ.

ಅಂದು ಬಸವ ಹಾಗೂ ಆತನ ಅನುಯಾಯಿಗಳು ಈ ಆಧುನಿಕ 'ಇಸಂ'ನ ಒಳಾರ್ಥದ ಬಗ್ಗೆ ತಲೆ ಕೆಡಿಸಿಕೊಂಡಿರಲಾರರು. ಇದಾಗ್ಯೂ ಸಮಾಜಮುಖೀ ಚಿಂತನೆಗಳು ಎಲ್ಲರ ಒಳಿತಿನ ದಾರಿ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕ - ಧಾರ್ಮಿಕ ಕ್ಷೇತ್ರದಲ್ಲಿ ಬದಲಾವಣೆ ತಂದ ಕ್ರಾಂತಿ ಪುರುಷ ಬಸವೇಶ್ವರರನ್ನು ಪ್ರೀತಿಯಿಂದ ಬಸವಣ್ಣ, ಬಸವನೆಂದು ಕರೆಯುತ್ತೇವೆ.



ಹುಟ್ಟಿನಲ್ಲಿ ಬ್ರಾಹ್ಮಣನಾದರೂ, ಜಾತಿಯೊಂದಿಗೇ ತಳುಕು ಹಾಕಿದ್ದ ಪುರೋಹಿತಶಾಹಿಯನ್ನು ಧಿಕ್ಕರಿಸಿ ಹೊಸ ಬದುಕೊಂದನ್ನು ಅಪ್ಪಿದ ಫಲವೇ ಶರಣ ಸಂಸ್ಕೃತಿ. ಶರಣನೆಂಬುದು ಜಾತಿ ಸೂಚಕವಲ್ಲ; ಅದು ಮನುಷ್ಯರೆಲ್ಲ ಒಂದೇ ಎಂದು ಹೇಳುವ 'ಪದ' ಪ್ರಯೋಗ. ಅದಕ್ಕೂ ಮಿಗಿಲಾಗಿ ಶರಣನೆಂಬುದು ಸಕಲರಿಗೂ ಅನ್ವಯವಾಗುವಂತಾದ್ದು. ಶರಣನೆಂಬುದು ಜಾತಿಯಲ್ಲವೆಂದು ಒಪ್ಪುವುದಾದರೆ ಜಾತಿ ವ್ಯವಸ್ಥೆ ಹಿಂದೂ ಸಮಾಜಕ್ಕೆ ಅಂಟಿದ ಅಂಟು ರೋಗ, ಇದೊಂದು ಕಳಂಕ.

ಲಿಂಗಭೇದವಿಲ್ಲದೆ, ಮೇಲು - ಕೀಳು ಎಂದು ತಿಳಿಯದೆ ಸಕಲರೂ ಒಂದೇ ಎಂದು ಸಾರಿದ್ದು ಶರಣ ಧರ್ಮ. ಇದರ ಮೂಲ ಪುರುಷ ವಿಚಾರವಾದಿಯೂ ಆದ ಬಸವಣ್ಣ. ಸ್ವಾತಂತ್ರ್ಯ ಸಮಾನತೆಗಳ ಆಧಾರದ ಮೇಲೆ ಸಕಲಜನ

ಕಲ್ಯಾಣವನ್ನು ಸಾಧಿಸುವುದು; ಹಾಗೂ ವ್ಯಕ್ತಿ ಸ್ವಾತಂತ್ರ್ಯ, ನ್ಯಾಯಗಳು ಸಮಾಜವಾದದ ತಿರುಳುಗಳು ಎಂದು ಬಸವಣ್ಣ ತಿಳಿದಿದ್ದ.

ಎಲ್ಲರ ಒಳಿತಿನ ಸಮಾಜದ ನಿರ್ಮಾಣವೇ ಬಸವಣ್ಣನವರ ಬಾಳಿನ ಗುರಿ; ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವುದು ಆ ಸಮಾಜದ ಮಹತ್ವದ ಉದ್ದೇಶ. ನೈತಿಕ ಶಕ್ತಿಯ ಮೂಲಕ ಬಸವಣ್ಣ ಸಮಾನತೆಗೆ ಶ್ರಮಿಸಿದ ಕಾರಣಕ್ಕೆ ಅದು ಮಹತ್ವ ಪಡೆಯಿತು. ಶತಮಾನಗಳಿಂದ ಬೇರೂರಿದ್ದ ಮೌಢ್ಯತೆ ಹಾಗೆ ಹಿಡಿದದ್ದು ಅಸಮಾನತೆ - ಅಸ್ಪೃಶ್ಯತೆ ನಿರ್ಮೂಲನೆ, ಸ್ತ್ರೀ-ಪುರುಷ ಭೇದ ತಿಳಿಸಿದ್ದು ಬಸವಣ್ಣನ ಮಹತ್ವದ ಸಾಧನೆ. ಹೀಗಾಗಿ ಬಸವಣ್ಣ ಜಗತ್ತಿನ ಪ್ರಪ್ರಥಮ ಸಮಾಜವಾದಿ ಸಹಾ!

ವಾಸ್ತವದರಿವಿನಲ್ಲಿ ನಿಂತು ಯೋಚಿಸಿದರೆ ಬಸವಣ್ಣ ಮಾಡಿದ ಸಾಮಾಜಿಕ-ಧಾರ್ಮಿಕ-ರಾಜಕೀಯ ಸುಧಾರಣೆಗಳು ಜಗತ್ತಿನ ಎಲ್ಲೆಡೆ ತಲುಪಲು ಸಾಧ್ಯವಾಗಲಿಲ್ಲ ಎಂಬುದು ಖೇದದ ಸಂಗತಿ. ಬೌದ್ಧ ಧರ್ಮ ವಿಶ್ವದೆಲ್ಲೆಡೆ ಪ್ರಸಾರವಾಗಲು ಬೌದ್ಧ ಭಿಕ್ಕುಗಳು ಕಾರಣರಾದರೂ ಭಾರತದಿಂದ ಮೂಲಬೇರು ಕಿತ್ತುಹೋಗಲು ಹಿಂದೂ ಪುರೋಹಿತಶಾಹಿ ಕಾರಣ. ಸಮಾನತೆ ಪ್ರೀತಿ ವಿಶ್ವಾಸಗಳು ಜಗತ್ತಿನ ಯಾವುದೇ ಮೂಲೆಯಲ್ಲಿ ಟಿಸಿಲೊಡೆದರೂ ಅವು ಸರ್ವವೇದ್ಯ. ೨೧ನೇ ಶತಮಾನ ಮುಖ್ಯವಾಗಿ ವಿಜ್ಞಾನದ ಯುಗ. ವಿಜ್ಞಾನ ಎಂಬುದು ಪ್ರಯೋಗಗಳಿಂದ ಫಲಿತಾಂಶಗೊಂಡು ಸಾಧನೆಗೊಂಡ ವೈಜ್ಞಾನಿಕ ನೆಲೆಗಟ್ಟು. ಗಣಿತ ಲೆಕ್ಕಾಚಾರದಲ್ಲಿ + x + = + ಆಗಬೇಕೇ ವಿನಃ – x + = + ಆಗಲು ಸಾಧ್ಯವಿಲ್ಲ. ಇದು '–' ಆದಾಗಲೇ ಅದಕ್ಕೊಂದು ಪರಿಪೂರ್ಣತೆ. ಹಾಗೇ ವಿಚಾರಗಳು ಬೆಳೆಯಲು ವಿಜ್ಞಾನ 'ದೀವಿಗೆ'ಯಾದಂತೆ; ಜಾತಿ-ಧರ್ಮಗಳು ಈ ನೆಲದಲ್ಲಿ ನಶಿಸಿ ಹೋಗಬೇಕು. ಇಂದು ಜಾತಿಯೇ ಧರ್ಮವಾಗಿ ಅದು ಮನುಷ್ಯನನ್ನು ಪೆಡಂಭೂತವಾಗಿ ಕಾಡತೊಡಗಿದೆ. ಧಾರ್ಮಿಕ ಮೂಲಭೂತವಾದದ ಮುಖೇನ 'ಜನಪ್ರೀತಿ' ಮಾಯವಾಗಿ ದ್ವೇಷದ ದಳ್ಳುರಿ ಮನೆ ಮಾಡಿಕೊಂಡಿದೆ. ಧರ್ಮ ಎಂಬುದು 'ಅಫೀಮು' ಎಂದು ಮಾರ್ಕ್ಸ್ ಹೇಳುವಾಗ, ಅದರ ಅಧಃಪತನ ಅದು ಹೊರಟ ಮಾರ್ಗ ಏನೆಂದು ಯೋಚಿಸಬೇಕು. ಯಾವುದೇ ಧರ್ಮವೂ 'ಅಫೀಮು' ಅಲ್ಲ. ಎಲ್ಲಾ ಧರ್ಮಗಳ ಸಾರವೂ ಒಂದೇ; - ಅದು ಮನುಷ್ಯನ ಏಳಿಗೆಗೆ ಇರುವ ಬದುಕಿನ ಮಾರ್ಗ. ಆದರೆ ಇದನ್ನಿಂದು ನಾವು ಒಪ್ಪುವ ಸ್ಥಿತಿಯಲ್ಲಿದ್ದೇವೆಯೆ?

ಈ ಮುಖೇನ ಇಂದಿನ ವಾಸ್ತವದಲ್ಲಿ ಜನಾಪೇಕ್ಷೆಗಳು ಏನಾಗಿವೆ? ಪ್ರಾಣಿ-ಪಕ್ಷಿಗಳಿಗಿಂತಲೂ ಭಿನ್ನನೆಂದುಕೊಂಡ ಮನುಷ್ಯ ವರ್ತನೆ ಏನಾಗಿಬಿಟ್ಟಿದೆ? ಪ್ರಶ್ನೆಗಳ ನಡುವೆಯೇ ಸಮಾಜವಾದದ ಬೇರುಗಳ ಹುಡುಕಾಟವೂ ನಡೆಯುತ್ತದೆ. ಸ್ವಾತಂತ್ರ್ಯ, ಸಮಾನತೆಗಳ ಆಧಾರದ ಮೇಲೆ ಸಕಲ ಜನ ಕಲ್ಯಾಣವನ್ನು ಸಾಧಿಸುವ ಮಾರ್ಗ ಜಗತ್ತಿನ Socialism ಎಂದು ಪದ ಪ್ರಯೋಗಗೊಂಡು ೧೮ನೇ ಶತಮಾನದ ಆರಂಭದಲ್ಲಿ ಚಾಲ್ತಿಗೆ ಬಂತು ಎಂಬುದು ಇತಿಹಾಸ.

ಫ್ರಾನ್ಸಿನ ಮಹಾಕ್ರಾಂತಿ ಹಾಗೂ ಕೈಗಾರಿಕಾ ಕ್ರಾಂತಿ ಸಮಾಜವಾದದ ಉಗಮಕ್ಕೆ ಕಾರಣವಾದರೂ, ನೂರಾರು ಚಿಂತಕರ ಅಭಿಪ್ರಾಯ ಕ್ರೋಢೀಕರಿಸಿ ಹೇಳುವುದಾದರೆ - ಈ ನೆಲದಲ್ಲಿ ಬಸವಣ್ಣ ೧೨ನೇ ಶತಮಾನದಲ್ಲಿ ಸಾರಿದ್ದ ಸಮಾನತೆ ಹಾಗೂ ವ್ಯಕ್ತಿ ಸ್ವಾತಂತ್ರ್ಯ ಪ್ರಮುಖವಾದದ್ದು. ಭಾರತದ ಸಂದರ್ಭದಲ್ಲಿ ಸಮಾಜವಾದಕ್ಕೆ ಲೋಹಿಯಾ - ಆಚಾರ್ಯ ನರೇಂದ್ರದೇವರನ್ನು ಮಹತ್ತಾಗಿ ಗುರ್ತಿಸಬಹುದಾದರೂ, ಸಮಾಜವಾದದ ಟಿಸಿಲುಗಳು ಸ್ವಾತಂತ್ರ್ಯ ಪೂರ್ವದಲ್ಲೇ ಗಾಂಧೀಜಿ ನಡೆಸಿದ ಹೋರಾಟದಲ್ಲೂ ಕಾಣಬರುತ್ತಿದ್ದವು. ಗಾಂಧಿ ಎಂದೂ ಜಾತಿಗೆ ಅಂಟಿಕೊಂಡು ಚಳವಳಿ ನೇತಾರರಾಗಲಿಲ್ಲ. ಇವರ ಜತೆ ರಾಜಕಾರಣದಲ್ಲಿ ಭಿನ್ನಾಭಿಪ್ರಾಯವಿದ್ದವರೂ ಒಪ್ಪಬಹುದಾದ ವಿಚಾರಗಳು ಸಾಕಷ್ಟಿದ್ದವು ಅನ್ನುವುದು ಅಭ್ಯಾಸ ಯೋಗ್ಯ.

ಗಾಂಧೀ ಜೊತೆಗೆ ಕೃಪಲಾನಿ, ಆಚಾರ್ಯ ವಿನೋಬಾ ಭಾವೆ, ತಿಲಕ್, ನೆಹರೂ, ಜೆ.ಪಿ. ಮುಂತಾದವರು ಭಾರತೀಯ ಸಂಸ್ಕೃತಿಯ ಮೂಲಭೂತ ಮೌಲ್ಯಗಳನ್ನು ಸಮಾಜವಾದ

ವಿರೋಧಿಸಬಾರದೆಂದು ಹೊರಟವರು. ಹೀಗಾಗಿ ಎಲ್ಲಾ ಚಿಂತಕರ ಒಂದುಗೂಡುವಿಕೆ ಸಮಾಜದ ತಿರುಳು ಹನ್ನೆರಡನೇ ಶತಮಾನದಲ್ಲೇ ಇತ್ತು ಎನ್ನುವುದು ಒಪ್ಪಬೇಕಾದ್ದೇ.

ಭಾರತೀಯ ಇತಿಹಾಸ ಓದಿದವರಿಗೆ ಇಲ್ಲಿನ ಜಾತಿ - ವರ್ಣ ಭೇದಗಳು ಅಸಮಾನತೆಯ, ಶೋಷಣೆಯ ಅನ್ಯಾಯದ, ಅಸಹಕಾರದ ಮೂಲ ಕಾರಣಗಳೆಂದು ತಿಳಿಯುತ್ತದೆ. ಜಾತಿ ನಿರ್ಮೂಲನೆ ಬಸವಣ್ಣನವರ ಸಾಮಾಜಿಕ ಕ್ರಾಂತಿಯ ಮೂಲ ಉದ್ದೇಶ. ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ಲಿಂಗೋಪಾಸನೆಯ ಬೆಳಕಿನಲ್ಲಿ ಸರ್ವಸಮಾನತೆಯನ್ನು ಸರ್ವೋದಯವನ್ನೂ ಏಕ ಕಾಲಕ್ಕೆ ಸಾಧಿಸಬೇಕೆಂಬ ಹಂಬಲದಿಂದ ಅವರು ಲಿಂಗಧಾರಣೆಗೆ ಮಹತ್ವ ಕೊಟ್ಟರು.

ಬಸವಣ್ಣನ ದೃಷ್ಟಿಯಲ್ಲಿ ಲಿಂಗ - ಶಾಂತಿ, ಸಹಕಾರ, ಸ್ವಾತಂತ್ರ್ಯ, ಸಮಾನತಾ ತತ್ತ್ವದ ಕುರುಹು. ಮನವನ್ನು ಲಿಂಗಕ್ಕೆ - ತನುವನ್ನು ಗುರುವಿಗೆ, ಧನವನ್ನು ಜಂಗಮಕ್ಕೆ ನೀಡಬೇಕೆಂಬುದು ಶರಣತತ್ವ ಹೇಳುತ್ತದೆ.

ಈ ಶರಣ ತತ್ವಕ್ಕೆ ಬದ್ಧರಾಗಿ ಬಸವಣ್ಣನ ಆದರ್ಶಕ್ಕೆ ಅನುಯಾಯಿಗಳಾದವರು ಎಲ್ಲಾ ಜಾತಿ - ಜನಾಂಗದವರೂ. ಹೀಗಾಗಿ ದೇಶದ ವಿವಿಧ ದಿಕ್ಕುಗಳಿಂದ ಬಂದ ಶರಣರು ಬಸವಣ್ಣನ ಅನುಯಾಯಿಗಳಾದರು. ಇವರನ್ನೆಲ್ಲ ಒಂದೇ ಸೂರಿನಡಿ ಬಸವಣ್ಣ ತಂದದ್ದು ದೊಡ್ಡ ಸಾಧನೆ. ಅನುಭವ ಮಂಟಪ - ವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರಜಾ ಪ್ರಭುತ್ವ ವ್ಯವಸ್ಥೆಯ ಪ್ರತೀಕ. ಬಸವಣ್ಣ ಇಲ್ಲಿ ಎಲ್ಲಾ ಜಾತಿ - ಜನಾಂಗದವರನ್ನೂ ಕಲೆ ಹಾಕಿ ಅವರ ಬೌದ್ಧಿಕ ಬೆಳವಣಿಗೆಗೆ ಹೇಗೆ ಕಾರಣನಾದನೋ, ಹಾಗೇ ಅವರ ವೈಯಕ್ತಿಕ ಬದುಕನ್ನು ಕಾಯಕ ಮುಖೇನ ಹುಡುಕುವಂತೆ ಮಾಡಿದ. ಕಾಯಕ ಹಾಗೂ ದಾಸೋಹ ಕಲ್ಪನೆ ಬಸವಣ್ಣ ನೀಡಿದ ಮಹತ್ವದ ಕೊಡುಗೆ. ದುಡಿದು ತಿಂದವನೇ ಶ್ರೇಷ್ಠನಾಗುವ ಪರಿ ವಚನಕಾರರಲ್ಲಿ ಕಾಣಲು ಬಸವಣ್ಣ ಹೇಗೆ ಕಾರಣನೋ ಅವನ ಜತೆ ಕೈಗೂಡಿಸಿದ ಎಲ್ಲ ಶರಣರದ್ದೂ ಅಷ್ಟೇ ಪಾಲಿದೆ.

ಬಸವಣ್ಣ ಹೇಳೋ ಶರಣರು ಪ್ರಪಂಚದ ಮೊಟ್ಟಮೊದಲ ಸಮಾಜವಾದಿಗಳು. ಇಲ್ಲಿ ಆಯ್ದಕ್ಕಿ ಮಾರಯ್ಯ - ಲಕ್ಕಮ್ಮ ಇಂದಿಗೆ, ನಾಳೆಗೆಂದು ಕೂಡಿಡುವುದೇ ಕಾಯಕ ಕಷ್ಟವಾಯಿತು.

> "ಹೊನ್ನಿನೊಳಗೊಂದೊರೆಯ; ಸೀರೆಯೊಳಗೊಂದೆಳೆಯ
> ಅನ್ನದೊಳಗೊಂದಗುಳ
> ಇಂದಿಂಗೆ ನಾಳಿಂಗೆ, ಬೇಕೆಂದೆನಾದರೆ
> ನಿಮ್ಮಾಣೆ, ನಿಮ್ಮ ಪುರಾತನರಾಣೆ !"

ಎಂಬ ಮಾತಲ್ಲಿ ವಾಸ್ತವ ಸಮಾಜವಾದದ ತಿರುಳಿದೆ. ಕಣ್ಣೆದುರೇ ಲಕ್ಷೋಪಲಕ್ಷ ಜನ ಹಸಿವಿನಿಂದಿರುವಾಗ ಮೃಷ್ಟಾನ್ನ ಭೋಜನಕ್ಕಾಗಿ ಹಣ ಸಂಗ್ರಹಿಸುವುದು ತಪ್ಪಾಗುತ್ತದೆ. ಅಷ್ಟೇ ಏಕೆ ಈ ಮಾತು ಕಾಳು-ಕಡ್ಡಿ, ಬಟ್ಟೆ-ಬರೆಗಳಿಗೂ ಅನ್ವಯವಾಗುತ್ತದೆ.

ಬೌದ್ಧಿಕ ಮಟ್ಟದಲ್ಲಿ ಮೇಲ್ಮೈ ಸಾಧಿಸಿರುವ ಮನುಷ್ಯ ಕೆಲವೊಮ್ಮೆ ಪ್ರಾಣಿ-ಪಕ್ಷಿಗಳಿಗಿಂತ ಕಡೆ. ಪ್ರಾಣಿ-ಪಕ್ಷಿ ಆ ಹೊತ್ತಿನ ಹೊಟ್ಟೆ ತುಂಬಿಕೊಳ್ಳುವಲ್ಲಿ ತೃಪ್ತಿಪಡೆದರೆ; ಮನುಷ್ಯ ಕೂಡಿಟ್ಟು ಕಳೆದುಕೊಳ್ಳುವುದರಲ್ಲಿ ಪಶ್ಚಾತ್ತಾಪ ಪಡುತ್ತಾನೆ.

ಕಾಗೆ ಒಂದಗುಳ ಕಂಡಡೆ
ಕರೆಯದೇ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನ್ನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ,
ಕಾಗೆಕೋಳಿಯಿಂದ ಕರಕಷ್ಟ ಕೂಡಲಸಂಗಮದೇವಾ.

ಪ್ರಾಣಿ ಪಕ್ಷಿಗಳ ಸ್ವಭಾವವನ್ನು ಕುರಿತು ಅಧ್ಯಯನ ಮಾಡಿದರೆ ಸಮಾಜವಾದದ ಪ್ರವೃತ್ತಿ ಸಹಜವೆಂಬುದು ನಮಗೆ ತಿಳಿದು ಬರುತ್ತದೆ. ಸಮಾಜವನ್ನು ಕಟ್ಟುವ ಪರಿಕಲ್ಪನೆ ಬಹುಶಃ ಈ ಪ್ರಾಣಿ ಪಕ್ಷಿಗಳಿಂದಲೇ ಮಾನವ ಕಲಿತಿರಬೇಕು. ಇರುವೆಗಳ ಸಾಮಾಜಿಕ ಜೀವನ ವಿಸ್ಮಯವನ್ನುಂಟುಮಾಡುವಂತದ್ದು. ಅವು ಪರಸ್ಪರ ಸಹಕಾರದಿಂದ ಆಹಾರವನ್ನು ಶೇಖರಿಸಿ ತಮ್ಮ ಗುಂಪಿನ ಎಲ್ಲರಿಗೂ ಮುಟ್ಟುವಂತೆ ಮಾಡುತ್ತವೆ. ಯಾವುದೋ ಒಂದು ಮಹತ್ಕಾರ್ಯವನ್ನು ಸಾಧಿಸಿ ಹೊರಟಂತೆ ಸಾಲುಸಾಲಾಗಿ ಇರುವೆಗಳ ದಂಡು ಹೊರಟಿರುತ್ತದೆ. ಸಕ್ಕರೆಯ ಒಂದು ಚೂರು ನೆಲದ ಮೇಲೆ ಬಿದ್ದರೆ ಅದೆಲ್ಲಿಂದಲೋ ಪ್ರತ್ಯಕ್ಷವಾಗುವ ಇರುವೆಗಳ ವಾಸನಾಗ್ರಹಿಕೆಯ ಬಗ್ಗೆ ಅತ್ಯಾಶ್ಚರ್ಯವುಂಟಾಗುತ್ತದೆ.

ಹಾಗೆಯೇ ಕಾಗೆ ತನಗೆ ಸಿಕ್ಕ ಆಹಾರವನ್ನು ತಾನೆಂದೂ ಒಂದೇ ತಿನ್ನುವುದಿಲ್ಲ. ಕೂಗಿ ತನ್ನ ಬಳಗವನ್ನೆಲ್ಲ ಕರೆಯುತ್ತದೆ. ಕೋಳಿ ಕಾಳುಗಳನ್ನು ಕಂಡಾಗ ಗೊಟರು ಹಾಕಿ ತನ್ನ ಕುಲದವರನ್ನೆಲ್ಲ ಕರೆಯುವುದನ್ನು ನಾವು ನೋಡುತ್ತೇವೆ. ಪ್ರಾಣಿಗಳಲ್ಲಿಯೇ ಈ ತರಹದ ವಿಶಾಲ ಮನೋಭಾವ ಭಾವನೆ ಇರುವಾಗ ಸೃಷ್ಟಿಗೆ ಶಿಖರಪ್ರಾಯವಾಗಿರುವ ಮಾನವನಲ್ಲಿ ಈ ಭಾವ ತಲೆದೋರದಿದ್ದರೆ ಅವನು ಪ್ರಾಣಿಗಳಿಗಿಂತಲೂ ಹೀನನಾಗುತ್ತಾನೆ.

ಈ ಹಿನ್ನೆಲೆಯಲ್ಲಿ ಮಾನವನೂ ಕೂಡ ದಾನ ಧರ್ಮದ ಪರಿಕಲ್ಪನೆಯನ್ನು ಸಹಕಾರ ತತ್ವದ ಮೂಲಕ ಮನಸ್ಸಿಗೆ ತಂದುಕೊಂಡಿರಬೇಕು. ಕೆಲವರಲ್ಲಾದರೂ ಈ ಗುಣವನ್ನು ಕಾಣಬಹುದು. ಬಸವಣ್ಣನವರ ದಾಸೋಹದ ಪರಿಕಲ್ಪನೆ ಈ ಹಿನ್ನೆಲೆಯದ್ದು. ದಾನದಲ್ಲಿ ನಾನು ಕೊಡುತ್ತೇನೆಂಬ ಅಹಂಕಾರ ಇರಬಾರದು. ಅದು ವಿನಮ್ರವಾಗಿ ಅರ್ಪಿಸುವ ಸೇವಾಭಾವನೆಯಾಗಬೇಕು. ಕಾಯಕದಿಂದ ದುಡಿದದ್ದನ್ನು ದಾಸೋಹದ ಮೂಲಕ ಹಂಚುವ ಕ್ರಿಯೆಯನ್ನೂ ಕೂಡ ಈ ವಚನದ ಮೂಲಕ ಪರಿಭಾವಿಸಬಹುದು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಪರಿ ಈ ಮುಖೇನವೂ ಕೂಡ ಅರ್ಥೈಸಬಹುದಾಗಿದೆ.

ಬಸವಣ್ಣನವರ ಈ ಮಾದರಿಯನ್ನನುಸರಿಸಿ ಇಪ್ಪತ್ತನೆ ಶತಮಾನದಲ್ಲಿ ಗಾಂಧೀಜಿಯವರು ಸಮಾಜವಾದವನ್ನು ಪ್ರತಿಪಾದಿಸಿದರು. ವಿನೋಬಾಭಾವೆಯವರು ಭೂದಾನ, ಶ್ರಮದಾನ ಮುಂತಾದ ಚಳುವಳಿಗಳ ಮೂಲಕ ಉಳ್ಳವರಿಂದ ದಾನ ಪಡೆದು ಇಲ್ಲದವರಿಗೆ ಹಂಚಿದರು. ಮಾನವೀಯ ಮೌಲ್ಯಗಳಿಲ್ಲದ ಆಧ್ಯಾತ್ಮದ ಹಿನ್ನೆಲೆಯಿಲ್ಲದ ಸಮಾಜವಾದ ಶಾಶ್ವತವಾಗಿ ನೆಲೆಯೂರಲು ಸಾಧ್ಯವಿಲ್ಲ. ಎಂಬ ಅಭಿಪ್ರಾಯ ಈ ಶತಮಾನದ ಅಂತ್ಯದಲ್ಲಿ ನಿಜವಾಗಿದೆ ಎಂಬುದನ್ನು ಹಲವರು ದಾಖಲಿಸಿದ್ದಾರೆ. ಯಾವುದೇ ವಾದ ಯಶಸ್ವಿಯಾಗುವುದು ಜನಪರ ವಿಚಾರಗಳನ್ನು ಮಾನವೀಯ ನೆಲೆಯಲ್ಲಿ ಕಂಡಾಗ ಮಾತ್ರ ಸಾಧ್ಯ. ಆದರೆ, ಸಮಾಜವಾದದ ಸೋಲಿನ ಬಗ್ಗೆ ಮೌಲಿಕ ಚರ್ಚೆಗಳಾಗುವುದೊಳಿತು.

ಯಾವುದೇ ವ್ಯಕ್ತಿ ಕಷ್ಟದಲ್ಲಿದ್ದಾಗ ಅವನಿಗೆ ಬರಿ ಅನುಕಂಪ ತೋರಿಸಿದರೆ ಸಾಲದು. ಅವನು ಬಡವನಾಗಿದ್ದರೆ ಅವನ ಬಡತನದ ಹೊಟ್ಟೆ ತುಂಬುವುದಿಲ್ಲ. ಅವನ ಬರಿಮೈ ಮುಚ್ಚುವುದಿಲ್ಲ. ಅಂಥವನಿಗೆ ಮಾನವೀಯತೆ ತೋರುವ ಮೂಲಕ ಬದುಕಿಗಿಷ್ಟು ಆಶ್ರಯ ನೀಡಬೇಕಾಗುತ್ತದೆ. ಜತೆಗೆ ದಾನ-ಧರ್ಮ ಮಾಡುವುದರಲ್ಲಿ ಹೆಚ್ಚುಗಾರಿಕೆಯಿದೆ. ಸಹಾಯ - ಸಹಕಾರ ತೋರುವುದರಲ್ಲಿದೆ.

ಬಸವಣ್ಣ ವಿಚಾರವಾದಿಯೂ ಸಹ. ತನ್ನ ಚಿಂತನಾಕ್ರಮದಿಂದ ಎಲ್ಲರನ್ನೂ ಒಂದೇ ಎಂದು ಭಾವಿಸಿ ಮೌಢ್ಯತೆ ವಿರುದ್ಧ ಹೋರಾಡಲು ಕರೆ ನೀಡಿದನು. ಶರಣ ಶರಣೆಯರೆಲ್ಲ ವಾಸ್ತವದ ಅರಿವಿನಿಂದ, ಕಾಯಕದಿಂದ ಜನರಿಗೆ ಮಾರ್ಗದರ್ಶನ ನೀಡಬೇಕೆಂದು ಆಶಿಸಿದ. ಹಾಗೇ ವೈಚಾರಿಕ ವಿಶ್ಲೇಷಣೆ ಮೂಲಕ ಜನರನ್ನು ತಿದ್ದಿದ.

> **ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಭೋ**
> **ಸತ್ಯವ ನುಡಿವುದೇ ದೇವಲೋಕ;**
> **ಮಿಥ್ಯವ ನುಡಿವುದೇ ಮರ್ತ್ಯಲೋಕ;**
> **ಆಚಾರವೇ ಸ್ವರ್ಗ, ಅನಾಚಾರವೇ ನರಕ -**
> **ಕೂಡಲಸಂಗಮದೇವ ನೀವೇ ಪ್ರಮಾಣು**

ಎನ್ನುವಲ್ಲಿ ಸ್ವರ್ಗ ಮರ್ತ್ಯಲೋಕಗಳ ಸ್ವರೂಪ ಭೇದಗಳು ಒಡಮೂಡಿವೆ.

ಹಾಗೇ -

> **ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ**
> **ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ**
> **ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ -**

ಈ ಮಾತುಗಳು ನಮ್ಮನ್ನು ಕಾರ್ಯತತ್ಪರರನ್ನಾಗಿಸುತ್ತವೆ. ಜೀವನ ಮೌಲ್ಯಗಳ ಕಡೆ ತಿರುಗಿಸುತ್ತವೆ.

ಹೀಗಾಗಿ ಚಿಂತಕನೊಬ್ಬ ಹೇಳಿದ -

> **"ಮೌಲ್ಯದ ಕಾಳುಗಳ ಬಿತ್ತೋಣ**
> **ನೀತಿಯ ಮರಗಳ ಬೆಳೆಸೋಣ"**

ಮಾತು ವಚನಕಾರರ ಬದುಕಿನ ಮೂಲಕ ಸಮಾಜವಾದವನ್ನು ಗುರುತಿಸುವ ಹಿನ್ನೆಲೆಯಲ್ಲಿ ಮೌಲಿಕವಾದುದು. ಬಸವ ಹಾಗೂ ಆತನ ಅನುಯಾಯಿ ಶರಣರು ಕಂಡ ಕನಸಿನ ಸಮಾಜವಾದಕ್ಕೆ ನಮ್ಮ ಕಾಲವೂ ಮುಖಾಮುಖಿ ಆದದ್ದು; ಬಸವ ಜೀವಂತವಾಗಿದ್ದಾನೆ, ಅವನ ಕಾಯಕ ಇಂದೂ ನಮ್ಮನ್ನು ನಡೆಸುತ್ತದೆ ಎಂದೇಳಿ ನನ್ನ ಮಾತು ಮುಗಿಸುವೆ.

(ಬಸವ ಸಮಿತಿ, ಬೆಂಗಳೂರು ಆಶ್ರಯದಲ್ಲಿ ನಡೆದ ಅರಿವಿನ ಮನೆಯ ತಿಂಗಳ ವಚನ ಚಿಂತನೆ ಕಾರ್ಯಕ್ರಮದಲ್ಲಿ ಮಂಡಿಸಿದ ಟಿಪ್ಪಣಿ. ಲೇಖನಕ್ಕೆ ಪೂರಕ ಸಾಮಗ್ರಿ ಒದಗಿಸಿದ ಪ್ರೊ. ಬಿ. ವಿರುಪಾಕ್ಷಪ್ಪ ಅವರಿಗೆ ಕೃತಜ್ಞತೆಗಳು.)

ದಿನಾಂಕ: ೨೫.೦೭.೨೦೦೪


ಸಂಪಾದಕ

ಬಾದಾಮಿಯಿಂದ ಬೆಂಗಳೂರಿಗೆ ಬಂದವರು

- ಬಿ.ಎಸ್. ವೆಂಕಟಲಕ್ಷ್ಮಿ

ಕೆಲವು ಜಾಗಗಳು ನಮ್ಮ ಪಾಲಿಗೆ ಬೋಧಿವೃಕ್ಷಗಳಂತೆ. ಯಾವುದೇ ಸ್ಥಳಕ್ಕೆ ಭೇಟಿ ನೀಡಿದ ಕೂಡಲೇ ಯೋಗ್ಯತೆಯನ್ನೂ ಮೀರಿ ತಟಕ್ಕನೆ ಬುದ್ಧಿವಂತರಾಗಿ ಬಿಡೋದು ಸಾಧ್ಯವಿಲ್ಲ ಅಂತ ಗೊತ್ತಿದ್ದರೂ, ನಮ್ಮನ್ನು ಸ್ವಲ್ಪ ಮಟ್ಟಿಗೆ ಎತ್ತರಕ್ಕೆ ಬೆಳೆಸಬಲ್ಲ ಇಂಥ ಜಾಗಗಳು ನಮ್ಮನ್ನು ಆಗ್ಗಿಂದಾಗ್ಗೆ ತಮ್ಮಲ್ಲಿಗೆ ಬರಮಾಡಿಕೊಳ್ಳುತ್ತಲೇ ಇರುತ್ತವೆ. ಹೊಸ ಆಸೆಗಳನ್ನು ಒಡ್ಡುತ್ತವೆ. ಖಾಯಂ ಆಕರ್ಷಣೆಗಳಾಗಿ ಉಳಿದು ಬಿಡುತ್ತವೆ.

ಹಡಪದ್ ಮಾಸ್ತರ್‌ರ ಮೇಲ್ವಿಚಾರಣೆಯಲ್ಲಿದ್ದ ಕೆನ್ ಸ್ಕೂಲ್‌ಗೆ ಮತ್ತೆ ಮತ್ತೆ ಹೋಗಬೇಕು ಅಂತ ಅನ್ನಿಸುತ್ತಿದ್ದದ್ದು ಈ ಕಾರಣಗಳಿಗಾಗಿಯೇ. ನಿಮ್ಮಲ್ಲೂ ಎಷ್ಟೋ ಜನ ಈ ಶಾಲೆಗೆ ಒಂದಲ್ಲ ಒಂದು ಸಂದರ್ಭದಲ್ಲಿ ಹೋಗೇ ಇರ್ತೀರಿ. ಏಕೆಂದರೆ ಹಡಪದ್ ಇಲ್ಲಿ ಹುಡುಗರಿಗೆ, ಹುಡುಗಿಯರಿಗೆ ಡ್ರಾಯಿಂಗ್, ಪೈಂಟಿಂಗ್ ಇಂಥವನ್ನು ಕಲಿಸುತ್ತಿದ್ದರೂ, ಶಾಲೆಯನ್ನು ಅವರು ವಿಸ್ತರಿಸಿದ್ದು ಇನ್ನೂ ಅನೇಕ ಚಟುವಟಿಕೆಗಳಿಗೆ. ಹೊಸ ವಿಷಯಗಳೆಂದ ಕೂಡಲೇ ಹುರುಪಿನಿಂದ ಎದ್ದು ನಿಲ್ಲುತ್ತಿದ್ದ ಈ ಶಿಕ್ಷಕ ಇಲ್ಲಿ ಸಾಹಿತ್ಯದ ಪ್ರೋಗ್ರಾಂಗಳಿಗೆ ಅವಕಾಶ ಮಾಡಿಕೊಡುತಿದ್ದರು. ಸಂಗೀತ ಕಾರ್ಯಕ್ರಮಗಳಿಗೆ ಜಾಗ ಒದಗಿಸುತ್ತಿದ್ದರು. ಸಾರ್ವಜನಿಕರಿಗೆ ಒಳ್ಳೆಯದಾಗುತ್ತೆ ಅನ್ನಿಸಿದರೆ ಸಾಕು, ಅದೆಷ್ಟೋ ಸಭೆಗಳನ್ನು ತಾವೇ ಖುದ್ದಾಗಿ ನಿಂತು ಏರ್ಪಡಿಸುತ್ತಿದ್ದರು. ಅದಕ್ಕೇ ಈ ಸ್ಕೂಲು ಹಡಪದ್ ಅವರ ಕಾಲಕ್ಕೆ ಕೇವಲ ಒಂದು ಕಲಾ ಶಾಲೆ ಅಂತ ಮಾತ್ರ ಅನ್ನಿಸಿಕೊಳ್ಳಲಿಲ್ಲ. ಎಲ್ಲ ಸೂಕ್ಷ್ಮಮತಿಗಳ, ಸೃಜನಶೀಲರ ಕಾರ್ಯಕ್ಷೇತ್ರವಾಗಿ ಮಾರ್ಪಟ್ಟಿತ್ತು. ಶೇಷಾದ್ರಿಪುರದ ಕಾರ್ಪೊರೇಶನ್ ಮಾರ್ಕೆಟ್ಟಿಗೆ ಹೊಂದಿಕೊಂಡಂತಿರುವ ಜಾಗವೊಂದರಲ್ಲಿ ಹಡಪದ್ ಅಕ್ಷರಶಃ ಕಟ್ಟಿ ಬೆಳೆಸಿದ ಈ ಶಾಲೆಯಲ್ಲಿ ಇಕ್ಕಟ್ಟಾದ ಕೋಣೆಗಳು. ತೀರಾ ಸಾಧಾರಣ ಕುರ್ಚಿ ಮೇಜುಗಳು. ಆದರೆ ತಮ್ಮ ಸ್ಕೂಲಿಗೆ ಈ ಜಾಗ ಲಭ್ಯವಾದ ದಿನದಿಂದಲೂ, ಇಲ್ಲಿ ಕಟ್ಟಿಗೆ





ಕುರ್ಚಿಯೊಂದರ ಮೇಲೆ ಕೂತು ಹಡಪದ್ ಕಾಣಲು ತೊಡಗಿದ್ದು ರಂಗಿನ ಕನಸುಗಳನ್ನು. ಪಕ್ಕದಲ್ಲಿದ್ದ ಪಾರ್ಕ್‌ಗೆ ವಿಹಾರಕ್ಕೆಂದು ಬರೋ ಜನರು ಮಾಡುತ್ತಿದ್ದ ಗದ್ದಲ. ಹತ್ತಿರದಲ್ಲೇ ಇದ್ದ ರಸ್ತೆಗಳಲ್ಲಿ ಕಿವಿ ಕಿವುಡಾಗೋ ಹಾಗೆ ವಾಹನಗಳ ಸದ್ದು. ಆದರೆ ಇವೆಲ್ಲ ಹಡಪದ್‌ರ ಕನಸುಗಳ ಹೆಣಿಗೆಯನ್ನು ಎಂದೂ ಸಡಿಲಗೊಳಿಸಲೇ ಇಲ್ಲ. ಆಲೋಚನೆಗಳಿಗೆ ಅಡ್ಡಿಯನ್ನುಂಟು ಮಾಡಲೇ ಇಲ್ಲ.

ಒಂದು ರೀತಿಯಲ್ಲಿ ಕೆನ್ ಶಾಲೆ ಪುಟ್ಟ ಹುಡುಗನಾಗಿದ್ದಾಗ ಹಡಪದ್‌ರು ಬಿಜಾಪುರದ ಹತ್ತಿರದ ಬಾದಾಮಿಯ ಗುಹೆಗಳು, ಬಸದಿಗಳು ಇವುಗಳ ಮಧ್ಯೆ ಓಡಾಡುತ್ತ ತಮ್ಮಲ್ಲಿಯೇ ರೂಪಿಸಿಕೊಂಡಿದ್ದ ಯೋಜನೆಗಳ ಸಾಕ್ಷಾತ್ಕಾರ. ರುದ್ರಪ್ಪ ಮಲ್ಲಪ್ಪ ಹಡಪದ ಎಂಬ ಹೆಸರಿನ ಈ ಹುಡುಗ ಬೆಳಗಾಗುತ್ತಲೇ ಕಾಗದ, ಪೆನ್ಸಿಲ್, ಬಣ್ಣದ ಡಬ್ಬಿಗಳು ಇವನ್ನೆಲ್ಲ ತನ್ನ ಕೈಚೀಲಕ್ಕೆ ತುರುಕಿಕೊಂಡು ಹೊರಡುತ್ತಿದ್ದಂತೆಯೇ ಇವರಮ್ಮನಿಗೆ ಗೊತ್ತಾಗುತ್ತಿತ್ತಂತೆ, ಇನ್ನು ಮಗ ಬಸದಿಯತ್ತ ಹೊರಟ, ಸಂಜೆಯವರೆಗೂ ಇವನಿನ್ನು ಕಾಲ ಕಳೆಯೋದು. ಸುತ್ತಮುತ್ತಲಿನ ಗುಹೆಗಳಲ್ಲಿನ ಗೋಡೆಗಳ ಮೇಲಿರುವ ಚಿತ್ರಗಳನ್ನು ದಿಟ್ಟಿಸುತ್ತಾ ಅಂತ. ಹಡಪದ್ ಆ ಮನಮೋಹಕ ಆವರಣದಲ್ಲಿ ಡ್ರಾಯಿಂಗ್ ಶೀಟ್ ಹರಡಿಕೊಂಡು ಕೂರುತ್ತಿದ್ದರು. ಮೈಮರೆತು ಚಿತ್ರಗಳನ್ನು ರಚಿಸುತ್ತಿದ್ದರು. ಬೇಸರವಾದಾಗ ಐಹೊಳೆಯಲ್ಲಿನ ಗುಡಿಗಳಲ್ಲಿದ್ದ ನರಸಿಂಹಮೂರ್ತಿ, ಮೋಹಿನಿ ಭಸ್ಮಾಸುರ ಕೆತ್ತನೆಗಳನ್ನು ನೋಡುತ್ತಾ ಸ್ಫೂರ್ತಿ ಪಡೆಯುತ್ತಿದ್ದರು. ಸ್ವಲ್ಪ ಒರಟು ಸ್ವಭಾವದ ಇವರ ಅಪ್ಪನಿಗೆ ಮಗನ ಅಭಿಲಾಷೆಗಳನ್ನು, ಅಭಿರುಚಿಯನ್ನು ಅರ್ಥಮಾಡಿಕೊಳ್ಳುವಷ್ಟು ಸಹನೆ ಇರಲಿಲ್ಲ. ಇವರನ್ನು ಕಂಡಾಗಲೆಲ್ಲ ಅಪ್ಪನ ಮನಸ್ಸಿನಲ್ಲಿ ಮೊಳೆಯುತ್ತಿದ್ದ ಒಂದೇ ಸಂಗತಿ, ಹಿರೇ ಮಗನಾಗಿ ಇವ ಮನೇ ಜವಾಬ್ದಾರೀನ ಸ್ವಲ್ಪವೂ ಹಂಚಿಕೊಳ್ಳುತ್ತಿಲ್ಲ ಅನ್ನೋದು. ಆದರೆ ಮಗನನ್ನು ಅರ್ಥಮಾಡಿಕೊಂಡವರು, ಓದು ಬರಹ ಯಾವುದೂ ಇಲ್ಲದಿದ್ದ ಇವರ ಅಮ್ಮ. ಹಡಪದ್ ಗುಳೇದಗುಡ್ಡದಲ್ಲಿ ಶಾಲೆ ಸೇರೋಕ್ಕೆ, ಬಾಗಲಕೋಟೆಯಲ್ಲಿ ಮೆಟ್ರಿಕ್ ಮಾಡೋಕ್ಕೆ ಅಮ್ಮನೇ ಕಾರಣ. ಮಗ ಶಾಣ್ಯಾ ಇದಾನೆ, ಅವನನ್ನು ಓದಿಸೋದು ನನ್ನ ಕರ್ತವ್ಯ ಅಂತ ಭಾವಿಸಿದ ಅಮ್ಮ ಇವರಿಗಾಗಿ ಬಚ್ಚಿಟ್ಟಿದ್ದು, ಕೂಡಿಟ್ಟಿದ್ದು ಅದೆಷ್ಟೋ! ಹೊಲದಲ್ಲಿ ಬೆಳೀತಿದ್ದ ತೊಗರೀಬೇಳೆ, ಕಡಲೇಕಾಯಿ ಇವುಗಳಿಂದ ಬಂದ ದುಡ್ಡನ್ನು ಮಗನ ಖರ್ಚುವೆಚ್ಚಕ್ಕಾಗಿ ಉಳಿಸೋದು. ಶಾಲೆಗೆ ಹೊರಟ ಮಗನ ಕೈಯಿನ ಕಾಸನ್ನು ಯಾರಾದರೂ ಹಾರಿಸಿಕೊಂಡು ಹೋದರೇನು ಗತಿ ಅಂತ ಹೆದರಿ ಕಾಸನ್ನು ಯಾರ ಕಣ್ಣಿಗೂ ಬೀಳದ ಹಾಗೆ, ಬುತ್ತಿಯ ಬುಡದಲ್ಲೋ, ರೊಟ್ಟಿಯ ಮಧ್ಯದಲ್ಲೋ ಇಟ್ಟು ಕಳಿಸೋದು. ಇದೇ ಇವರಮ್ಮನ ಪಾಲಿಗೆ ಆಗೆಲ್ಲ ಒಂದು ಮಹತ್ಕಾರ್ಯ!

ವ್ಯಕ್ತಿಯೊಬ್ಬ ಮುಂದೆ ಏನಾಗುತ್ತಾನೆ ಎಂಬುದರ ಬಗ್ಗೆ ಅವನ ಬಾಲ್ಯದಲ್ಲಿನ ಚಲನವಲನಗಳು ಸಾಕಷ್ಟು ಸೂಚನೆಗಳನ್ನು ನೀಡಬಹುದು. ಆದರೆ ಇಲ್ಲಿ ಮುಖ್ಯವೆನ್ನಿಸುವುದು ಸಣ್ಣ ಊರೊಂದರಲ್ಲಿ ಬೆಳೆದ ಹುಡುಗ. ದೊಡ್ಡ ನಗರವೊಂದರಲ್ಲಿ ಬೀಡುಬಿಟ್ಟು, ಅಲ್ಲಿ ತನ್ನತನವನ್ನು ಊರ್ಜಿತಗೊಳಿಸಿಕೊಂಡ ರೀತಿ. ದೊಡ್ಡ ದೊಡ್ಡ ಕ್ಯಾನ್‌ವಾಸ್‌ಗಳಲ್ಲಿ ಕೆಲಸ ಮಾಡುವ ಉತ್ಸಾಹವಿದ್ದ ಹಡಪದ್. ಹುಬ್ಬಳ್ಳಿಯಲ್ಲಿ

ಕಲಾವಿದ ಮಿಣಜಿಗಿಯವರು ಶುರುಮಾಡಿದ ಕಲಾ ಶಾಲೆಯಲ್ಲಿ ಸ್ವಲ್ಪ ಕಾಲ ಕೆಲಸವನ್ನೇನೋ ಮಾಡಿದರು. ಆದರೆ ವಿಸ್ತಾರವಾದ ಇವರ ಮನಸ್ಸು ವೈಶಾಲ್ಯಕ್ಕಾಗಿ ಹಂಬಲಿಸಲು ತೊಡಗಿದಾಗ ಬೆಂಗಳೂರಿಗೆ ಬಂದರು. ಆಗೆಲ್ಲ ಕಲಾ ಶಿಕ್ಷಣ ಎನ್ನುವುದು ಇವರಿಗೆ ಒಂದು ಪ್ರಯೋಗದಂತೆ. ಅಲ್ಲಿ ಇಲ್ಲಿ ಅಲೆದಾಡಿ ಕೊನೆಗೆ ೧೯೬೮ರಲ್ಲಿ ಶೇಷಾದ್ರಿಪುರದ ಸ್ಕೂಲನ್ನು ಆರಂಭಿಸಿದಾಗ ಬ್ರಶ್‌ನ ನಿರಾಳವಾಗಿ ಆಡಿಸಲೇ ಹಿಂಜರಿಯುತಿದ್ದ ವಿದ್ಯಾರ್ಥಿಗಳ ಒಂದು ದೊಡ್ಡ ತಂಡವೇ ಪ್ರವೇಶಕ್ಕಾಗಿ ಹಾತೊರೆಯಿತು. ಮೇಷ್ಟ್ರೆಂಬ ಬಿಗುಮಾನವಿಲ್ಲದೆ, ಅವರೆಲ್ಲರ ಸಮಕ್ಕೂ ಕೂತು ಕುಂಚವನ್ನು ಬಣ್ಣಗಳಲ್ಲಿ ಧಾರಾಳವಾಗಿ ಆಡಿಸುತ್ತ ಶೀಟ್‌ಗಳ ಮೇಲೆ ದಿಟ್ಟವಾಗಿ ಚಿತ್ರವನ್ನು ಮೂಡಿಸುತ್ತಿದ್ದ ಇವರನ್ನು ಕಂಡಾಗಲೆಲ್ಲ ಅನ್ನಿಸುತ್ತಿತ್ತು, ಈತ ಬದುಕಿನಲ್ಲಿ ಮಾತ್ರವಲ್ಲ, ಚಿತ್ರಕಲೆಯಲ್ಲೂ ಪ್ರಯೋಗಶೀಲ ಅಂತ. ನೂರಾರು ವಿದ್ಯಾರ್ಥಿಗಳ ಪಾಲಿಗೆ ಹಡಪದ್ ಸಾರ್, ಹಡಪದ್ ಮೇಷ್ಟ್ರಾಗಿ. ಎಂದೂ ಯಾರನ್ನೂ ಗದರಿಸಿಕೊಳ್ಳದೆ ಗಜಿಬಿಜಿ ಸ್ಥಳವೊಂದನ್ನು ವಿದ್ಯಾರ್ಥಿಗಳ ಸಹಕಾರದಿಂದ ಇವರು ಯಾವ ರೀತಿ ಮಾರ್ಪಡಿಸಿಬಿಟ್ಟರೆಂದರೆ, ಇಲ್ಲಿನ ಕೆಮ್ಮಣ್ಣಿನ ಮೋಟು ಗೋಡೆಗಳು ದಾರಿ ಹೋಕರ ಕಣ್ಣಿಗೆ ಹಬ್ಬವನ್ನುಂಟು ಮಾಡಲು ತೊಡಗಿದವು. ಅವುಗಳ ಮೇಲಿನ ಬಿಳಿ ಬಣ್ಣದ ಚಿತ್ತಾರಗಳು ಮುದ ನೀಡಬಲ್ಲ ಸಂಕೇತಗಳಾದವು. ಇಲ್ಲಿನ ವಿದ್ಯಾರ್ಥಿಗಳು ಕಲಾ ಜಗತ್ತಿನ ಪ್ರತಿನಿಧಿಗಳೆನಿಸಿದರು.

ಹಡಪದ್ ಅವರ ಹೆಚ್ಚುಗಾರಿಕೆ ಅಂದ್ರೆ, ಅವರು ಕಲಾವಿದರಿಗಷ್ಟೇ ಅಲ್ಲದೆ, ಇನ್ನೂ ಬೇರೆ ಬೇರೆ ಆಯಾಮಗಳ ಜನರಿಗೆಲ್ಲ ಹತ್ತಿರದವರು ಅನ್ನಿಸಿದ್ದು. ಇವರೊಂದಿಗೆ ಒಂದೆರಡು ಗಂಟೆಗಳ ಕಾಲ ಮಾತನಾಡಿದರೆ ಸಾಕು, ವಿಶ್ವಕೋಶವೊಂದರ ಹಾಳೆಗಳನ್ನು ತಿರುವಿ ಹಾಕಿದ ಅನುಭವವಾಗುತ್ತಿತ್ತು. ಚಿತ್ರಕಲೆ, ಶಿಲ್ಪಕಲೆ ಇವನ್ನು ಕುರಿತು ಚರ್ಚಿಸುತ್ತಲೇ ಇವರು ಸಮಕಾಲೀನ ಸಮಾಜದ ಅದೆಷ್ಟೋ ಆಗುಹೋಗುಗಳನ್ನು ನಮ್ಮ ಮುಂದೆ ತೆರೆದಿಟ್ಟುಬಿಟ್ಟಿರುತ್ತಿದ್ದರು. ಮಾತಿನ ಮಧ್ಯೆ ಎಂದೂ ಯಾರೂ ಟೀಕೆಗಳಿಗೆ, ವ್ಯಂಗ್ಯಗಳಿಗೆ ಗುರಿಯಾಗುತ್ತಲೇ ಇರಲಿಲ್ಲ. ಆದರೆ ವ್ಯವಸ್ಥೆಯೊಂದನ್ನು ಕುರಿತು ಇವರು ವಿಶ್ಲೇಷಿಸ ಹೊರಟಾಗ ವಿಚಾರಗಳು ನಿರಾಯಾಸವಾಗಿ ನಮ್ಮ ಮುಂದೆ ತೆರೆದುಕೊಂಡುಬಿಡುತ್ತಿದ್ದವು. ಬೆಂಗಳೂರು, ಬಾದಾಮಿ, ಹತ್ತಿರ ದೂರದ ಊರುಗಳು ಇಲ್ಲೇ ಸಾಮಾನ್ಯವಾಗಿ ಓಡಾಡಿಕೊಂಡಿದ್ದ ಇವರು ವಿದೇಶಕ್ಕೆ, ಜರ್ಮನಿಗೆ, ಕೇವಲ ಒಂದೇ ಒಂದು ಬಾರಿ ಭೇಟಿ ನೀಡಿದ್ದರೂ ಜಗತ್ತಿನ ಮಟ್ಟದಲ್ಲಿ ಪ್ರಚಲಿತವಾಗಿದ್ದ ಸಿದ್ಧಾಂತವನ್ನೆಲ್ಲ ವಿಶ್ಲೇಷಿಸಬಲ್ಲವರಾಗಿದ್ದರು. ರಾಜಕೀಯ ಧೋರಣೆಗಳ ಬಗ್ಗೆ ಇವರಿಗೆ ಸ್ಪಷ್ಟತೆಯಿತ್ತು. ಸೃಜನಶೀಲ ಆಯಾಮಗಳಲ್ಲಿ ಸಂಭವಿಸುತ್ತಿದ್ದ ಬದಲಾವಣೆಗಳ ಪರಿಚಯವಿತ್ತು. ಜನಜೀವನದ ಹಾದಿ ಯಾವ ದಿಕ್ಕನ್ನು ಹಿಡಿದಿದೆ ಅನ್ನೋದರ ಬಗ್ಗೆ ತಿಳಿವಳಿಕೆಯಿತ್ತು. ಹಡಪದ್ ನನ್ನಂಥವರಿಗೆ ತುಂಬಾ ಪ್ರಿಯರಾಗಿದ್ದು ಸುತ್ತಮುತ್ತಲನ್ನು ಕುರಿತು ಅವರು ತಮ್ಮಲ್ಲೇ ರೂಪಿಸಿಕೊಂಡಿದ್ದ ಇಂಥ ವಿಚಾರಧಾರೆಯಿಂದಾಗಿ. ಇವರ ಮೇಲಿನ ಗೌರವದಿಂದಲೇ ಪ್ರಸಿದ್ಧ ಕಲಾವಿದರೂ ಇವರ ಶಾಲೆಯಲ್ಲಿ ಡೆಮಾನ್‌ಸ್ಟ್ರೇಶನ್‌ಗಳನ್ನು ನಡೆಸುತ್ತಿದ್ದರು. ಬುದ್ಧಿಜೀವಿಗಳು, ಸ್ವಸಂತೋಷಕ್ಕೆಂಬಂತೆ ಉಪನ್ಯಾಸಗಳನ್ನು ನೀಡುತ್ತಿದ್ದರು.

ಸಣ್ಣಪುಟ್ಟ ಸಂಘ ಸಂಸ್ಥೆಗಳವರು ಶಾಲೆಯ ಆವರಣದಲ್ಲಿ ತಮ್ಮ ಕಾರ್ಯಕ್ರಮಗಳನ್ನು ನಡೆಸುವುದೇ ಒಂದು ಪ್ರತಿಷ್ಠಿತ ವಿಷಯ ಎಂಬುದಾಗಿ ಭಾವಿಸಿದ್ದರು. ಒಂದು ದಿನ ಇಲ್ಲಿ ಪುಸ್ತಕ ಬಿಡುಗಡೆ. ಮತ್ತೊಂದು ದಿನ ನಾಟಕವೊಂದರ ವಾಚನ. ಇನ್ಯಾವಾಗಲೋ ಕವಿತೆಗಳ ಪಠನ. ಒಂದೇ ಛಾವಣಿಗೆಯ ಕೆಳಗೆ ಇವೆಲ್ಲ ನಡೆಯುತ್ತಿತ್ತು ಎಂಬುದರಿಂದಲೇ ಇಲ್ಲಿ ಕಲಿತ ಅನೇಕರು ಕಲೆಯನ್ನು ಸಾಮಾನ್ಯ ಜನರ ಬದುಕನ್ನು ವಿವರಿಸಬಲ್ಲ ಸಾಧನಗಳನ್ನಾಗಿ ಮಾಡಿಕೊಳ್ಳುವುದು ಸಾಧ್ಯವಾಯಿತು. ಕಲಾವಿದನಾಗಿ ಎಂದೂ

ದಂತಗೋಪುರದಲ್ಲಿ ಕೂಡದಿದ್ದ ಹಡಪದ್ ತಾವು ನಂಬಿದ್ದನ್ನು ತಮ್ಮ ಶಿಷ್ಯರಿಗೆ ಕಲಿಸಿದ್ದು ಮಾತ್ರವಲ್ಲ ಕಲಿತಿದ್ದೆಲ್ಲವನ್ನೂ ಮತ್ತಷ್ಟು ಮಹತ್ತರವಾಗಿ ಹೊಸ ಆಯಾಮದಲ್ಲಿ ಬೆಳೆಸಿಕೊಳ್ಳುವ ಸ್ವಾತಂತ್ರ್ಯವನ್ನೂ ಅವರಿಗೆ ನೀಡಿದರು.

ಚಿತ್ರಕಲೆಯನ್ನು ಬೆಳೆಸುವ ಸಂಭ್ರಮದಲ್ಲಿ ಮಡದಿ ಮಕ್ಕಳನ್ನು ಸುಮಾರು ಹದಿನಾರು ವರ್ಷಗಳ ಕಾಲ ಬಿಟ್ಟು ಬೆಂಗಳೂರಿನಂಥ ಸ್ಥಳದಲ್ಲಿ ಮೂಲಂಗಿ, ಮೆಂತೆ ಪಲ್ಲೆ, ಬ್ರೆಡ್ ಇಂಥವನ್ನು ತಿಂದುಕೊಂಡು ಬದುಕಿದ್ದ ಹಡಪದ್. ಹೋಟೇಲು ಊಟಕ್ಕೆ ಹಂಬಲಿಸಲಿಲ್ಲ. ಯಾವ ಚಟವನ್ನೂ ಬೆಳೆಸಿಕೊಳ್ಳಲಿಲ್ಲ. ಅವರ ಗೆಳೆಯರು ಹೇಳೋ ಹಾಗೆ "ಉತ್ತರ ಕರ್ನಾಟಕದವರಾದರೂ ಅಡಿಕೀನ ಸೈತ ತಿನ್ನುತ್ತಿರಲಿಲ್ಲ". ಸಿನಿಮಾಗಳನ್ನು ನೋಡಿದ್ದೇ ಕಡಿಮೆ. ನೋಡಿದ್ದೆಲ್ಲ, ನಾಟಕಗಳು, ತೊಗಲುಗೊಂಬೆಯಾಟಗಳು. ಸರಿರಾತ್ರಿಯವರೆಗೂ ಕುಂಚದಲ್ಲಿ ಕೆಲಸ. ತಮ್ಮೂರು ಬಾದಾಮಿಯಲ್ಲಿ ಗ್ಯಾಲರಿಯೊಂದನ್ನು ಪ್ರಾರಂಭಿಸಬೇಕೆಂಬ ಕನಸನ್ನು ಕಟ್ಟಿದ ದಿನದಿಂದ ಅದಕ್ಕಾಗಿ ಪೈಂಟಿಂಗ್‌ಗಳ ರಚನೆ.

ಗುಡಿ, ಪೂಜೆ ಇಂಥವುಗಳಿಂದ ಎಂದೂ ದೂರವಿದ್ದ ಹಡಪದ್ ಮಡದಿ ಶಾರದಾಗೆ ಸದಾ ಹೇಳುತ್ತಿದ್ದ ಮಾತೆಂದ್ರೆ: "ಮನಸ್ಸನ್ನು ಶುದ್ಧ ಇಟ್ಕೋ. ಜನ ನೂರೆಂಟು ತಪ್ಪು ಮಾಡಿ ಅಡ್ಡ ಬಿದ್ರೆ, ಉದ್ದ ಬಿದ್ರೆ ಅಂದ್ರೆ ದೇವ್ರು ಅದ್ಹೆಂಗೆ ಒಲೀತಾನೆ?" ಶಾಲೆಯಿಂದ ಬಂದ ಹಣ ಮತ್ತೆ ಶಾಲೆಯ ಕೆಲಸಕ್ಕೇ ವಿನಿಯೋಗ. ಹಡಪದ್‌ರ ಮಡದಿ ಎಂದೂ ಎಲ್ಲರಂತೆ ಸರ, ಬಳೆ ಅಂತ ಚಿನ್ನದ ಆಭರಣವನ್ನು ತೊಟ್ಟು ಮೆರೆಯಲೇ ಇಲ್ಲ. "ಬಂಗಾರ ಮೈಮ್ಯಾಗಿದ್ರೆ ಕಳ್ಳರು ಬೆನ್ನು ಹತ್ತಾರಷ್ಟೆ. ಅದರಾಸೆಗೆ ನಿನ್ನ ಕುತ್ತಿಗಿ ಹಿಸುಕಿದ್ರೆ ಏನು ಮಾಡೋ ಆಕಿ?" ಅಂತ ಗಂಡ ಇವರನ್ನು ಛೇಡಿಸುತ್ತಿದ್ದಷ್ಟೆ ಮಡದಿಯ ಪಾಲಿಗೆ. ಆದರೆ ರಾಜ್ಯ ಪ್ರಶಸ್ತಿ ಬಂದಾಗ, ವೆಂಕಟಪ್ಪ ಪ್ರಶಸ್ತಿ ಬಂದಾಗ ಮಾತ್ರ ಶಾಲು, ಪದಕ, ಚೆಕ್‌ನ ಹಿಡಿದು ಅಡುಗೆ ಕೋಣೆಗೆ ನೇರವಾಗಿ ಬಂದ ಹಡಪದ್ ಅವೆಲ್ಲವನ್ನೂ ಮಡದಿಯ ಉಡಿಗೆ ತುಂಬಿ, "ಇನ್ನು ಇವೆಲ್ಲ ನಿಂಗೆ ಮುಟ್ಟಿತು ನೋಡು.." ಅಂತ ಮುಗುಳ್ನಕ್ಕಿದ್ದರು. ಶಾಲೇಲೇ ಕಾಲೂರಿಕೊಂಡು, ತೀರಾ ಹತ್ತಿರದ ನೆಂಟರಿಷ್ಟರ ಮದುವೆಗಳಿಗೂ ಅಟೆಂಡೆನ್ಸ್ ಹಾಕಿ ಬರ್ತಿದ್ದ ಇವರನ್ನು ಜನ ಹುಡುಗಾಟ ಮಾಡೋರು: "ಈ ರುದ್ರಪ್ಪ ವಧೂವರರ ತಲೆ ಮ್ಯಾಗೆ ಅಕ್ಕಿ ಕಾಳು ಹಾಕೋಕ್ಕೆ ಬರ್ತಾನಷ್ಟೆ..".

ಹಡಪದ್‌ರಿಗೆ ಅರವತ್ತೇಳು ವಯಸ್ಸಾಗ್ತಿದ್ದ ಹಾಗೇ ಆಗ್ಗಿಂದಾಗ್ಗೆ ಸಣ್ಣಪುಟ್ಟ ಜಡ್ಡುಗಳು. ಬಲಗಣ್ಣಿನ ದೃಷ್ಟಿ ಕಡಿಮೆಯಾದಾಗ ಲೆನ್ಸ್ ಹಾಕಿಸಿಕೊಂಡದ್ದನ್ನು ಬಿಟ್ಟರೆ ಎಂದೂ ಬಲವಾಗಿ ಹಾಸಿಗೆ ಹಿಡಿದಿದ್ದೇ ಇಲ್ಲ. ಅದೇಕೋ ಒಂದು ದಿನ ಎದೆಯಲ್ಲೆಲ್ಲೋ ತಳಮಳ ಶುರುವಾಗಿತ್ತು. ನಿರ್ಲಿಪ್ತವಾಗಿ ಕೂತಿದ್ದ ಇವರನ್ನು ಶಿಷ್ಯನೊಬ್ಬ ಹತ್ತಿರದಲ್ಲೇ ಇದ್ದ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿ ಸೇರಿಸಿದ್ದ. ಹಡಪದ್ ಹೆಚ್ಚು ನರಳಲೆ ಇಲ್ಲ. ಸದ್ದಿಲ್ಲದೆ ಹೋಗೇ ಬಿಟ್ಟರು.



---

* ವಿಚಾರಗಳ ಮುಕ್ತ ವಿನಿಮಯಕ್ಕಾಗಿ ಕಳೆದ ನಾಲ್ಕು ವರ್ಷಗಳಿಂದ ಪ್ರಕಟವಾಗುತ್ತಿರುವ 'ಚರ್ಚೆಗೊಂದು ಚಾವಡಿ' ನಾಲ್ಕು ಅಥವಾ ಆರು ಪುಟಗಳ ಪುಟ್ಟ ಪತ್ರಿಕೆ. ಹಡಪದ್ ಕುರಿತ ಬರಹವನ್ನು ಈ ಪತ್ರಿಕೆಯಿಂದ ತೆಗೆದುಕೊಳ್ಳಲಾಗಿದೆ. ಸಾಹಿತ್ಯಕ ಸಾಂಸ್ಕೃತಿಕ ವಿಚಾರಗಳನ್ನು ಮುಕ್ತವಾಗಿ ಚರ್ಚಿಸುವ ಸಂಪಾದಕ ಬಿ.ಎನ್. ವೆಂಕಟಲಕ್ಷ್ಮಿ ಈ ಪತ್ರಿಕೆಯ ಜೀವಧಾತು.

ಒಲವಿನ ಕವಿ ಕೆಎಸ್‌ನ ಅವರ ದಾಂಪತ್ಯ ಗೀತೆಗಳು

- ಎಚ್.ಎಲ್. ಪುಷ್ಪ

ರಾಯರು ಬಂದರು ಮಾವನ ಮನೆಗೆ
ರಾತ್ರಿಯಾಗಿತ್ತು
ಹುಣ್ಣಿಮೆ ಹರಸಿದ ಬಾನಿನ ನಡುವೆ
ಚಂದಿರ ಬಂದಿತ್ತು ತುಂಬಿದ
ಚಂದಿರ ಬಂದಿತ್ತು.

ಇದು ಮದುವೆಯಾದ ಹೊಸತರಲ್ಲಿ ತನ್ನ ಮುದ್ದಿನ ಮಡದಿಯನ್ನು ಹುಡುಕಿ ಹೊರಡುವ ಗಂಡನ ಕಾತುರವನ್ನು ವರ್ಣಿಸುವ ಪರಿ. ಇಂತಹದೇ ಕಾಮನೆಗಳು ಎಲ್ಲರ ಬದುಕಿನಲ್ಲಿ ಬರಬಹುದಾದ, ಬಂದು ಹೋದ ಸಾಮಾನ್ಯ ಸಂಗತಿಗಳಾಗಿವೆ. ಆದರೆ ಇದು ನಮ್ಮದೇ ಕಾತರವಲ್ಲವೇ ಎನಿಸುವುದು ಮೇಲಿನ ಸಾಲುಗಳನ್ನು ಓದಿದಾಗ.

ಕವಿ ಎಂದ ತಕ್ಷಣವೇ ಅವನು ನಮ್ಮ ಹಾಗೆಯೇ ಇರುವನೋ ಇಲ್ಲ ಅಸಮಾನ್ಯನೋ ಎಂಬ ಅನುಮಾನ ಕಾಡುವುದು ಸಹಜ. ನಮಗಿಲ್ಲದ ವಿಶೇಷ ರೀತಿಯ ಪ್ರತಿಭೆಯುಳ್ಳವನೇ ಕವಿ. ರವಿ ಕಾಣದ್ದನ್ನು ಕವಿ ಕಂಡ ಎಂಬ ನಾಣ್ನುಡಿಗೆ ತಕ್ಕಂತೆ ಜನ ಯೋಚಿಸುತ್ತಾರೆ.



ಪ್ರಕಾಶಕರು: ಬಾಕಿನ,
ಲಿಪಿ ಪ್ರಕಾಶನ, ಬಸವನಗುಡಿ,
ಬೆಂಗಳೂರು - ೫೬೦ ೦೦೪.

'ಮೈಸೂರು ಮಲ್ಲಿಗೆ' ಖ್ಯಾತಿಯ ಒಲವಿನ ಕವಿ ಕೆ.ಎಸ್. ನರಸಿಂಹಸ್ವಾಮಿ ನಮ್ಮನ್ನಗಲಿದ್ದಾರೆ. ಪ್ರೀತಿ-ಪ್ರೇಮ, ಒಲವು, ದಾಂಪತ್ಯ ಗೀತೆಗಳಿಗೆ ಮೊದಲ ಹೆಸರು ಕೆ.ಎಸ್.ನ. ತಮ್ಮ ಇಳಿ ವಯಸ್ಸಲ್ಲೂ ಕುಗ್ಗದ ಉತ್ಸಾಹದಿಂದ ಬರೆಯುತ್ತ ಕವಿತೆಗೆ ಜೀವ ತುಂಬಿದ್ದ ಕವಿ ಬಿಟ್ಟು ಹೋಗಿರುವ ಅಪಾರ ಕಾವ್ಯ ರಾಶಿಯಲ್ಲಿ ನೂರಾರು ಮೌಲ್ಯಿಕವಾದವುಗಳಿವೆ.

ಕೆ.ಎಸ್.ನ, 'ಮಲ್ಲಿಗೆ ಮಾಲೆ'ಯ ಸಮಗ್ರ ಸಂಕಲನ (೧೯೮೫)ದಲ್ಲಿ ತಮ್ಮ ಕಾವ್ಯಕ್ಕೆ ಬಾಲ್ಯಪ್ರೇರಣೆ, ತಮಗೆ ಆದ ಪ್ರಭಾವ, ತಾವು ಪಡೆದ ವೃತ್ತಿ, ತಮ್ಮ ಕಾವ್ಯದ ಬಗ್ಗೆ ಆತ್ಮೀಯವಾಗಿ ಚರ್ಚಿಸಿದ್ದಾರೆ. ನನಗೆ ಈ ಬರಹ ತುಂಬ ಪ್ರಿಯವಾಗಿದ್ದ ಕಾರಣಕ್ಕೆ ಓದುಗರಿಗೂ ಅದರ ರುಚಿ ಹಂಚುತ್ತಿದ್ದೇನೆ. ಈ ಕೃತಿಯ ಪರಿಷ್ಕೃತ ಆವೃತ್ತಿ ಈಚೆಗೆ ಬಿಡುಗಡೆಯಾಗಿದೆ.

ಕವಿ ಎಂದರೆ ಸಾಮಾನ್ಯನು ಗುರುತಿಸದ ವಿಶೇಷ ಅನುಭವಗಳನ್ನು ಹೃದಯದಾಳದಿಂದ ಅರಿತು, ಆ ಅರಿತ ವಿಷಯಗಳಿಗೆ ಭಾಷೆಯ ರೂಪ ಕೊಡುತ್ತಾನೆ. ಹೀಗಾಗಿಯೇ ಅವನು ಭಿನ್ನ. ಇನ್ನೂ ವಿಶೇಷವೆಂದರೆ ಸಾಮಾನ್ಯರೂ ಕಾಣುವ ಚಿತ್ರವನ್ನು ಅದು ಇದ್ದ ಹಾಗೆಯೇ ಮನಸ್ಸಿಗೆ ನಾಟುವ ಹಾಗೆ ಕಟ್ಟಿಕೊಡುವವನು ಇನ್ನೂ ನಿಜವಾದ ಕವಿ. ಇಂತಹ ನಿಜದ ಪರಿಧಿಯನ್ನು ಮುಟ್ಟಿದ ಸಾಮಾನ್ಯ ಜಗತ್ತನ್ನು ಸ್ಪರ್ಶಿಸಿದವರು ಮೈಸೂರು ಮಲ್ಲಿಗೆ ಖ್ಯಾತಿಯ ಕವಿ ಕೆ.ಎಸ್. ನರಸಿಂಹಸ್ವಾಮಿಯವರು.

ಮಲ್ಲಿಗೆಯ ದಳದಳಗಳನ್ನು ಭಾವುಕರಾಗಿ ಬದುಕಿನೊಂದಿಗೆ ವರ್ಣಿಸಿದ ಕೆ.ಎಸ್. ನರಸಿಂಹಸ್ವಾಮಿಯವರು ಲೋಕಕವಿಯಾಗಿದ್ದಾರೆ. ಬಹುಶಃ ಕನ್ನಡದಲ್ಲಿ ಕೆ.ಎಸ್.ನ.ರವರ ಕವಿತೆಯನ್ನು ಕೇಳದವರೇ ವಿರಳ. ಹಳ್ಳಿಯ ಜನ ಅಜ್ಞಾತರಾಗಿ ರಚಿಸಿ ಬಾಯಿಂದ ಬಾಯಿಗೆ ಚಲಿಸಿ ಜನಮನದಲ್ಲಿ ಅಚ್ಚಳಿಯದ ಹಾಗೆ ಉಳಿದಿರುವ ಜಾನಪದ ಹಾಡುಗಳು ಇಂದೂ ಸಹ ನಮ್ಮೊಂದಿಗಿವೆ. ಜಾನಪದ ಹಾಡುಗಳಲ್ಲಿ ಬರುವ ಹಳ್ಳಿ ಹೆಣ್ಣಿನ ಚಿತ್ರಣ, ಅವಳ ಚೆಲುವು ಒಲವು, ತೌರಿನ ಹಂಬಲ, ತೊಟ್ಟಿಲ ತೂಗುವ ರೀತಿ, ಗಂಡನೊಂದಿಗಿನ ಪ್ರಣಯ, ಮುನಿಸು ಇವೆಲ್ಲವೂ ಕೆ.ಎಸ್.ನ ರವರ ಕವಿತೆಗಳಲ್ಲಿ ಸೊಗಸಾದ ಚಿತ್ರಗಳಿಂದ ಕಟ್ಟಲ್ಪಟ್ಟಿವೆ. ಎಲ್ಲರ ನಾಲಿಗೆಯಲ್ಲೂ ಸುಮಾರು ಮೂವತ್ತು ವರ್ಷಗಳ ಹಿಂದೆಯೇ ಕವಿತೆಗಳಾಗಿ, ಹಾಡಾಗಿ ನಲಿದ ಭಾಗ್ಯವನ್ನು ಕಂಡಿವೆ.

ಭಾರತದ ಸಾಮಾಜಿಕ ಸಂದರ್ಭದಲ್ಲಿ ಕೂಡಿ ಬಾಳುವ ಕುಟುಂಬ ವ್ಯವಸ್ಥೆಗೊಂದು ಮಹತ್ವವಿದೆ. ಇಂತಹ ಸಾಂಪ್ರದಾಯಿಕ ಕುಟುಂಬಗಳಲ್ಲಿ ಗಂಡು ಹೆಣ್ಣಿನ ಸಂಬಂಧ, ಪ್ರೀತಿ ಪ್ರಣಯ, ನೋವು ನಲಿವು ಇವೆಲ್ಲವೂ ನವಿರಾದ ಎಳೆಗಳಿಂದ ಕೂಡಿದ್ದಾಗಿದೆ. ಈಚೀಚೆಗೆ ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳು ಪೊಳ್ಳಾಗುತ್ತಾ ಕೊನೆಗೆ ಏಕಾಂಗಿಯಾಗುತ್ತಿರುವುದು ನಮ್ಮ ಕಣ್ಣೆದುರಿನ ವಾಸ್ತವ. ಭಾವುಕ ಸಂಬಂಧಗಳು ಕೂಡ ಅವನ ಕೈಯನ್ನು ದಾಟಿ ಕರಗಿ ಹೋಗುವ ನೀರಗುಳ್ಳೆಯಾಗುತ್ತಿವೆ.

ಗಂಡು ಹೆಣ್ಣಿನ ಸಂಬಂಧ ನಿಲ್ಲುವುದೇ ಪರಸ್ಪರ ಕೊಡು-ಕೊಳ್ಳುವಿಕೆಯ ಮೂಲಕ. ಈ ಸಂಬಂಧ ದೀರ್ಘವಾಗಿ ಉಳಿದು ಬಾಳುವ ಕನಸನ್ನು ಕವಿ ಕಲ್ಪಿಸಿಕೊಳ್ಳುತ್ತಾನೆ. ಬದುಕಿನ ಕೊನೆಯ ಗಳಿಗೆಯವರೆಗೂ ಪ್ರೀತಿಯನ್ನು ಉಳಿಸಿ ಬೆಳೆಸುವ ಇಂಥ ಕನಸನ್ನು ಕಂಡ ಒಲವಿನ ಕವಿ ನರಸಿಂಹಸ್ವಾಮಿಯವರು

ಇವರ ಮೊದಲ ಸಂಕಲನವೇ ಮೈಸೂರು ಮಲ್ಲಿಗೆ. ಮಲ್ಲಿಗೆ ಮತ್ತು ಮಡದಿ ಇವರ ಅತಿ ಮೆಚ್ಚಿನ ವಿಷಯಗಳಾಗಿದ್ದು ಮಲ್ಲಿಗೆಯಿದ್ದಲ್ಲಿ ಮಡದಿ, ಮಡದಿ ಇದ್ದಲ್ಲಿ ಮಲ್ಲಿಗೆ ಎನ್ನುವ ಹಾಗೆ ಕವಿಯನ್ನು ಕಾಡಿವೆ. ಇವರ ಸಮಗ್ರ ಕವಿತೆಗಳನ್ನು ದಾಂಪತ್ಯ ಭಾವದ ಹಿನ್ನೆಲೆಯಲ್ಲಿ ಓದಿದಾಗ ಅರಿವಾಗುವ ಒಂದೇ ಸತ್ಯ - ಪ್ರೇಮಕ್ಕೆ ಮುಪ್ಪಿಲ್ಲ, ಅದು ಚಿರನೂತನ. ಯಾವ ಆಸರೆಯಿಲ್ಲದಿದ್ದರೂ ಮನುಷ್ಯನನ್ನು ನಡೆಸುವ ಚೇತನ ಎಂದಾಗಿದೆ.

ಹೀಗೆ ಲೋಕಕ್ಕೆಲ್ಲ ಪ್ರೇಮದ ಹಿರಿಮೆಯನ್ನು ಸಾರಿದ ಒಲವಿನ ಕವಿ ಕೆ.ಎಸ್.ನ. ನವೋದಯ ಸಾಹಿತ್ಯ ಎಂದು ಗುರುತಿಸಲ್ಪಟ್ಟ ಸಂದರ್ಭದಲ್ಲಿ ಇವರು ತಮ್ಮ ಕಾವ್ಯ ಕೃಷಿ ಆರಂಭಿಸಿದರು. ಇವರ ಕವಿತೆಗಳಿಗಿನ್ನೂ ಮುಪ್ಪು ಬಂದಿಲ್ಲ. ಹಾಗೆಂದು ಇವರ ಕವಿತೆಗಳನ್ನು ಬರಿಯ ಪ್ರಣಯ ಕವಿತೆ ಎಂದು ತೇಲಿಸುವ ಹಾಗಿಲ್ಲ. ಶಿಲಾಲತೆಯಿಂದ ಅವರ ಗಂಭೀರ ಕಾವ್ಯದ ಎರಡನೆಯ ಮಜಲು ಆರಂಭವಾಗಿ ವಿಮರ್ಶಕರ ಗಮನವನ್ನು ಸೆಳೆದಿದೆ. ಹೀಗಿದ್ದರೂ ಇವರು ಪ್ರಧಾನವಾಗಿ ಒಲುಮೆ ಎಂಬ ತತ್ತ್ವ ಒಪ್ಪಿಕೊಂಡ ಪ್ರಣಯ ಕವಿಯೇ ಆಗಿದ್ದಾರೆ.

ಮದುವೆಯಾದ ಹೊಸತರ ಹಸಿಬಿಸಿ ಪ್ರೇಮ ಅನುಭವಿಸಿದಷ್ಟೂ ಮತೆ ಚಿಗುರಿ ತಣಿಯದೆ ಇರುವಂಥದ್ದು. ಈ ಆರದ ತಣಿಯದ ಗಳಿಗೆಗಳನ್ನು ರಸಮಯವಾಗಿ ನನ್ನೊಬ್ಬನದೇ ಅಲ್ಲ ಏಕಕಾಲಕ್ಕೆ ಎಲ್ಲರದೂ ಅನಿಸುವಂತಹ ರಚನೆಯನ್ನಾಗಿಸಿದ ಹಿರಿಮೆ ಅವರದು.

ಹೊಸ ದಂಪತಿಗಳ ಒಂದಾಗುವಿಕೆಯಲ್ಲಿ ಈ ಲೋಕವನ್ನು ದಾಟಿ ಹೊಸಲೋಕಕ್ಕೆ ಹೋಗುವ ಕಾತರತೆ ಇದೆ. ಈ ಕಾತರತೆಯಲ್ಲಿ ಸಾವು ನೋವು ಇಣುಕಲೂ ಸಹ ಸಾಧ್ಯವಿಲ್ಲ. ಇದು ಏಕಕಾಲಕ್ಕೆ ಎಲ್ಲ ಪ್ರೇಮಿಗಳ ಸಾರ್ಥಕ ಅನುಭವ ಸಹ ಆಗಿರಲು ಸಾಧ್ಯವಿದೆ.

"ತಾರೆಗಳ ಮೀಟುವೆವು, ಚಂದಿರನ ದಾಟುವೆವು
ಒಲುಮೆಯೊಳಗೊಂದು ನಾವು;
ನಮಗಿಲ್ಲ ಸಾವು, ನೋವು".

ಇಂತಹ ಅಗಾಧ ಒಲವಿರಿಸಿಕೊಂಡ ಪತಿ, ಸತಿಗಾಗಿ ತೌರಿಗೆ ಬರುತ್ತಾನೆ. ಸತಿ ಬಹಿಷ್ಟೆಯಾಗಿದ್ದಾಳೆ. ಹೊರಬರುವ ಹಾಗಿಲ್ಲ. ಪತಿ ನಿರಾಸೆಯಿಂದ ಬೆಳಗಾದ ನಂತರ ಹಿಂದಿರುಗಲು ಸಿದ್ಧನಾಗುತ್ತಾನೆ. ಆಗ ಒಳಗಿನಿಂದ ನೀರಾಯಿತು ಎಂಬ ಸುದ್ದಿ ಕೇಳಿ ಕವಿಯ ಸಂಭ್ರಮ ವರ್ಣಿಸುವಂತಿಲ್ಲ.

"ಪದುಮಳು ಬಂದಳು ಹೂವನು ಮುಡಿಯುತ
ರಾಯರ ಕೋಣೆಯಲಿ"

ಇಂತಹ ದಂಪತಿಗಳ ಮಧ್ಯೆ ಸರಸ - ಸಲ್ಲಾಪವಿರುವಂತೆಯೇ ವಿರಸ - ವಿರಹವೂ ಚೆಲ್ಲಾಟವಾಡುತ್ತದೆ. ತೌರಿಗೆ ಹೊರಡುವ ಮಡದಿಯ ಬಗ್ಗೆ ಪತಿ ಮುನಿಸಿಕೊಂಡಿದ್ದಾನೆ. ಆದರೂ ಉದಾರ ಹೃದಯದಿಂದ ಕಳುಹಿಸಿ ಕೊಡುತ್ತಾನೆ. ಒಂದು ಕ್ಷಣದ ನೆರಳು ಬಿಸಿಲಿನಾಟವನ್ನು ಕವಿ ಸೊಗಸಾಗಿ ಚಿತ್ರಿಸಿದ್ದಾರೆ.

"ಕೂಡಿದರೆ ಕೆನೆಹಾಲು; ಅಗಲಿದರೆ ಕೆನೆಮೊಸರು
ಒಲುಮೆಯೊಳಗೆಲ್ಲ ಸೊಗಸು".

ತೌರಿನ ಹಂಬಲ ಹೆಣ್ಣುಮಕ್ಕಳಿಗೆ ಅದೂ ಮದುವೆಯಾದ ಹೊಸತರಲ್ಲಿ ಬಹಳವಾಗಿ ಇರುತ್ತದೆ. ಆದರೆ ಪತಿಗೆ ಸ್ಮೃತಿ ತನ್ನನ್ನು ಅಗಲುವುದು ಇಷ್ಟವಿಲ್ಲ. ಅವಳಿಲ್ಲದ ಮನೆ ಮನೆಯೇ ಅಲ್ಲ. ಹೂವಾಡಗಿತ್ತಿ ಹೆಂಡತಿ ಮನೆಯಲ್ಲಿಲ್ಲದಾಗ ಹೂವು ತಂದಿದ್ದು ಹೂವೆಲ್ಲ ಒಡತಿಗಾಗಿ ಹಂಬಲಿಸುತ್ತಿವೆ ಎನ್ನುತ್ತಾರೆ. ಆ ಹೂವಲ್ಲಿ ತಾನೂ ಒಂದು ಹಂಬಲಿಸುವ ಹೂವು ಎಂದು ಅಭಿಮಾನದಿಂದ ಹೇಳುತ್ತಾರೆ.

ಮದುವೆ ಎನ್ನುವ ಬಂಧ ಜನ್ಮಜನ್ಮಾಂತರಗಳ ಬಂಧ, ಹೆಣ್ಣಿಗೆ ಗಂಡು, ಗಂಡಿಗೆ ಹೆಣ್ಣು ಬಿಡಿಸಲಾಗದ ನಂಟಾಗಿದೆ. ಈ ನಂಟನ್ನು ಅರ್ಥಮಾಡಿಕೊಂಡ ಹೆಣ್ಣು ಬಡತನದಲಿ, ಸಿರಿತನದಲ್ಲಿ, ಯಾರಿರಲಿ ಬಿಡಲಿ ತನ್ನ ಗಂಡನೇ ದೊರೆ ಎಂಬುದನ್ನು ಅಭಿಮಾನದಿಂದ ಹೇಳುತ್ತಾಳೆ. ಈ ಪ್ರಯಾಣದಲ್ಲಿ ತಾನೂ ಜೊತೆಗಿದ್ದೇನೆ ಎಂದು ಧೈರ್ಯ ತುಂಬುತ್ತಾಳೆ.

ಗಂಡನಿಗೆ ಒಪ್ಪಾಗಿ, ಕಂದನಿಗೆ ದಿಕ್ಕಾಗಿ
ಪಯಣದಿ ಜೊತೆಯಾಗಿ ನಾನಿಲ್ಲವೆ.

ನಲ್ಲೆಯು ಜೊತೆಯಲ್ಲಿದ್ದಾಗ ಬಡತನ ಶಾಪವಲ್ಲ. ಒಲುಮೆಯಿದ್ದರೆ ಬಡತನವನ್ನು ಮೀರಿ ಜಯಶಾಲಿಯಾಗಬಹುದು. ಹೆಂಡತಿಯಿದ್ದರೆ ಬಡತನ ದೊರೆತರೂ ಭಯವಿಲ್ಲ. ಇಂತಹ ಗಂಡಿಗೆ ಸೋಲೇ ಇಲ್ಲ.

"ಹೆಂಡತಿಯೊಲುಮೆಯ ಭಾಗ್ಯವನರಿಯುವ ಗಂಡಿಗೆ ಜಯವಿಲ್ಲ".

ಒಲವಿನಲ್ಲಿ ಬೆರೆತ ಗಂಡು ಹೆಣ್ಣಿನ ಸ್ನೇಹ ಮರುಗದ ಜೊತೆಯಲ್ಲಿರುವ ಮಲ್ಲಿಗೆಯಂತೆ. ಮುಂದೆ ದಾಂಪತ್ಯದಲ್ಲಿ ಮಗುವಿನ ಜನನದೊಂದಿಗೆ ಮೊದಲಿನ ಕಾತರತೆ ಕಳವಳ ವಿರಹಗಳ ಭಯವಿಲ್ಲದಿದ್ದರೂ ಪ್ರೇಮ ಮಾಸಿಲ್ಲ. ಬದಲಾಗಿ ಮಾಗುವ ಹಾದಿಯಲ್ಲಿದೆ. ದಾಂಪತ್ಯದ ಬದುಕಿನಲ್ಲಿ ಕಷ್ಟ ಸುಖಗಳ ಮೂಲಕ ಬರುವ ಚಿಂತೆ ಇರುವಂಥದ್ದೇ. ಆದರೆ ಅದು ಬರುವ ರೀತಿ ನಾನಾ ರೀತಿಯದು. ಆದರೆ ಕವಿಯ ಪ್ರಕಾರ ಚಿಂತೆಯಿಲ್ಲದ ಚೆಲುವು ಚೆಲುವಲ್ಲ. ಚಿಂತೆಯಿರುವ ಚೆಲುವೇ ಅನನ್ಯ ಎನ್ನುತ್ತಾರೆ.

ಇಂತಹ ಮಾಗಿದ ಪ್ರೇಮ ಇನ್ನೂ ಕೆ.ಎಸ್.ನ ರವರ ದಾಂಪತ್ಯದೊಂದಿಗೆ ಹೆಜ್ಜೆ ಹಾಕುತ್ತಿದೆ. ಅವರ ಕವಿತೆಗಳಲ್ಲಿ ಸತಿಯ ಪ್ರತಿರೂಪವಾಗಿ "ಪದುಮ, ಕನಕ, ಗೌರಿ, ಮೀನಾಕ್ಷಿ, ಶಾರದೆ"ಯರು ಬರುತ್ತಾರೆ. ಒಲವೇ ಜೀವನದ ಉಸಿರು ಎಂದ ತುಂಬು ಹೃದಯದ ಕವಿಗೆ ತಮ್ಮನ್ನು ಒಲವಿನ ಭಕ್ತ ಎಂದು ಕರೆದುಕೊಳ್ಳುವುದರಲ್ಲಿ ಹೆಮ್ಮೆಯೆನಿಸುತ್ತದೆ.

ಮಲ್ಲಿಗೆ ಚೆಲ್ಲಿದ ಹಾದಿಯಲ್ಲಿ ದಾಂಪತ್ಯ ಹಣ್ಣಾಗಿ ತೂಗಿ ತೊನೆಯುತ್ತಿರುವುದನ್ನು ಅವರ ಈ ಪದ್ಯ ಸಾರ್ಥಕವಾಗಿ ಹೇಳಿ ಧನ್ಯತೆಯನ್ನು ಸೂಸುತ್ತಿದೆ:

ಇವಳೆತ್ತಿ ನಿಲ್ಲಿಸಿದ ಬಿದಿರಿನೇಣಿಯ ಮೇಲೆ

ನಾನು ನಕ್ಷತ್ರಗಳ ಹಿಡಿಯ ಹೋದೆ

ಈಗಲೂ ಕೇಳುವಳು 'ಇನ್ನೂ ಆಸೆಯೆ ನಿಮಗೆ

ಎಪ್ಪತ್ತರಲ್ಲೂ?' ಮುತ್ತಿಟ್ಟು ನಲಿದೆ.

- ಹೀಗೆ ಕವಿಯ ಕಾವ್ಯದ ಮೂಲಕ ದಾಂಪತ್ಯದ ಕಷ್ಟ-ಸುಖಗಳನ್ನು, ಒಲವಿನ ಧಾರೆಯನ್ನು ವಿಶ್ಲೇಷಿಸುತ್ತಾ ಹೋದರೆ, ಮಹಾ ಪ್ರಬಂಧವೇ ಆದೀತು. ಈ ಮೂಲಕ ನಾವು ಮತ್ತೊಮ್ಮೆ, ಮಗದೊಮ್ಮೆ ಕವಿಕೊಟ್ಟ 'ಮೈಸೂರು ಮಲ್ಲಿಗೆ'ಯ ಸುಮಧುರತೆಯನ್ನು ಸವಿಯುತ್ತಿರೋಣ. ಬಾಳಲ್ಲಿನ ಕಷ್ಟಗಳಿಗೆ ಕ್ಷಣಿಕದ ಸಂತೃಪ್ತಿಯನ್ನು ಕಾಣಲೇನೂ ಅಡ್ಡಿಯಿಲ್ಲ.

'ಮೈಸೂರು ಮಲ್ಲಿಗೆ'ಯ ಕವಿತೆಯ ಜನಪ್ರಿಯತೆಯಿಂದ ಸ್ಫೂರ್ತಿಗೊಂಡು ನಾಗಾಭರಣ ಇದೇ ಹೆಸರಿನಿಂದ ಚಲನಚಿತ್ರವನ್ನೂ ನಿರ್ಮಿಸಿದರು. ಕಾವ್ಯದ ಒಂದು ಎಳೆಯೊಂದನ್ನಿಡಿದು ಬೆಳ್ಳಿ ತೆರೆಗೆ ಅರ್ಥಪೂರ್ಣ ಸಂವಾದವನ್ನೂ ನಾಗಾಭರಣ ಮಾಡಿದ್ದಾರೆ. ಜೊತೆಗೆ ಸಿ. ಅಶ್ವಥ್ ಅವರು ಮನತೂಗುವ ಸಂಗೀತದ ಇಂಪು ನೀಡಿದ್ದಾರೆ.

ಬಹುಶಃ ಕನ್ನಡ ಕಾವ್ಯಲೋಕದಲ್ಲಿ 'ಮೈಸೂರು ಮಲ್ಲಿಗೆ' ಕಂಡ ಮುದ್ರಣಗಳ ದಾಖಲೆಯನ್ನು ಯಾವುದೇ ಕವಿಯ ಕಾವ್ಯ, ಕಾದಂಬರಿ ಇವೊತ್ತಿನವರೆಗೂ ಕಂಡಿಲ್ಲ. ಮನೆ ಮನೆಯ ಮಾತಾದ ಮೈಸೂರು ಮಲ್ಲಿಗೆಯ ನರಸಿಂಹಸ್ವಾಮಿ ಇಂದು ನಮ್ಮೊಂದಿಗಿಲ್ಲ. ಅವರ ಕಾವ್ಯದ ನಿರಂತರ ಓದಿನಿಂದ ಅವರನ್ನು ಸದಾ ಸ್ಮರಿಸೋಣ.

ಸಾವು ನೋವನ್ನು ಮೀರಿದ ಕೆ.ಎಸ್. ನರಸಿಂಹಸ್ವಾಮಿ ಕಾವ್ಯ

- ಎನ್.ಎಸ್. ಶ್ರೀಧರ ಮೂರ್ತಿ

ಕೆ.ಎಸ್.ನ ಅವರ ಕಾವ್ಯದ ವಸ್ತು ನನ್ನ ಮಟ್ಟಿಗೆ ಎಲ್ಲಾ ಕಾಲಕ್ಕೂ ಸಾಂದ್ರವಾಗಿ ಒಂದೇ ನೆಲೆಯಲ್ಲಿದೆ, ಅದು ಕೌಟುಂಬಿಕ ನೆಲೆಯನ್ನೇ ವ್ಯಕ್ತಿಯ ಗ್ರಹಿಕೆಯ ವಿಧಾನವಾಗಿಸುವ ಭದ್ರತೆ ನೆಲೆಯ ಕಾವ್ಯ. ಕೆ.ಎಸ್.ನ ಅವರು ಚಿತ್ರಿಸಿದ್ದು ಇಂದ್ರಿಯ ಗಮ್ಯವಾದ ಪ್ರಣಯವಲ್ಲ. ಬದಲಾಗಿ ಬದುಕುವ ಅದಮ್ಯ ವಿಶ್ವಾಸದ ಪ್ರೀತಿಯನ್ನು, ಇದು ಪ್ರೀತಿಯನ್ನೇ ಪುರಾಣೀಕರಿಸಿದ (mythical mode) ಕಾವ್ಯ. ಭೂಮಿ ತಾಯಿ, ದೇವರು ತಂದೆ ಮತ್ತು ಮಗು ಮನುಷ್ಯನಾಗಿ, ಹೀಗೆ ಸೃಷ್ಟಿಯಲ್ಲಿ ಬಾಂಧವ್ಯವನ್ನೇ ಕಾಣುವ ಉದಾತ್ತ ಚಿಂತನೆ ಅದು. 'ಪ್ರಥಮ ರಾಜನಿಗೆ' 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಮುಂತಾದ ಕವಿತೆಗಳು ಈ ಬಾಂಧವ್ಯದ ಸಂಕೀರ್ಣತೆ ವಿಶ್ಲೇಷಿಸಲು ಪ್ರಯತ್ನಿಸಿದರೆ, 'ಕುಂಕುಮ ಭೂಮಿ'ಯಂತಹ ಕಡೆ ಮುಖ್ಯವಾಗಿ ಸಾಮಾಜಿಕ ಆಯಾಮಗಳು ಚರ್ಚಿತವಾಗಿವೆ. ಅವರ ಕಾವ್ಯದ ನೆಲೆಗೆ ಇಂತಹ ಉದಾತ್ತತೆ ಇದ್ದರೂ ಅದು 'ಭವ್ಯತೆ'ಯ ಔನತ್ಯೀಕರಣದಲಲ್ಲ; ಬದಲಾಗಿ ಸಣ್ಣ ಸಣ್ಣ ಸಂಗತಿಗಳು ಒಟ್ಟಾಗಿ ನಿರ್ಮಿಸಿದ ಬಿಗಿ ಬಂಧದಲ್ಲಿ. ಕೆ.ಎಸ್.ನ ಕಾವ್ಯಕ್ಕೆ ಸೌಧ ಎಷ್ಟು ಮುಖ್ಯವೊ ಪ್ರತಿ ಇಟ್ಟಿಗೆಯೂ ಅಷ್ಟೇ ಮುಖ್ಯ. ಕಹಿಯನ್ನು ಮರೆತು ಸಿಹಿಯನ್ನು ಬಿಂಬಿಸುವ ಜೀವನಧರ್ಮಕ್ಕೆ ಅವರ ಆದ್ಯತೆ. ಈ ನೆಲೆ ಅವರ ಎಲ್ಲಾ ಘಟ್ಟಗಳಲ್ಲೂ ಉಳಿದುಕೊಂಡಿದೆ.



ವಾಸ್ತವವಾಗಿ ಕೆ.ಎಸ್.ನ ಅವರ ಹುಡುಕಾಟವಿರುವುದು ಕಾವ್ಯದ ಭಾಷೆಯಲ್ಲಿ. ಅವರ ಆರಂಭಿಕ ಪ್ರೇಮ ಕವಿತೆಗಳಿಗೆ ರಾಬರ್ಟ್‌ಬರ್ನ್ಸ್‌ನಂತೆ ಜಾನಪದದ ಪ್ರೇರಣೆಯೂ ಕಾಣುತ್ತದೆ. 'ಸ್ವಪ್ನ ಸುಂದರೆ ಜಗವನಾಳುವಳು' 'ಚಂದಿರಿನ ಹರಿಗೋಲ ಮೀಟಿ ಬರಲು' 'ತಾರಿನಲಿ ತಾಯಿ ನಗುತಿಹರು' ಮುಂತಾದ ಸಾಲುಗಳ ಕ್ರಿಯಾಪದ ಗಮನಿಸಿದರೆ, ಅವರು ಯಾವ ನೆಲೆಯಲ್ಲಿ ಜಾನಪದದ ಪ್ರೇರಣೆ ಪಡೆದಿದ್ದಾರೆ ಎಂಬುದು ಗೊತ್ತಾಗುತ್ತದೆ. ಜೊತೆಗೆ ವ್ಯಾಕರಣದ

ದೃಷ್ಟಿಯಿಂದಲೂ ಅವರಿಗೆ ಉಚ್ಚಾರಣೆಯಲ್ಲಿ ಬೀಳುವ ಒತ್ತು ಮುಖ್ಯ. "ಕುದಿಯಬಾರದು ನನ್ನ ದೊರೆಯೇ" "ಇನ್ನೇನು ಬಾಗಿಲಿಗೆ ರಥ ಬಂದು ನಿಲ್ಲುವುದು" "ಸಲ್ಲುವುದು ತೌರ ಬಯಕೆ" ಮುಂತಾದ ಕಡೆ ಕ್ರಿಯಾಪದದ ಸ್ಥಾನಪಲ್ಲಟವಾಗಿದೆ. ಆ ಮೂಲಕ ಕ್ರಿಯೆಯ ಹೆಚ್ಚಳವಾಗಿದೆ. ಹೀಗೆ ತಮ್ಮ ಆರಂಭಿಕ ಸಂಕಲನಗಳಲ್ಲಿ ಕೆ.ಎಸ್.ನ ಕಾವ್ಯಸಾಧ್ಯತೆಯನ್ನು ಭಾಷೆಯ ಮೂಲಕ ಹೊಸ ನೆಲೆಗೆ ಒಯ್ಯಲು ಯತ್ನಿಸಿದ್ದಾರೆ. ಈ ಅರ್ಥದಲ್ಲಿ ನವೋದಯ ಕಾವ್ಯಕ್ಕಿಂತ ಭಿನ್ನ ನೆಲೆಯಲ್ಲಿ ಅವರು ನಿಲ್ಲುತ್ತಾರೆ. ಈ ಅಂಶವೇ ಅವರ ಕಾವ್ಯದ ಅನನ್ಯತೆಯನ್ನು ಹೇಳಿತು. ಆದರೆ ಬಹುತೇಕ ವಿಮರ್ಶಕರಿಗೆ ಈ "ಒಂಟಿದನಿ" ಪಥ್ಯವಾಗಲಿಲ್ಲ, ದೋಷ ಹೇಳಲು ಅವಕಾಶವಾಯಿತು.

ನವ್ಯ ಸಾಹಿತ್ಯದ ಅಬ್ಬರದಲ್ಲಿ, ಕೆ.ಎಸ್.ನ ತಮ್ಮ ಕಾವ್ಯದ ವಸ್ತು, ರೂಪ ಮತ್ತು ಭಾಷೆಯ ಬಗ್ಗೆ ಸಾಕಷ್ಟು ಚಿಂತಿಸಿದ್ದರು. ಸಂಕೀರ್ಣತೆಯನ್ನು ಹಿಡಿಯಲಾಗದ ಕಾವ್ಯ ಎಂದು ತಮ್ಮ ಬಗ್ಗೆ ಬಂದ ಆಪಾದನೆಗಳನ್ನೂ ಗಂಭೀರವಾಗಿ ಪರಿಗಣಿಸಿದ್ದರು. ಈ ಹಂತದ ಕೆ.ಎಸ್.ನ ಕವಿತೆಯಲ್ಲಿ ಎರಡು ಮಾದರಿಯ ಭಾಷೆಯ ಬಳಕೆ ಕಾಣಬಹುದು. ಒಂದು, ಮಾತಿನ ಧಾಟಿಯಲ್ಲಿ ಕಾವ್ಯವನ್ನು ಕೊಂಡೊಯ್ಯುವ ಮೂಲಕ ಭಾಷೆಯ ಇತಿಮಿತಿ ದಾಟುವ ಪ್ರಯತ್ನ. ಇಲ್ಲಿ ಭಾಷೆಯ ಪರಿಳಿತಗಳನ್ನು ನಾಟಕೀಯ ನೆಲೆಗೆ ಒಯ್ಯುವ ಮೂಲಕ ಓದುಗನನ್ನು ಭಾಗಿಯಾಗಿಸುವ ಪ್ರಯತ್ನವಿದೆ. ಇಲ್ಲಿ ಕವಿತೆ 'ಓದುಗ' ತಾನೇ ಅಭಿವ್ಯಕ್ತಿಸಬಹುದಾದ ಸಾಧ್ಯತೆ ಕಡೆ ನಡೆದು ಕವಿತೆ 'ಸಮುದಾಯದ ವಾಣಿ'ಯಾಗುತ್ತದೆ. "ಮನೆಯಿಂದ ಮನೆಗೆ" "ತೆರೆದ ಬಾಗಿಲು" ಮುಂತಾದವು ಇಂತಹ ಪ್ರಯತ್ನಗಳು. ಇಲ್ಲಿ ಕಾವ್ಯಕ್ಕೆ ದಕ್ಕಿರುವ ಸಹಜವಲ್ಲದ ವಿಸ್ತಾರ, ಸಂಕೀರ್ಣತೆಯನ್ನು ತಂದಿದೆ. ಕಾವ್ಯಪರಿಸರಕ್ಕೆ ಅದು ನೀಡಿರುವ 'ಅಭಿನಯಶೀಲತೆ'. ಹಿಂದೆ ಅವರು ಪ್ರಯತ್ನಿಸಿದ್ದ ಕ್ರಿಯಾಪಲ್ಲಟವನ್ನು ಆಯಾಚಿತವಾಗಿ ಒದಗಿಸಿದೆ. ಇನ್ನೊಂದು ಸಂಕೀರ್ಣವಾದ ಅಭಿವ್ಯಕ್ತಿ ಕ್ರಮದ ಮೂಲಕ 'ಕವಿತೆ' ಮಂಡಿಸುವ ಪ್ರಯತ್ನ, ಇಲ್ಲಿ ಆಲೋಚನೆಯ ನೆಲೆಯಲ್ಲಿ ಕೆ.ಎಸ್.ನ ತಮ್ಮ ಮೂಲ ನೆಲೆಯಲ್ಲೇ ಉಳಿದು ಅಭಿವ್ಯಕ್ತಿಯಲ್ಲಿ ಸಂಕೀರ್ಣವಾಗುತ್ತಾರೆ. ಇದೊಂದು ರೀತಿ ಕವಿ ಮನಃಪೂರ್ವಕವಾಗಲ್ಲದೆ, ತಾನೂ ಬರೆಯಬಲ್ಲೆ ಎಂದು ಸಾಬೀತುಪಡಿಸಲು ಬಳಸಿಕೊಂಡ ಮಾರ್ಗ. ಹಾಗಾಗಿ ಅಸ್ಪಷ್ಟತೆ, ಕ್ಲಿಷ್ಟತೆ ಎಲ್ಲವೂ ಇಲ್ಲಿ ಕಾಣಿಸಿಕೊಳ್ಳುತ್ತದೆ. ಮುಂದೆ ಕೆ.ಎಸ್.ನ ಅವರಿಗೂ ಇದು ಅರ್ಥವಾಗಿ ಆ ಮಾರ್ಗ ಕೈಬಿಟ್ಟಿರುವಂತೆ ತೋರುತ್ತದೆ.

ಈ ಎರಡನೇ ನೆಲೆಯಲ್ಲಿ ಬಂದ ಕಾವ್ಯಗಳೆಲ್ಲ ಅಸ್ಪಷ್ಟವಾಗಿ ಅಮುಖ್ಯವಾಗುತ್ತದೆ ಎಂದು ಹೇಳಲಾಗದು. ಈ ಹಂತದಲ್ಲೇ ಬಂದ 'ಗಡಿಯಾರದಂಗಡಿಯ ಮುಂದೆ' ಕವಿತೆ ವಸ್ತು ಮತ್ತು ಅಭಿವ್ಯಕ್ತಿಗಳೆರಡರಲ್ಲೂ ಗಮನಾರ್ಹವಾಗಿ ಸಂಕೀರ್ಣತೆ ಒಳಗೊಂಡ ಕವಿತೆ. ಇದು ಕೆ.ಎಸ್.ನ ಅವರ ಕವಿತೆಗಳಲ್ಲಿ ಬಿಡಿ ಬಿಡಿಯಾಗಿ ಬಂದಿರುವ ದರ್ಶನಗಳನ್ನು ಒಟ್ಟಾಗಿಸಿಕೊಂಡು ಸಮಗ್ರ ಧೋರಣೆ ಬಿಂಬಿಸುವಂತೆ ಕಾಣುತ್ತದೆ. ಈ ಕವಿತೆಯಲ್ಲಿ ಬಳಕೆಯಾಗಿರುವ ಎಲ್ಲಾ ಪ್ರತಿಮೆಗಳೂ ಬೇರೆ ಬೇರೆ ಕಾಲದಲ್ಲಿ ಕೆ.ಎಸ್.ನ ಕವಿತೆಗಳಲ್ಲಿ ಬಂದಿರುವಂತಹುದೇ. ಇಲ್ಲಿ ಒಟ್ಟಾಗಿ ಬಂದಿರುವುದು ಹಲವು ಸಾಧ್ಯತೆಗಳನ್ನು ಪಡೆಯಲು ನೆರವಾಗಿದೆ, ಈ ಸಾಧ್ಯತೆಗಳು ಕೆ.ಎಸ್.ನ ಅವರ ಕವಿತೆಗಳ ಓದಿಗೆ ಹೊಸ ಆಯಾಮ ನೀಡಬಲ್ಲದಾಗಿವೆ. ಕವಿತೆಯ ಆರಂಭ "ಗಂಟೆ ಎಷ್ಟು" ಎಂದು ಕೇಳುವ ಸರಳ ಸಂವಾದದಿಂದ ಆರಂಭವಾಗುತ್ತದೆ. ಮೊದಲ ಮೂರು ಪಂಕ್ತಿಗಳಲ್ಲಿ ಕಾಲದ ವಿಶಾಲತೆ ಸೂಚಿಸುವ ಬೇರೆ ಬೇರೆ ಚಿತ್ರಣಗಳಿವೆ. ನಂತರ "ನನಗಿತ್ತು ಮೊದಲಿಗೆಲ್ಲ ಬದಲಿಸುವಾಸೆ" ಎಂಬ ಯೌವನದ ಹುಮ್ಮನಸ್ಸಿನ ಚಿತ್ರಣ ಬರುತ್ತದೆ. ಅಲ್ಲಿ ಕಾಣುವುದು 'ಮೊದಲೆ ಬದಲಾದ ಬಂಡೆ'. ಇಲ್ಲಿ "ದೂರ ತೀರದ ನಿನ್ನನ್ನು

ಬಳಿಗೆ ಕರೆವ ಕಾಲ" ಬರುತ್ತದೆ. ತಕ್ಷಣ 'ಮೈಸೂರು ಮಲ್ಲಿಗೆ'ಯ ವಾತಾವರಣ ನೆನಪಾಗುತ್ತದೆ. ಆದರೆ ಇಲ್ಲಿ 'ಚೈತ್ರದ ಮಾವಿ'ಗೆ ಜೂಲು ನಾಯಿಯ ಜೋಲಿ ಇದೆ ಪರಿಣಾಮ 'ತಳಿರು' ಕೆನ್ನಾಲಿಗೆಯ 'ಬೆಂಕಿ ಪರವೆ'ಯಾಗುತ್ತದೆ. ಮೋಡದೊಳಗಿನ ಬಂಗಾರ ದಂಗಾಲು ಮುಂಗಾರ 'ಕಂಬನಿ ಕೊಡಿಗೆ'ಯಾಗಿ ಹರಿದು 'ಕಾಡ ಹೊಳೆ'ಯಾಗುತ್ತದೆ. ನಲಿವ ಜಿಂಕೆಯಳಿದು ಚಕ್ಕಳದಂಚು ಮಾತ್ರ ನಿಲ್ಲುತ್ತದೆ.

ಕೆ.ಎಸ್.ನ ಕಾವ್ಯ ಎಂದರೆ ಇಷ್ಟೇ ಎನ್ನುವವರಿಗೆ ಸವಾಲಾಗುವಂತೆ ಇಲ್ಲಿ ಮಳೆ ನಿಂತು ಚಳಿಯೂ ಬರುತ್ತದೆ. "ಗಲ್ಲ ಬೆಳ್ಳಗೆ ಹುಡುಗಿ ಮುತ್ತನಿತ್ತ ತುಟಿಗೆ ಬಿಳಿ ಹೂವ ಮುಟ್ಟಿಸುತ್ತಾಳೆ" "ಸಂಜೆಗೊಬ್ಬಳು ಮುದುಕಿ ಕೊನೆಯ ಕೆಂಡವ ಕೆದಕಿ ಎತ್ತಿ ಮುಡಿದಳು ಇತ್ತ ಗಂಟು ಜಡೆಗೆ" ಎಂಬ ಸಾಲಿನ ಚಿತ್ರಣ ಬರುತ್ತದೆ. ಕೆ.ಎಸ್.ನ ಮೈಸೂರ ಮಲ್ಲಿಗೆ ನವಿರನ್ನು ಬಲ್ಲಂತೆ ಬದುಕಿನ ಕಾಠಿಣ್ಯವನ್ನೂ ಬಲ್ಲರು ಎಂಬುದಕ್ಕೆ ಈ ಸಾಲೇ ಸಾಕ್ಷಿ. ಆದರೆ ಬಹಳ ಮುಖ್ಯವಾದ ಸಂಗತಿ ಎಂದರೆ ಕವಿತೆ ಈ ಸಾಲಿಗೇ ಮುಗಿಯುವುದಿಲ್ಲ. "ಪಳೆಯುಳಿಕೆ ಕನಸಾಚೆಗೈದು" ಬಣ್ಣದ ಹಸೆಗೆ ಸುಂದರಿ ಬರುತ್ತಾಳೆ. ಮಾತ್ರವಲ್ಲ ಅವಳಿಗೆ 'ಲಜ್ಜೆ'ಯೂ ಇದೆ. ಹೀಗೆ ಕೆ.ಎಸ್.ನ ಕಾಠಿಣ್ಯದ ತಾರಕದಲ್ಲಿ ಚೆಲುವಿನ ಎಳೆ ಕಾಣಬಲ್ಲವರು. ಇದು ಅವರ ಕಾವ್ಯ ಧೋರಣೆ ಕೂಡ. ಕವಿತೆಯ ಕೊನೆಯ ಸಾಲು "It is not an explanation of things. It is something better" ಎಂಬ ಅವರ ಇಡೀ ಕಾವ್ಯ ಪ್ರಪಂಚಕ್ಕೆ ಸಲ್ಲುವ ಮಾತು. ಪಾತಾಳದಂಚಿನಲ್ಲಿ ಸ್ವರ್ಗದ ಬಿಂದು ಕಾಣುವ ಆಶಾವಾದವೇ, ಅವರನ್ನೂ ಕೊನೆಯವರೆಗೂ ಕವಿತೆ ಬರೆವಂತೆ ಮಾಡಿದ ಶಕ್ತಿ.

'ನವಪಲ್ಲವ'ಕ್ಕೆ ಬಂದಾಗ ಕೆ.ಎಸ್.ನ ತಮ್ಮ ಹಳೆಯ ಜಾಡಿಗೆ ಮರಳಿದ್ದಾರೆ ಅನ್ನಿಸುವುದು ಮೇಲ್ನೋಟಕ್ಕೆ ಸಹಜ. ಕವಿಯದು ಸಂವಹನಶೀಲತೆ ಕುರಿತ ತುಡಿತವಾದ್ದರಿಂದ, ತಾವು ತುಳಿದ ದಾರಿ ಅರ್ಥವನ್ನು ನಿರ್ದಿಷ್ಟಗೊಳಿಸುತ್ತಿಲ್ಲ ಎಂದು ಅವರಿಗನ್ನಿಸಿರಬೇಕು. ಹೀಗಾಗಿ ಶಿಲ್ಪ, ಶೈಲಿ ಕುರಿತಾಗಿ ತಮ್ಮಿಂದ ಜನ ಬಯಸುವ ಜಾಡಿಗೆ ಅವರು ಮರಳಿದಂತೆ ಕಾಣುತ್ತದೆ. ಇಂತಹ ರಾಜಿ ಬಂಧಕ್ಕೆ ಮಾತ್ರ ಸಂಬಂಧಪಟ್ಟಿದ್ದೇ ಹೊರತು ವಸ್ತುವಿನಲ್ಲವೆಂಬುದನ್ನು, ನಾವು ಎಚ್ಚರಿಕೆಯಿಂದ ಗಮನಿಸಿಕೊಳ್ಳಬೇಕು. "ನಿಮ್ಮುಸಿರು ನನ್ನ ಕವಿತೆ" ಎಂದು ಕರೆದುಕೊಂಡ, ಅವರಿಗೆ ಜನರಿಗೆ ತಲುಪದ ಬಗೆಯ ಕಾವ್ಯ ಬೇಡವಾಗಿತ್ತು. ಅವರಿಗೆ ಕವಿತೆ ಸಮುದಾಯದ ಅಗತ್ಯವೇ ಹೊರತು ವೈಯಕ್ತಿಕ ತುರ್ತಾಗಿರಲಿಲ್ಲ ಎಂಬುದನ್ನು ಎಚ್ಚರಿಕೆಯಿಂದ ಗಮನಿಸಬೇಕು. "ಸಿಟ್ಟನ್ನು ಮನುಷ್ಯ ನುಡಿಸುವುದರಲ್ಲೂ ಎರಡು ಬಗೆ, ಒಂದು ಸಿಟ್ಟಿನ ಭರದಲ್ಲೇ ನುಡಿಯುವುದು, ಇನ್ನೊಂದು ಅದನ್ನು ಅನುಭವಿಸಿ, ಅರಗಿಸಿಕೊಂಡು ಅದರ ಪರಿಪಾಕವನ್ನು ನುಡಿವುದು, ನನ್ನದು ಎರಡನೇ ತರಹ" ಎಂದು ತಮ್ಮ ಕಾವ್ಯವನ್ನು ಅವರು ವರ್ಣಿಸಿಕೊಂಡಿದ್ದರೆಂಬುದನ್ನು ಇಲ್ಲಿ ನೆನೆಯಬಹುದಾಗಿದೆ. ಕೆ.ಎಸ್.ನ ಕವಿತೆಗಳಲ್ಲಿ ಕಾಣುವ ಆಶಾವಾದವನ್ನು ಭಾರತೀಯ ಜಾನಪದದ ನೆಲೆಯಲ್ಲಿ ನೋಡುವ ಎಚ್.ಎಸ್. ಆರ್ ಅವರ ವಿಶ್ಲೇಷಣೆ ಬಹು ಸಮರ್ಪಕವಾದದ್ದು. ಕೆ.ಎಸ್.ನ ಎಲ್ಲಾ ಅರ್ಥದಲ್ಲೂ ಸಕಲರಿಗೂ ಒಳಿತನ್ನು ಬಯಸುವ ಆಶಾವಾದಿ, ಇದು ಉದಾತ್ತ ಚಿಂತನೆಯೇ ಹೊರತು ಬೊಳೆತನವಲ್ಲವೆಂದು ಎಚ್ಚರಿಕೆಯಿಂದ ಗುರುತಿಸಬೇಕಾಗಿದೆ.

ಕೆ.ಎಸ್.ನ ಅವರ ಬದುಕಿನ ಕೊನೆ ದಿನಗಳಲ್ಲಿ ಅಕ್ಷರಶಃ ಪುಂಖಾನುಪುಂಖ ಕವಿತೆಗಳು ಬಂದವು. ಕಣ್ಣು ಕಾಣದಾದಾಗಲೂ ಭರವಸೆ ಕಳೆದುಕೊಳ್ಳದವರಂತೆ ಕವಿತೆ ಬರೆಯುತ್ತಲೇ ಹೋದರು. ಇಂತಹ ಕಾವ್ಯ ಪ್ರವಾಹದಲ್ಲಿ ವಿಮರ್ಶೆ ಮಾನದಂಡ ಹಿಡಿದು ದೋಷ ಹುಡುಕುವುದು ಸುಲಭ, ಮಹತ್ವಪೂರ್ಣ

ಚಿಂತನೆಗಳ ಕೊರತೆ ಎತ್ತಿ ತೋರಿಸುವುದು ಸುಲಭ. ಆದರೆ ಪ್ರಮುಖ ಕವಿಯೊಬ್ಬರಿಗೆ ಕಾವ್ಯ ಆಯ್ಕೆಯಾಗದೆ ಅನಿವಾರ್ಯವಾದ ದುರ್ಭರ ಸ್ಥಿತಿಯಲ್ಲೂ 'ಸೃಂತಿಕೆ'ಯ ನೆಲೆ ಎಷ್ಟರಮಟ್ಟಿಗಿದೆ ಎಂದು ಗಮನಿಸಬೇಕಾದ್ದು ನಿಜವಾದ ಸಾಹಿತ್ಯಿಕ ಧರ್ಮ ಎಂಬುದು ನನ್ನ ನಂಬಿಕೆ. 'ಕಾವ್ಯ ಪ್ರವಾಹ' ಎಂಬುದು ನಿಜವಾದರೂ ಅಲ್ಲಿ ಕಾವ್ಯ 'ಸಲೀಸಾಗಿಲ್ಲ', ಅಂತರಂಗದಿಂದಲೇ ಚಿಮ್ಮಿದೆ ಎಂಬುದು ಗಮನಿಸಬೇಕಾದ ಮೊದಲ ಸಂಗತಿ. ಹೀಗಾಗಿ ಕಾವ್ಯ ಬಂಧದಲ್ಲಿ ಅಚ್ಚುಕಟ್ಟುತನವಿದೆ. ಭಾಷೆಯಲ್ಲಿ ಸಂವಹನಾಶೀಲವಾಗಿದೆ. ಕಾಲ ತನಗೆದುರಾಗಿ ನಿಂತಾಗಲೂ ಕವಿ ನಿಸಿಕನಾಗಿಲ್ಲ, ಹತಾಶನಾಗಿಲ್ಲ. ಅಷ್ಟೇ ಅಲ್ಲ ಕಾಣದ ಶಕ್ತಿಗೆ ಮೊರೆ ಇಡುತ್ತಿಲ್ಲ. ಬದುಕಿನ ಚೆಲುವಿಗೇ ಮೊರೆ ಹೋಗಿದ್ದಾನೆ ಎಂಬುದು ಎರಡನೆಯ ಬಹಳ ಮುಖ್ಯವಾದ ಸಂಗತಿ. ಮೂರನೆಯ ಪ್ರಮುಖ ಸಂಗತಿ ಎಂದರೆ ಕಾವ್ಯ ಹೊಮ್ಮಿದ್ದು ತನ್ನ ತುರ್ತಿನಿಂದಾದರೂ ಕೆ.ಎಸ್.ನ ಯಾವ ಹಂತದಲ್ಲೂ ಅದನ್ನು ತನ್ನ ಖಾಸಗಿ ಅಭಿವ್ಯಕ್ತಿಯಾಗಿಸದೆ, ಮನುಕುಲದ ಹಾಡನ್ನಾಗಿಯೇ ಉಳಿಸಿಕೊಂಡರು ಎನ್ನುವುದು. ಇಂತಹ ಮನೋಭಾವಕ್ಕೆ ವಿಶ್ವಮಟ್ಟದಲ್ಲೂ ಬಹಳ ಕಮ್ಮಿ ಉದಾಹರಣೆಗಳು ಸಿಕ್ಕಬಹುದು. ಈ ಅರ್ಥದಲ್ಲಿ ಕೆ.ಎಸ್.ನ ಅವರ ಅಂತಿಮ ದಿನಗಳ ಕಾವ್ಯಕ್ಕೆ ನನ್ನಮಟ್ಟಿಗೆ ಐತಿಹಾಸಿಕ ಮಹತ್ವವಿದೆ. "ಮಾನವ ಹೃದಯದ ಕರುಣೆಗೆ ಒಲವಿಗೆ ದನಿಗೂಡಿಸುವಾಸೆ" ಎಂದು ತಮ್ಮ ಹಕ್ಕಿಯ ಹಾಡಿನಲ್ಲಿ ಹೇಳಿಕೊಂಡಿದ್ದ ಕವಿ ಅದನ್ನು ತಮ್ಮ ಕಾವ್ಯದಲ್ಲಿ ಅಕ್ಷರಶಃ ಸಾಧಿಸಿ ತೋರಿಸಿದರು.

ಕನ್ನಡ ಕಾವ್ಯದಲ್ಲಿ ಕೆ.ಎಸ್.ನ ಅವರ ಸ್ಥಾನವೇನು ಎಂಬುದು ಬಹಳ ಮುಖ್ಯವಾದ ಪ್ರಶ್ನೆ, ಅವರನ್ನು 'major voice' ಅಲ್ಲ ಎಂದು ತಳ್ಳಿ ಹಾಕುವ ಪ್ರಯತ್ನಗಳು ನಡೆದಂತೆ, ಸಾಮಾನ್ಯರ ಬದುಕಿಗೆ ಕಾವ್ಯದ ಹಿರಿಮೆ ಕೊಟ್ಟ ಏಕೈಕ ಕವಿ ಎಂಬ ಉತ್ಪ್ರೇಕ್ಷೆಯ ಮಾತುಗಳೂ ಬಂದಿವೆ. ಸಮತೂಕದ ನೆಲೆಯಲ್ಲಿ ನೋಡಿದರೆ ಕೆ.ಎಸ್.ನ ಕಾವ್ಯ ಮಹಾನ್ ಎತ್ತರಕ್ಕೂ ಏರದ, ನಗಣ್ಯವೂ ಆಗದ ಮಧ್ಯಮ ಸ್ಥಿತಿಯದು 'ಸುವರ್ಣ ಮಧ್ಯಮ' ಎಂದು ಅವರೇ ಅದನ್ನು ಬಿಂಬಿಸಿದ್ದಾರೆ. ಆದರೆ ಕೆ.ಎಸ್.ನ ಮುಖ್ಯವಾಗುವುದು ದೀರ್ಘಕಾಲ ಉಳಿಸಿಕೊಂಡು ಬಂದ 'ಕಾವ್ಯ ಜೀವಂತಿಕೆ'ಗೆ ೭-೮ ದಶಕಗಳ ಕಾಲ 'ಜೀವಂತ ಕಾವ್ಯ' ರಚಿಸುವುದು ಖಂಡಿತ ಸಾಮಾನ್ಯ ಸಂಗತಿಯಲ್ಲ. ನವ್ಯ - ದಲಿತ - ಬಂಡಾಯಗಳ ಅಬ್ಬರದ ನಡುವೆಯೂ ಅವರು 'ಜೀವಂತ ಕಾವ್ಯ'ವನ್ನು ನಿರಂತರವಾಗಿ ರಚಿಸುತ್ತಾ ಬಂದರು ಎಂಬುವದಕ್ಕೆ ಐತಿಹಾಸಿಕ ಮಹತ್ವವಿದೆ. ಕೆ.ಎಸ್.ನ 'ಗ್ರೇಟ್' ಅನ್ನಿಸುವುದು ಈ ಕಾರಣಕ್ಕೇ.

No legends !

ಕವಿತೆಯ ಹುಟ್ಟು ಯಾವಾಗಲೂ ಒಂದು ನಿಗೂಢವೇ. ಕಾವ್ಯ ರಚನೆಯ ರಹಸ್ಯವನ್ನು ವಿವರಿಸಬಹುದಾದರೂ ಒಂದು ಅನುಭವ ಕವಿತೆಯಾಗಿ ಆಕಾರ ತಾಳುವ ಪವಾಡವನ್ನು ಹೀಗೆ ಎಂದು ಹೇಳುವುದು ಕಷ್ಟ. ಕಾವ್ಯ ಮೀಮಾಂಸೆಯಲ್ಲಿ ನಮ್ಮ ಅಲಂಕಾರಿಕರು ಕಾವ್ಯ ರಚನೆಗೆ ಸಿದ್ಧತೆಗಳೆಂದು ಅನೇಕ ಸಂಗತಿಗಳನ್ನು ಹೇಳಿದ್ದಾರೆ. ಆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಕುಳಿತುಕೊಂಡರೂ ಕವನದ ಒಂದು ಸಾಲೂ ಹೊಳೆಯದಿರಬಹುದು. ಒಂದು ಅನುಭವ ಕವಿತೆಯಾಗುವ ಮ್ಯಾಜಿಕ್ ಬಗ್ಗೆ ಸ್ವತಃ ಕವಿಗೂ ಕುತೂಹಲವಿರುತ್ತದೆ. ನರಸಿಂಹಸ್ವಾಮಿ ಕಾವ್ಯ ರಚನೆಯನ್ನು ಹೇಗೆ ಮಾಡುತ್ತಾರೆಂಬುದರ ಬಗ್ಗೆ ನಮಗೆ ಕುತೂಹಲ. ಆ ಬಗ್ಗೆ ಕೇಳಿದಾಗ ಅವರು ತಕ್ಷಣ ಕೊಟ್ಟ ಉತ್ತರ 'No legends'.

- ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ (ಕೆಎಸ್‌ನ ನುಡಿಮಲ್ಲಿಗೆ)

ಕಾವ್ಯದೊಡಲಲ್ಲಿ ಕಣ್ಣು ಕಪ್ಪೆಯ ಚಿಪ್ಪಿನಗಲ ದೋಣಿ

- ಕೆ.ಎಸ್.ನರಸಿಂಹಸ್ವಾಮಿ.

೫೫ ವರುಷಗಳ ಹಿಂದೆ* ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಬೇಸುಗೆಯ ರಜದಲ್ಲಿ ಯಾರೋ ಪುಣ್ಯಾತ್ಮರು ಬರ್ನ್ಸ್ ಕವಿಯ ಕವನ ಸಂಗ್ರಹವನ್ನು ನನ್ನ ಕೈಗೆ ಹಾಕಿದರು. ಅದನ್ನು ಓದುತ್ತ ಓದುತ್ತ ಅದೇ ಧಾಟಿಯಲ್ಲಿ ನಾನೂ ಒಂದು ಕವನವನ್ನು ಇಂಗ್ಲೀಷಿನಲ್ಲಿ ಬರೆದೆ. ಗೆಳೆಯರ ಮುಂದೆ ಅದನ್ನು ಓದಿದೆ. ನನ್ನನ್ನು ಮೊದಲ ಬಾರಿಗೆ 'ಕವಿ' ಎಂದು ಕರೆದವರು ಅವರು. ಇಂಗ್ಲಿಷ್ ಕವಿತೆಯ ಗುಲಾಬಿ ತೋಟದಲ್ಲಿದ್ದ ನನ್ನನ್ನು ಶ್ರೀಯವರ ಇಂಗ್ಲಿಷ್ ಗೀತೆಗಳು ಕನ್ನಡಕ್ಕೆ ಬರಮಾಡಿಕೊಂಡವು.

ಕನ್ನಡ ಕವಿಯಾಗುವ ಆಸೆ ಬಂತು. ಪುರಾಣದ ಕಟ್ಟೆಯಲ್ಲಿ ಗದುಗಿನ ಭಾರತವನ್ನು ಕೇಳಿದೆ. ಬರ್ನ್ಸ್ ಕವಿಗೆ ಜನಪದ ಗೀತೆಗಳೆಂದರೆ ತುಂಬಾ ಇಷ್ಟ. ನಾನೂ ಅವನನ್ನು ಅನುಸರಿಸಿ ಹಳ್ಳಿಗೆ ಹೋಗಿ ಜನಪದ ಕವಿತೆಯ ಸೊಬಗನ್ನು ಹೃದಯದಲ್ಲಿ ತುಂಬಿಕೊಂಡೆ. ಹಳ್ಳಿಯಲ್ಲಿ ನಮ್ಮ ಎದುರು ಮನೆಯ ಜಗಲಿಯ ಮೇಲೆ ಹಗಲೂ ರಾತ್ರಿ ಚಿನ್ನ ಬೆಳ್ಳಿ ಕೆಲಸ ನಡೆಯುತ್ತಿತ್ತು. ಛಂದಸ್ಸಿನ ಕಲ್ಪನೆ ನನಗೆ ಮೊದಲು ಬಂದದ್ದು ಅಲ್ಲಿಯೇ. ನಮ್ಮ ತಾಯಿ ಶಾನುಭೋಗರ ಮಗಳು. ನಮ್ಮ ತಂದೆ ಮೈಸೂರಿನಲ್ಲಿ ಶೆಟ್ಟರ ಅಂಗಡಿಯಲ್ಲಿ ಗುಮಾಸ್ತೆಯಾಗಿದ್ದರು; ಸಂಜೆಯಾದರೆ ಮನೆಗೆ ಬಂದು ಪಯೊಲಿನ್ ನುಡಿಸುತ್ತಿದ್ದರು, ಸುಪ್ರಸಿದ್ಧ ಸಂಗೀತ ವಿದ್ವಾಂಸರು ಆಗಾಗ ನಮ್ಮ ಮನೆಗೆ ಬರುತ್ತಿದ್ದರು; ಅವರ ಹಾಡುಗಾರಿಕೆ ನನ್ನ ಮನಸ್ಸನ್ನು ಸೆಳೆಯಿತು. ದೊಡ್ಡ ಗಡಿಯಾರದ ಎದುರಿಗೆ ಒಂದು ಹೂವಿನ ಅಂಗಡಿ ಇತ್ತು. ಅದರ ಮಾಲೀಕರಾದ ಸಾಹೇಬರು ತುಂಬಾ ದೊಡ್ಡ ಮನುಷ್ಯರು. ಆಗಾಗ ನಾನು ಅವರ ಅಂಗಡಿಗೆ ಹೋಗುತ್ತಿದ್ದೆ. ಅವರು ಹೂ ಕಟ್ಟುವುದರ ಮೇಲೆ ನನ್ನ ಕಣ್ಣು. ರೇಷಿಮೆಯ ನೂಲಿಗಿಂತ ತೆಳುವಾದ ಬಾಳೆಯ ನಾರಿನಲ್ಲಿ ಅವರು, (ನನ್ನೊಂದಿಗೆ ಮಾತಾಡುತ್ತಲೇ) ದೂರ ದೂರಕ್ಕೆ ಗುಲಾಬಿ, ಸಂಪಿಗೆ, ಮರುಗ, ಪಚ್ಚೆತೆನೆ ಇಟ್ಟು ಮಲ್ಲಿಗೆ ದಂಡೆ ಹೆಣೆದರೆಂದರೆ - ಅದೇ ಒಂದು ಭಾವಗೀತೆ. ಅವರು ಪುಷ್ಪಕವಿ. ಕಾವ್ಯಪಂಕ್ತಿಯ ಕಲ್ಪನೆ ನನಗೆ ಮೊದಲು ಬಂದದ್ದು ಅಲ್ಲಿಯೇ. ನಾನು ಕಾವ್ಯ ಕ್ಷೇತ್ರದಲ್ಲಿ ಕಾಲಿಟ್ಟಿದ್ದಕ್ಕೆ ಇವೆಲ್ಲ ಕಾರಣಗಳಿರಬಹುದು.



---

* ೨೦.೨. ೧೯೮೬

ನನ್ನ ಮೊತ್ತಮೊದಲ ಕವನ 'ಕಬ್ಬಿಗನ ಕೂಗು' ೧೯೪೨ರಲ್ಲಿ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳ ಕೃಪೆಯಿಂದ 'ಪ್ರಬುದ್ಧ ಕರ್ನಾಟಕ'ದಲ್ಲಿ ಅಚ್ಚಾಯಿತು (ಈಗಲೂ ಅದರ ವಿಳಾಸ ಅದೇ). ಆಗ ನಾನು ಮೈಸೂರು ಇಂಟರ್ಮಿಡಿಯಟ್ ಕಾಲೇಜಿನಲ್ಲಿ ಪ್ರಿ-ಇಂಜಿನಿಯರಿಂಗ್ ಓದುತ್ತಿದ್ದೆ. ರಾಷ್ಟ್ರಕವಿ ಕುವೆಂಪು ಅವರು ಅಲ್ಲಿ ಕನ್ನಡದ ಅಧ್ಯಾಪಕರಾಗಿದ್ದರು. ನನ್ನ ಕಾವ್ಯ ಕುತೂಹಲವನ್ನು ಗಮನಿಸಿದ ಪೂಜ್ಯ ಕೃಷ್ಣಶಾಸ್ತ್ರಿಗಳು ನನಗೊಂದು ಪತ್ರ ಬರೆದು ನನ್ನ ಕವನವನ್ನು ಕವಿವರ್ಯರಿಗೆ ತೋರಿಸುವಂತೆ ಸಲಹೆ ಮಾಡಿದರು. ಮರುದಿನವೇ ನಾನು ರಾಮಕೃಷ್ಣಾಶ್ರಮಕ್ಕೆ ಹೋಗಿ ಪುಟ್ಟಪ್ಪನವರನ್ನು ಕಂಡೆ; ನನ್ನ ಹರುಕ-ಮುರುಕ ಕವನಗಳನ್ನು ಅವರಿಗೆ ತೋರಿಸಿದೆ. ಅವರು ನೀಡಿದ ಪ್ರೋತ್ಸಾಹವೇ ನನ್ನ ಕವಿತೆಯ ತಳಹದಿಯಾಯಿತು. ನನ್ನ ಹಾದಿಯಲ್ಲಿ ನನ್ನ ಹೆಜ್ಜೆ ದೃಢವಾಯಿತು.

ಆ ನಂತರ ನನ್ನ ಕವಿತೆ 'ಜಲುಮೆ'ಯ ಕವಿ ತೀನಂಶ್ರೀಯವರ ಆರೈಕೆಯಲ್ಲಿ ಬೆಳೆಯಿತು; ತುಂಬಾ ಎತ್ತರದವರಾದ ಟಿ.ಎಸ್. ವೆಂಕಣ್ಣಯ್ಯನವರ ವಾತ್ಸಲ್ಯಕ್ಕೆ ಪಾತ್ರವಾಯಿತು. ೧೯೩೨ ರಿಂದ ೧೯೪೧ ರವರೆಗಿನ 'ಪ್ರಬುದ್ಧ ಕರ್ನಾಟಕ'ದ ಎಲ್ಲ ಸಂಚಿಕೆಗಳಲ್ಲಿ ಕಾಣಿಸಿಕೊಂಡಿತು. ಹೀಗೆ ಪ್ರಕಟಗೊಂಡ ಬಿಡಿ ಕವನಗಳನ್ನು ಪುಸ್ತಕ ರೂಪದಲ್ಲಿ ಸಂಗ್ರಹಿಸಬೇಕೆಂದು ಕೃಷ್ಣಶಾಸ್ತ್ರಿಗಳೂ, ತೀನಂಶ್ರೀಯವರೂ ನಿರ್ಧರಿಸಿದರು. ಮಹಾರಾಜ ಕಾಲೇಜಿನ ಕರ್ನಾಟಕ ಸಂಘ ಪ್ರಕಟಿಸಲು ಒಪ್ಪಿತು. ಇದೇ ಸಮಯದಲ್ಲಿ ಪೂಜ್ಯ ಮಾಸ್ತಿಯವರಿಗೂ ನನ್ನ ಕವನ ಸಂಗ್ರಹದ ಪ್ರಕಟಣೆಗೆ ನೆರವಾಗುವ ಇಚ್ಛೆ ಬಂದಿರುವುದು ತಿಳಿಯಿತು. ಆಗ ನಾನು ಬೆಂಗಳೂರಿಗೆ ಬಂದು ಅವರನ್ನು ಕಂಡು ಮೈಸೂರಿನಲ್ಲಿ ನಡೆದಿರುವ ಏರ್ಪಾಡನ್ನು ತಿಳಿಸಿ ಅವರ ಆಶೀರ್ವಾದವನ್ನು ಕೋರಿದೆ. ಬಳಿಕ ಪೂಜ್ಯ ಡಿ.ವಿ.ಜಿ ಯವರನ್ನು ಕಂಡು ಮುನ್ನುಡಿ ಬರೆಯಲು ಕೋರಿದೆ. ಅವರಿಂದ ಮುನ್ನುಡಿ ಸಿಕ್ಕಲಿಲ್ಲ; ಅದಕ್ಕೂ ಮಿಗಿಲಾದ ಪತ್ರ ಸಿಕ್ಕಿತು. ೧೯೪೨ರ ಜನವರಿಯಲ್ಲಿ ಒಂದು ಸಂಜೆ ಮಹಾರಾಜ ಕಾಲೇಜಿನ ವಿಸ್ತಾರವಾದ ಅಂಗಳದಲ್ಲಿ ನಡೆದ ಒಂದು ಸಂಭ್ರಮದ ಸಮಾರಂಭದಲ್ಲಿ 'ಮೈಸೂರು ಮಲ್ಲಿಗೆ' ಬೆಳಕಿಗೆ ಬಂತು. ಹಿರಿಯರು ಅಕ್ಷತೆ ಹಾಕಿದರು.

ನಾನು ಕಾವ್ಯಾರಂಭ ಮಾಡಿದ ಕಾಲದಲ್ಲಿ ಕಾವ್ಯದ ಸ್ವರೂಪ ಸ್ವಭಾವಗಳ ಬಗೆಗೆ ನಾನು ಅಷ್ಟಾಗಿ ಯೋಚಿಸಲಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ನನಗಾದ ಯಾವುದೋ ಒಂದು ಅನುಭವ ನನಗೆ ಹೊಸತೆಂದು ಕಂಡಾಗ, ಮತ್ತು ಅದನ್ನು ಹೆಚ್ಚು ಜನರಿಗೆ ತಿಳಿಯುವ ಮಾತಿನಲ್ಲಿ ಮೂಡಿಸಬೇಕೆಂಬ ಹಂಬಲ ನನಗೆ ಉತ್ಕಟವಾದಾಗ ಕವನ ತನ್ನ ಮೊದಲ ಪಂಕ್ತಿಯನ್ನು ತಾನೇ ಸೂಚಿಸಿಕೊಂಡು ರೂಪುಗೊಳ್ಳುತ್ತಿತ್ತು. ನಾನು ಕಾವ್ಯಾರಂಭ ಮಾಡಿದ್ದು ಹೊಸಗನ್ನಡ ಸಾಹಿತ್ಯದ ಅಪೂರ್ವ ಸುಪ್ರಭಾತದಲ್ಲಿ, ಅನೇಕ ಪ್ರತಿಭಾ ಸಂಪನ್ನರು ಏಕಕಾಲದಲ್ಲಿ ಉದಯಿಸಿ ಸಾಹಿತ್ಯದ ನಾನಾ ಪ್ರಕಾರಗಳಿಗೆ ನವಚೇತನ ತುಂಬುತ್ತಿದ್ದ ಕಾಲದಲ್ಲಿ. ಆಗ ಎಲ್ಲೋ ಒಂದು ಕೊಂಬೆಯ ಮೇಲೆ ನನ್ನದೂ ಒಂದು ದನಿ. ಆ ಕಾಲವೇ ತನ್ನ ಹೊಸತನವನ್ನು ಸುಳಿವು ಕೊಡದೆ, ನನ್ನ ಕವನಗಳಿಗೆ ಒದಗಿಸಿತೆಂದು ನನ್ನ ನಂಬಿಕೆ.

೧೯೪೨ ರಿಂದ ೧೯೫೫ರವರೆಗೆ ಪ್ರಕಟವಾದ ೬ ಕವನ ಸಂಗ್ರಹಗಳಲ್ಲಿ ನನ್ನ ಜೀವನಾನುಭವ ವಿಸ್ತಾರವಾದದ್ದನ್ನೂ, ಅದಕ್ಕನುಗುಣವಾಗಿ ನನ್ನ ಕವಿತೆಯ ಧ್ವನಿ - ಲಯಗಳು ಬದಲಾದ್ದನ್ನೂ ಕಾಣಬಹುದು. ಇದಕ್ಕೆ ಕಾರಣ ನನಗೆ ಪೂಜ್ಯ ವಿ.ಸೀ. ಅವರ ಮನೆಯಲ್ಲಿ ನಡೆದ ಇಂಗ್ಲಿಷ್ ಕಾವ್ಯ - ಪಾಠ, ಅದರಿಂದ ಒಂದು ಹೊಸಬೆಳಕನ್ನು ಕಂಡಂತಾಯಿತು. ಈ ಬೆಳಕಿನಲ್ಲಿ ನಾನು ಬರೆದ ಹೊಸ ಕವನಗಳನ್ನು ಅವರ ವಿಮರ್ಶೆಗೊಳಪಡಿಸಿ ನಾನು ಲಾಭ ಪಡೆದದ್ದೂ ಅಲ್ಲಿಯೇ; ಕಾವ್ಯ ರಚನೆಯಷ್ಟೇ ಕಾವ್ಯ ವಾಚನವೂ ಒಂದು ಶ್ರೇಷ್ಠ ಕಲೆ ಎಂಬ ಅರಿವೂ ನನ್ನಲ್ಲಿ ಉಂಟಾದ್ದು ಅಲ್ಲಿಯೇ.

೧೯೬೦ರ ಈಚೆಗೆ ಸುಮಾರು ೧೬ ವರುಷ ಕಾಲ ನನ್ನ ಹೊಸ ಸಂಗ್ರಹ ಒಂದೂ ಹೊರಬರಲಿಲ್ಲ! ಹೆಚ್ಚು ಬರೆದಿರಲಿಲ್ಲ, ಅದು ಚಿಂತನೆಯ ಕಾಲ, ಕವನದಿಂದ ಕವನಕ್ಕೆ ಸಂಗ್ರಹದಿಂದ ಸಂಗ್ರಹಕ್ಕೆ ನನ್ನ

ಕವಿತೆ ಹೇಗೆ ಸಾಗುತ್ತಿದೆ ಎಂಬುದನ್ನು ನಾನು ಶ್ರದ್ಧೆಯಿಂದ ಸಮೀಕ್ಷೆ ಮಾಡಿದೆ. ಭಾಷೆಯ ಬಳಕೆಯ ಬಗ್ಗೆ, ಕಾವ್ಯಾಲಂಕಾರಗಳ ಬಗ್ಗೆ, ಪರ್ಯಾಲೋಚನೆ ಮಾಡಿದೆ.... ನಾಡಿನ ಹಲವು ಕಡೆಗಳಿಗೆ ಹೋಗಿ ನಮ್ಮ ಜನ ತಮ್ಮ ನಿತ್ಯ ಜೀವನದಲ್ಲಿ ಬಳಸುವ ಮಾತಿನ ಶಕ್ತಿ ಸೌಂದರ್ಯಗಳನ್ನು ಕಂಡುಕೊಂಡೆ, ಅವುಗಳನ್ನು ನನ್ನ ಕವಿತೆಗೆ ಹಾಯಿಸಿಕೊಳ್ಳುವ ಪ್ರಯತ್ನಮಾಡಿದೆ. ಹಾಗೆ ಬರೆದ ಹೊಸ ಕವನಗಳನ್ನು ಹಲವಾರು ಕವಿ ಸಮ್ಮೇಳನಗಳಲ್ಲಿ ಓದಿದೆ. ಜನ ಸಾಮಾನ್ಯರಲ್ಲಿ ಒಬ್ಬನಾದ ನಾನು ಎಲ್ಲರಿಗೂ ಆಗಬಹುದಾದ ಅನುಭವಗಳನ್ನು ಅವರು ಕಲಿಸಿದ ಭಾಷೆಯಲ್ಲಿ ನಿರೂಪಿಸಿದ್ದರಿಂದ ನಾನೂ ಅವರಿಗೆ ಹಿಡಿಸಿದಂತೆ ತೋರಿತು. ಕೆಲವು ಕವನಗಳನ್ನು ಆಯ್ಕೆಮಾಡಿ ಪ್ರಕಟಿಸಬಹುದೆಂದು ಆಗ ತೋರಿತು.

ಅಂತೂ ಇಂತೂ ೧೯೭೭ರ ಡಿಸೆಂಬರಿನ ಹೊತ್ತಿಗೆ ನನ್ನ 'ತೆರೆದಬಾಗಿಲು' ಕವನ ಸಂಗ್ರಹ ತನ್ನ ಹದಿನಾರು ಕವನಗಳೊಂದಿಗೆ ಸಿದ್ಧವಾಯಿತು. ಕೇರಳ ಪ್ರವಾಸದಲ್ಲಿ ನನ್ನ ಜತೆಗಾರರಾಗಿದ್ದು, ಈ ಎಲ್ಲ ಕವನಗಳನ್ನೂ ಮೊದಲೆಲ್ಲ ಕೇಳಿದ್ದ ವಿಮರ್ಶಕ - ಮಿತ್ರ ಎಲ್. ಎಸ್. ಶೇಷಗಿರಿರಾಯರು ಮುನ್ನುಡಿ ಬರೆದರು. ನನ್ನ ಬಂಧು ಪ್ರೊ. ಜಿ . ವೆಂಕಟಸುಬ್ಬಯ್ಯನವರು ಕಟ್ಟಿದ ಅಭಿಮಾನಿಗಳ ಬಳಗ ನನ್ನ ನೆರವಿಗೆ ಬಂತು. ಸನ್ಮಿತ್ರ ಡಾ. ಹಾ.ಮಾ. ನಾಯಕರು ಕೃತಿಯನ್ನು ಬಿಡುಗಡೆಮಾಡಿದರು. ಆ ಸಂಜೆ ಬಂದೇ ಬರುವುದಾಗಿ ಬೆದರಿಸಿದ್ದ ಮಳೆ ಹಿಂದಕ್ಕೆ ಸರಿದು, ಪುರುಷ ಪ್ರಯತ್ನವನ್ನು ಪ್ರಕೃತಿ ಬೆಂಬಲಿಸಿತ್ತು. ಅಲ್ಲಿಂದೀಚೆಗೆ ೧೯೮೩ರಲ್ಲಿ ನನ್ನ ನವಪಲ್ಲವ ಎಂಬ ಭಾವಗೀತೆಗಳ ಸಂಕಲನ ಪ್ರಕಟವಾಯಿತು.

ಇದು ನನ್ನ ಈವರೆಗಿನ ಕಾವ್ಯದ ಕಥೆ. ಇಲ್ಲಿ ಎಲ್ಲ ವಿವರಗಳೂ ಬಂದಿಲ್ಲ. ಒಂದು ಕಾರಣ, ಹೇಳುತ್ತಿರುವವನು ನಾನು ಎನ್ನುವುದು. ಇನ್ನೊಂದು ಕಾರಣ ಕಾಲದ ಕಡಿವಾಣ, ಬಿಡಿ ಕವನಗಳ ಸಂದರ್ಭ ವಿವರಣೆಗೆ ಇಲ್ಲಿ ಸ್ಥಳವಿಲ್ಲ, ಇರುವುದಿದೆ, ಇಲ್ಲದ್ದು ಇಲ್ಲ.

ಕವಿತೆ ಎಂದರೇನು? ನನಗೆ ತಿಳಿಯದು, ಕಣ್ಣು ಕಪ್ಪೆಯ ಚಿಪ್ಪಿನಗಲ ದೋಣಿ ನೋಟ ಸಮುದ್ರದಂಥ ಪ್ರಾಣಿ, ಬರೆಯುತ್ತ ಬರೆಯುತ್ತ ಉತ್ತರ ಹುಡುಕಬೇಕಾಗಿದೆ, ನನ್ನ ಕವಿತೆ ಎಂದರೆ ಇಷ್ಟೆ; ಕೆಲವು ಕವನಗಳು, ಕೆಲವು ಗೀತೆಗಳು, ಕೆಲವು ಪ್ರಯತ್ನಗಳು, ಕೆಲವು ಫಲಗಳು; ಕೆಲವು ದೂರದ ಬೆಳಕು, ಕೆಲವು ಹತ್ತಿರದ ದನಿ. "ನನ್ನ ಪರಿಚಯವಿಲ್ಲದ ಅನೇಕರಿಗೆ ನನ್ನ ಕೆಲವು ಕವನಗಳು ಪರಿಚಿತ," ಅವರಲ್ಲಿ ನನ್ನ ಕೆಲವು ಕವನಗಳನ್ನು ಓದಿದವರಿದ್ದಾರೆ, ಬಾನುಲಿಯಲ್ಲೋ ಸಂಗೀತ ಸಭೆಗಳಲ್ಲೋ ಸಿನಿಮಾದಲ್ಲೋ ಕೇಳಿದ ಹಲವರಿದ್ದಾರೆ; ಬಳೆಪೇಟೆಯಲ್ಲಿ ನನ್ನನ್ನು ಕಂಡು ಕಿರುನಗೆ ಬೀಳುವ ನವ ದಂಪತಿಗಳಿದ್ದಾರೆ, ಸಿಟಿ ಬಸ್ಸಿನಲ್ಲಿ ನನ್ನನ್ನು ಗುರುತಿಸಿ ಸ್ಥಳ ಮಾಡಿಕೊಡುವ ತರುಣ ತರುಣಿಯರಿದ್ದಾರೆ; ನನ್ನ ಕೆಲವು ಕವನಗಳನ್ನು ಜನಪದಗೀತೆ ಎಂದು ಭಾವಿಸಿ ಹಾಡುವವರಿದ್ದಾರೆ; ನನ್ನ ಯಾವುದೋ ಕವನದಲ್ಲಿ ವರ್ಣಿತವಾಗಿರುವ ಅನುಭವ ತಮ್ಮದೆಂದು ತಿಳಿದು ನನ್ನನ್ನು ಸತ್ಕರಿಸಿದವರಿದ್ದಾರೆ; ಶರಾವತಿಯಲ್ಲಿ ಹಬೆದೋಣಿಯಲ್ಲಿ ನನ್ನನ್ನು ಕೂರಿಸಿ ಮೆರವಣಿಗೆ ಮಾಡಿದ ಗೆಳೆಯರಿದ್ದಾರೆ; 'ನೀವು ನಮ್ಮ ಶಾನುಭೋಗರ ತಂಗಿಯ ಮಗನಂತೆ!' ಎದು ಬೆನ್ನು ತಟ್ಟಿದ ಗ್ರಾಮಸ್ಥರಿದ್ದಾರೆ; ನನ್ನ ಅಭಿಮಾನ ವೃಂದದಲ್ಲಿ ಧಾರವಾಡದ ಬಸ್‌ಸ್ಟ್ಯಾಂಡಿನಲ್ಲಿ ನನ್ನ ಹಾಡನ್ನು ಸ್ವಲ್ಪ ಅದಲು ಬದಲು ಮಾಡಿ ನನಗೇ ಹಾಡಿ ನನ್ನಿಂದ ಪೈಸೆ ಪಡೆದ ಬಡ ಹುಡುಗನೂ ಸೇರಿದ್ದಾನೆ. ಇಂಥ ನಡೆದ ಸಂಗತಿಗಳನ್ನೆಲ್ಲ ವರ್ಣಿಸಲು ಒಂದು ಪುಸ್ತಕವೇ ಬೇಕಾದೀತು.

ನಮ್ಮ ತಂದೆ ಸೆಟ್ಟರ ಅಂಗಡಿಯಲ್ಲಿ ಗುಮಾಸ್ತರಾಗಿದ್ದಂತೆ, ನಾನೂ ಸರ್ಕಾರದ ಕೆಲವು ಕಚೇರಿಗಳಲ್ಲಿ ಬಹುಕಾಲ ಗುಮಾಸ್ತನಾಗಿ ದುಡಿದವನು. ಕಷ್ಟಕಾರ್ಪಣ್ಯಗಳ ಅನುಭವ ನನಗೆ ಸಾಕಷ್ಟಿದೆ; ಆ ಎಲ್ಲ ನೋವು ಕವಿತೆಯ ಪರಿಮಳವಾಗಿ ದಾಟಿ ಹೋಗುತ್ತ ನನ್ನ ಮನಸ್ಸಿಗೆ ನೆಮ್ಮದಿ ತಂದಿದೆ. ನನ್ನ ಕವಿಮಿತ್ರ ಡಾ. ಜಿ.ಎಸ್. ಶಿವರುದ್ರಪ್ಪನವರು ನನ್ನ ಬದುಕನ್ನು ಚಂದನಕ್ಕೆ ಹೋಲಿಸಿದ್ದಾರೆ; ಬಹು ಸಾರ್ಥಕವಾದ ಉಪಮೆ.

ಗಡಿಯಾರದಂಗಡಿಯ ಮುಂದೆ

ಗಡಿಯಾರದಂಗಡಿಯ ಮುಂದೆ ಬೆದರಿದೆ ಕುದುರೆ
ಕಣ್ಣು ಪಟ್ಟಿಯ ಕಂಡು ಕನ್ನಡಿಯಲಿ.
ಗಂಟೆ ಎಷ್ಟೆಂದು ಕೇಳಿದರೇನ ಹೇಳಲಿ ? -
ಎಷ್ಟೊಂದು ಗಡಿಯಾರ ಅಂಗಡಿಯಲಿ !

ಬಾನ ಚಪ್ಪರದ ಕೆಳಗೆ ಹೆಬ್ಬಾವಿನುಬ್ಬಸದ
ಹತ್ತಿಬಿಲ್ಲಿನ ಕಸದ ಕತ್ತಲೆಯಲಿ
ನಿರ್ನಾಮವಾಗಿರುವ ನೀಲನಗರಾವಳಿಯ
ಕೋಳಿ ಕೂಗಿತು ಬಾಳ ಮುಂದಲೆಯಲಿ.

ಬಿಡುಗಣ್ಣ ನಿಮಿಷಗಳ ಹುಲಿಯಂಕಿ ತೋಟದಲಿ
ಕತ್ತು ಹಿಸುಕಿದ ಬಳ್ಳಿ ಕಳೆದ ಬೆಳಗು ;
ಜೇನು ತಲೆಹೊಕ್ಕಿರುವ ತನಿಗುದುರೆಯೋಟದಲಿ
ಸಂಜೆ ತೀರದ ಸಾಲ, ಹಡಗು ಮುಳುಗು.

ಬಿರುಗಾಳಿ ಬೀಸಿದ ಮೂರನೆಯ ದಾರಿ ಮನೆ :
ಅಲ್ಲೊಂದು ಅಳುವ ಮಗು ಒಂದೇ ಸಮನೆ.
ಸೀಮೆ ಸೀಮೆಯ ಲೆಕ್ಕ. ಕಪ್ಪು ಚುಕ್ಕಿಯ ಸೋನೆ,
ಸೆಕೆಂಡಿನ ರೆಕ್ಕೆ ಪುಕ್ಕ ಬರಿಸೊನ್ನೆಗೆ.

ನನಗಿತ್ತು ಮೊದಲಿಗಿವನೆಲ್ಲ ಬದಲಿಸುವಾಸೆ ;
ಮೂಳೆ ಬಿಲ್ಲನು ಹಿಡಿದು ಮುಂದೆ ನಡೆದೆ.
ನನಗಿಂತ ಮೊದಲೆ ಬದಲಾದ ಬಂಡೆಯ ಕಂಡೆ ;
ಒಳ ಹೊರಗ ಹುತ್ತಗಳ ಹತ್ತಿ ಇಳಿದೆ.

ನಾನಾದೆ ನಕ್ಷತ್ರ ನೀಲಿ, ಕಂಪಿನ ಲಾಲಿ ;
ದೂರ ತೀರದ ನಿನ್ನ ಬಳಿಗೆ ಕರೆದೆ.
ಆಗ ಚೈತ್ರದ ಮಾವು ಜೂಲು ನಾಯಿಯ ಜೋಲಿ,
ತಳಿರ ಕೆನ್ನಾಲಗೆಯ ಬೆಂಕಿ ಪರದೆ.

ಹುಚ್ಚ ಬೇವಿನ ತಲೆಗೆ ಹಕ್ಕಿ ಹಾಡಿನ ಹೆಡೆಗೆ.
ಬಂಗಾರದಂಗಾಲು ಮೋಡದೊಳಗೆ.
ಅಲ್ಲಿಂದ ಮುಂದೆ ಮುಂಗಾರ ಕಂಬನಿ ಕೊಡಿಗೆ ;
ಜಿಂಕೆ ಚಕ್ಕಳದಂಚು ಕಾಡುಹೊಳೆಗೆ.

ಮಳೆ ನಿಂತು ಚಳಿ ಬಂತು. ಗಲ್ಲ ಬೆಳ್ಳಗೆ ಹುಡುಗಿ
ಬಿಳಿಹೂವ ಮುಟ್ಟಿಸಿದೆ ನನ್ನ ತುಟಿಗೆ.
ಸಂಜೆಗೊಬ್ಬಳು ಮುದುಕಿ ಕೊನೆಯ ಕೆಂಡವ ಕೆದಕಿ
ಎತ್ತಿ ಮುಡಿದಳು ಇದ್ದ ಗಂಟು ಜಡೆಗೆ.

ಹೊತ್ತ ಮೂಟೆಗಳೇನು ! ಒಡೆದ ಗಿಂಡಿಗಳೇನು ?
ಹೆಜ್ಜೆ ಸಾಲಿನ ಪಯಣ ನಾರಾಯಣ.
ಗಂಟೆ ಎಷ್ಟೆಂದೀಗ ಯಾರ ಕೇಳಿದೆ ನೀನು ?
ಗಡಿಯಾರದಂಕಿ ಯಾರಿಗೆ ಪಾವನ !

ಚಿತಾಗ್ನಿಯಿಂದ ಚಂದ್ರಿಕೆಗೆ ನೆಲದ ಕಣ್ಣು ಹೊರಳಿದೆ ;
ಹಸು ಕರು ತುಳಿದ ಕಲ್ಲು ಮುಳ್ಳು ಬೇಲಿಗುರುಳಿದೆ ;
ಬಿದಾಗಿ ಬಿರಿದ ದಾಳಿಂಬೆ ನಗೆ ನೀರೊಡೆದು
ಹಳದಿಯಲಿ ಕೆಂಪರಳಿದೆ ;
ನೀರ ಮೇಲೂ ನೆಲದ ಮೇಲೂ ಬೆರಳ್ಯಿದರ ನೆರಳಿದೆ.

ಗೋರಿದೀಪದ ಕೆಳಗೆ ಹಲ್ಲಿ ಐದರ ಹರಕೆ,
ತಳವಿರದ ತಟ್ಟೆಯಲಿ ಐದು ಗೆಜ್ಜೆ,
ಪಳೆಯುಳಿಕೆ ಕನಸಾಚೆಗೈದು ಬಣ್ಣದ ಹಸೆಗೆ
ಬಂದ ಸುಂದರಿ ನಿನಗೆ ಎಷ್ಟು ಲಜ್ಜೆ ?

ಗಂಟೆ ಎಷ್ಟೆಂದು ಕೇಳಿದೆ ನೀನು. ಹೇಳಿದೆನೆ -
ಗಡಿಯಾರ ನಡೆದಷ್ಟು ಗಂಟೆ.
It is not an explanation of things
It is something better.

- ಕೆ.ಎಸ್. ನರಸಿಂಹಸ್ವಾಮಿ

ಬಾಗದೇ ಸೆಟೆವುದನ್ನು ಕಲಿಸಿದ ಪ್ರೊಫೆಸರ್

- ಪ್ರೊ. ಕಿ.ರಂ. ನಾಗರಾಜ್

ಪ್ರೊ. ಎಂ.ಡಿ. ನಂಜುಂಡಸ್ವಾಮಿ ಬುದ್ಧಿಜೀವಿ, ಚಿಂತಕ, ರೈತ ಸಮಸ್ಯೆಗಳ ಕ್ರಿಯಾಶೀಲ ಹೋರಾಟಗಾರ ಎಂದು ಎಲ್ಲರೂ ಹೇಳುತ್ತಾರೆ. ಇದು ನಿಜ. ಆದರೆ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಇಡೀ ಸಮುದಾಯವೇ ಬುದ್ಧಿಜೀವಿಗಳಿಂದ ಕೂಡಿದ್ದು ಎಂದು ತಿಳಿದವರು. ರೈತರು, ಯುವಕರು, ಕಾರ್ಮಿಕರು - ಇವರಲ್ಲಿರುವ ವಿವೇಕಕ್ಕೆ ಹೊಸ ಸೂಕ್ಷ್ಮಗಳನ್ನು, ಎಚ್ಚರವನ್ನು ಅವರು ತಂದುಕೊಟ್ಟರು, ಬುದ್ಧಿಜೀವಿಗಳೆಂದು ಕರೆದುಕೊಳ್ಳುವ, ಕರೆಸಿಕೊಳ್ಳುವ ಸಾಂಪ್ರದಾಯಿಕ ವಲಯವನ್ನು ಅವರು ಸಂದೇಹದಿಂದ ನೋಡಿದರು. ನಮ್ಮ ಸಂದರ್ಭದಲ್ಲಿ ಬುದ್ಧಿಜೀವಿ ಎನ್ನಿಸಿಕೊಳ್ಳುವವನ ಸಮಗ್ರತೆ ಮತ್ತು ಚಲನಶೀಲತೆ ಎಂಥದ್ದಾಗಿರಬೇಕೆಂದು ತಮ್ಮ ಕ್ರಿಯಾಶೀಲತೆಯ ಮೂಲಕ ಬದುಕಿ ತೋರಿಸಿದರು. ಬುದ್ಧಿಜೀವಿಯ ಕೆಲಸವೇ ಸಂಘಟನೆ ಹಾಗೂ ಅರ್ಥವತ್ತಾದ ಅಧಿಕಾರದ ಕಡೆ ಚಲಿಸುವುದು ಎಂಬುದನ್ನು ಅವರು ಕರ್ನಾಟಕದ ಸಂದರ್ಭದಲ್ಲಿ ರೂಪಿಸಿದರು. ಬುದ್ಧಿಜೀವಿ ಎಂಬ ನೆಲೆಯನ್ನೇ ಹೋರಾಟ ಕೇಂದ್ರಿತವಾಗಿಸಿಕೊಂಡದ್ದು ಅವರ ವಿಶಿಷ್ಟತೆ. ನಮ್ಮ ಸುತ್ತಣ ನಿತ್ಯ ವಿದ್ಯಮಾನಗಳ ಬಗೆಗೆ ತಮ್ಮ ಮನಸ್ಸಿನ ಎಚ್ಚರವನ್ನು ತೋರುವುದಷ್ಟೇ ಆಗದೆ ನೇರ ಕ್ರಿಯೆಗಳಲ್ಲಿ ತೊಡಗಿಸಿದ್ದು ಬಹುದೊಡ್ಡ ಸಾಧನೆ. ವ್ಯಕ್ತಿಗತವಾದ ಚಿಂತನೆ, ಸಮಸ್ಯೆಗಳ ಅರಿವು, ಕಾಲಕಾಲಕ್ಕೆ ಆಗುತ್ತಿರುವ ಪಲ್ಲಟಗಳ ಬಗೆಗೆ ಸದಾ ಜಾಗ್ರತವಾಗಿರುತ್ತಿದ್ದ ಎಂಡಿಎನ್ ಅವೆಲ್ಲವನ್ನೂ ಸಮುದಾಯ ಜೀವನದ ಕ್ರಿಯಾಶೀಲತೆಗೆ ಬಳಸುತ್ತಿದ್ದ ರೀತಿ ವಿಶಿಷ್ಟವಾದದ್ದಾಗಿತ್ತು.



ಸಂಘಟನೆಗಳು ಕ್ರಿಯಾಶೀಲವಾಗುವುದು ಹೇಗೆ ಎಂಬುದು ಎಂಡಿಎನ್ ಅವರಿಗೆ ಒಂದು ಸಂಕೀರ್ಣವೂ, ಜಟಿಲವೂ ಆದ ಪ್ರಶ್ನೆ ಆಗಿರಲಿಲ್ಲ. ಅದು ಅವರಿಗೆ ನೇರವೂ, ಖಂಡಿತವೂ ಆದ ಕ್ರಿಯೆಯೇ ಆಗಿತ್ತು. ಸಂಘಟನೆಗಳ ಜೀವಂತಿಕೆ ಎಂದರೆ ನಿರ್ಭೀತಿ ಮತ್ತು ಪ್ರೀತಿಯನ್ನು

ಮೈಗೂಡಿಸಿಕೊಳ್ಳುವುದು ಎಂಬುದು ಅವರ ತಿಳುವಳಿಕೆಯಾಗಿತ್ತು. ಆದ್ದರಿಂದಲೇ ಕರ್ನಾಟಕದ ತುಂಬ ಹಸಿರು ಅಲೆ ಹಬ್ಬಿ ಅದೊಂದು ಮಹಾಪೂರವೇ ಆಗಿ ಮುನ್ನುಗ್ಗಿತು. ಎಪ್ಪತ್ತರ ದಶಕದಲ್ಲಿ ಬೆರಳೆಣಿಕೆಯ ಯುವಕರೊಂದಿಗೆ ಸೂಕ್ಷ್ಮವಾಗಿ ಸಂವಾದ ಮಾಡುತ್ತಲೇ ಕರ್ನಾಟಕದ ತುಂಬ ಗಂಭೀರವಾದ ಹೊಸ ರಾಜಕೀಯ ಸಂಸ್ಕೃತಿಯ ವಾತಾವರಣ ನಿರ್ಮಾಣವಾಗಲು ಎಂಡಿಎನ್ ಕಾರಣರಾದರು.

ಅಧಿಕಾರದ ಶಕ್ತಿಯನ್ನು, ಅದರ ತಳತಂತ್ರಗಳನ್ನು ಎದುರಿಸಿ ಪ್ರತಿಘಟಿಸಿ ಪಾಠವನ್ನು ನಿರಂತರವಾಗಿ ಬೋಧಿಸಿದ ಸಮಾಜವಾದಿ ಗುರು ಎಂಡಿಎನ್. ಸಮಕಾಲೀನ ಶಕ್ತಿ ರಾಜಕಾರಣದ ಹಲ್ಲು - ಉಗುರುಗಳ ಹರಿತವನ್ನು ಪ್ರತಿ ತಳತಂತ್ರಗಳ ಮೂಲಕ ಮೊಂಡುಗೊಳಿಸಲು ಅವರು ಸಮುದಾಯ ಚೇತನವನ್ನು ಸನ್ನದ್ಧಗೊಳಿಸುತ್ತಿದ್ದ ಕ್ರಮಗಳು ಯಾವಾಗಲೂ ಬದಲಾಗುತ್ತಲೇ ಇದ್ದವು. ರಾಜಕೀಯ ಗುರಿ ಎಷ್ಟೇ ಸ್ಪಷ್ಟವಿದ್ದರೂ ಅದು ಅಧಿಕಾರ ಮೋಹಪಡ್ಡಾಗಿರದೆ ನಿರಂತರ ಗತಿಶೀಲತೆಯನ್ನು ನಿರ್ಮಾಣ ಮಾಡುವುದಾಗಿತ್ತು. ಅಧಿಕಾರಕ್ಕೆ ಶರಣಾಗದೆ ಅದನ್ನು ಮಣಿಸುವ ಉಪಕ್ರಮಗಳನ್ನು ಅವರು ನಿರಂತರವಾಗಿ ಕಲಿಸುತ್ತಿದ್ದರು. ಹೀಗಾಗಿ ಅವರು ಸೀಮಿತ ವಿದ್ಯಾರ್ಥಿಗಳ ಚೌಕಟ್ಟಿಗೆ ಒಳಗಾದ ಪ್ರೊಫೆಸರ್ ಅಲ್ಲ; ದಮನಕ್ಕೆ ಗುರಿಯಾಗುತ್ತಲೇ ಇರುವ ಸಮುದಾಯವನ್ನು ಎಚ್ಚರಿಸುತ್ತಲೇ ಇದ್ದ ಪ್ರೊಫೆಸರ್. ಅಡಿಗರ ಕವಿತೆಯೊಂದರ ಸಾಲು 'ಕಲಿಸು ಬಾಗುವುದನ್ನು, ಬಾಗದೇ ಸೆಟೆವುದನ್ನು' ಎಂದು ಹೇಳುತ್ತದೆ. ಈ ಮಾತು ಅವರ ನಡೆ ಹಾಗೂ ಕ್ರಿಯೆಯಲ್ಲಿ ಅನ್ವರ್ಥ.

ಅಪಾರ ಅನುಭವ, ಗ್ರಹಿಕೆಗಳನ್ನು ಸಮುದಾಯದ ಕ್ರಿಯಾಶೀಲತೆಯನ್ನಾಗಿ ಅವಸ್ಥಾಂತರಿಸುವುದು ಹೇಗೆ ಎಂಬುದನ್ನು ಗಾಂಧಿ, ರಾಮಮನೋಹರ ಲೋಹಿಯಾ, ಶಾಂತವೇರಿ ಗೋಪಾಲಗೌಡ ಹಾಗೂ ಇನ್ನಿತರ ವಿಚಾರಧಾರೆಗಳಿಂದ ತಿಳಿದು ವರ್ತಮಾನದ ಆತಂಕ - ಪಲ್ಲಟಗಳಿಗೆ ಮುಖಾಮುಖಿಯಾಗಿಸಿದ ಪ್ರಯೋಗಶೀಲತೆಯನ್ನು ಎಂಡಿಎನ್ ರೂಪಿಸಿದರು. ಯಾವುದೇ ಚಳುವಳಿ ಅಂದಂದೇ ಹುಟ್ಟಿ ಕೊನೆಗೊಳ್ಳುವುದಿಲ್ಲ - ಅದು ನಿರಂತರವಾದದ್ದು, ಜಾಗ್ರತವಾದದ್ದು. ಅದರಿಂದ ಉಂಟಾಗುವ ಕಾವನ್ನು ಹೇಗೆ ಜೀವಂತವಾಗಿಸಿಕೊಳ್ಳಬೇಕೆಂದು ತಿಳಿಸಿದ್ದು ಮಾತ್ರವಲ್ಲ ಆಚರಿಸಿ ತೋರಿಸಿಕೊಟ್ಟರು. ಎಂಡಿಎನ್ ರೈತರ ಸಮಸ್ಯೆಯನ್ನು ಕೇವಲ ಚಳುವಳಿಯ ಮೂಲಕ ಸಂಘಟಿಸಿದವರೆಂದು ತಿಳಿಯುವುದರಲ್ಲಿ ಅರ್ಥವಿದೆ. ಆದರೆ ಅವರು ರೈತರು ಎದುರಾಗುವ ಸಮಸ್ಯೆಗಳನ್ನು ತಮ್ಮದೇ ಆದ ಪ್ರಯೋಗಶೀಲತೆಗೆ ಒಡ್ಡಿ ಅದರ ಅಧಿಕೃತತೆಯನ್ನು ಇಡೀ ಸಮುದಾಯಕ್ಕೆ ಮನವರಿಕೆ ಮಾಡಿಕೊಡುತ್ತಿದ್ದ ಸ್ವರೂಪ ತುಂಬ ಮಹತ್ವದ್ದು. ಬೆಳೆಬೀಜದ ಸಮಸ್ಯೆ, ನುಸಿರೋಗದ ನಿಯಂತ್ರಣ, ರೈತರ ಬೆಳೆಯ ಆರ್ಥಿಕ ಸ್ವರೂಪ, ಮೇಲಿಂದ ಮೇಲೆ ಜನಸಮುದಾಯ ಅನುಭವಿಸುವ ಭೀಕರ ರೋಗಗಳು ಹೀಗೆ ಸಮಸ್ಯೆಗಳ ಒಳನೆಲೆಯನ್ನು ನೇರ ಪ್ರವೇಶಿಸಿ ವಿಶ್ಲೇಷಿಸುವ ನಿತಾಂತ ಪ್ರಯೋಗಶೀಲ ಹೋರಾಟ ಅವರದಾಗಿತ್ತು. ಬೇಸಾಯಗಾರರ ಬೆಳೆಯ ಸಮಸ್ಯೆಗಳೇ ಅಲ್ಲದೆ ಬೇಸಾಯಗಾರರು ನಿತ್ಯ ಜೀವನದಲ್ಲಿ ಎದುರಿಸುವ ಸಾಮಾನ್ಯ ಸಂಗತಿಗಳೂ ಕೂಡ ಎಷ್ಟು ಮಹತ್ವದ್ದು ಎಂಬುದನ್ನು ಅವರು ಗ್ರಹಿಸಿ ವಿವರಿಸುತ್ತಿದ್ದ ರೀತಿ ತುಂಬ ಖಚಿತವಾಗಿರುತ್ತಿತ್ತು. ನಮ್ಮ ಸಂದರ್ಭದಲ್ಲೇ ರೂಪುಗೊಳ್ಳುವ ವೈಚಾರಿಕತೆಯ ನೆಲೆಗಳನ್ನು ತುಂಬ ಸೂಕ್ಷ್ಮ ಪರಿಶೀಲನೆಯಿಂದ ಕಟ್ಟುತ್ತಲೇ ಬಂದರು. ರಾಷ್ಟ್ರೀಯ ಪ್ರಶ್ನೆಗಳು, ಜಾಗತಿಕ ಪ್ರಶ್ನೆಗಳು ಅವರಿಗೆ ಯಾವಾಗಲೂ ಕರ್ನಾಟಕದ ಕೇಂದ್ರದಿಂದ ಚಿಂತಿತವಾಗುತ್ತಿತ್ತು. ಕೇಂದ್ರೀಕೃತ ರಚನೆಗಳನ್ನು ಒಡೆಯುತ್ತ ಅರ್ಥವತ್ತಾದ ವಿಕೇಂದ್ರೀಕರಣದ ಖಚಿತ ನೆಲೆಗಳನ್ನು ಹೇಗೆ ಸೃಷ್ಟಿಸಿಕೊಳ್ಳುವುದು ಎನ್ನುವುದು ಅವರು ಕಲಿಸಿದರು. ಕಲಿಯುವಿಕೆ ಹಾಗೂ ಕಲಿಸುವಿಕೆ ಇವೆರಡರಲ್ಲೂ ಸಂಪೂರ್ಣ ಮುಗ್ಧರಾಗಿದ್ದರು. ಜಾಗತೀಕರಣ ಅವರಿಗೆ

ಆತಂಕದ ವಿಷಯವಾಗಿರಲಿಲ್ಲ. ಅದಕ್ಕೆ ಎದುರಾಗುವ ಹುನ್ನಾರಗಳು ಹೇಗಿರಬೇಕು? ಉದಾರೀಕರಣ, ಬಹುರಾಷ್ಟ್ರೀಯ ಕಂಪೆನಿಗಳು - ಇವೆಲ್ಲ ನಮ್ಮ ಜಾತಿಬದ್ಧ ಸಾಮಾಜಿಕ ರಚನೆಯ ಮಧ್ಯೆ ಉಂಟುಮಾಡುವ ಗೊಂದಲಗಳ ಬಗೆಗೆ ಸ್ಪಷ್ಟ ಅರಿವು ಅವರ ಆಲೋಚನೆ ಹಾಗೂ ಕ್ರಿಯೆಗಳಲ್ಲಿ ಮುಖ್ಯ ಆಗುತ್ತಿತ್ತು. ಅನನ್ಯತೆಯನ್ನು ಕಾಯ್ದುಕೊಳ್ಳುವಿಕೆ, ಮಾತುಗಾರಿಕೆ ಹಾಗೂ ಉಪದೇಶದ ಭ್ರಮೆಗಳಿಂದ ಸಾಧ್ಯವಿಲ್ಲ ಎಂಬುದು ಅವರ ನಿಚ್ಚಳ ತಿಳುವಳಿಕೆ. ಗ್ರಾಮೀಣ ಕೃಪಾಂಕದ ಸಮಸ್ಯೆಗೂ, ನಮ್ಮ ಶ್ರೇಣೀಕೃತ ಸಮಾಜ ವ್ಯವಸ್ಥೆ ಹಾಗೂ ರಾಜಕಾರಣದ ಅವಿವೇಕಿತನಕ್ಕೂ ಇರುವ ಸಂಬಂಧಗಳನ್ನು ಅವರು ಇತ್ತೀಚೆಗಷ್ಟೇ ವಿಶ್ಲೇಷಿಸಿದ್ದರು.

ಮಾತಿನ ಸತ್ಯಕ್ಕಿಂತ ಭಿನ್ನವಾದ ಸತ್ಯದ ಶೋಧಕರಾಗಿದ್ದವರು ಎಂಡಿಎನ್. ಆದ್ದರಿಂದಲೇ ಅಸಹಕಾರ ಚಳುವಳಿಯ ಶಕ್ತಿ ಸ್ವತಂತ್ರ ಭಾರತದಲ್ಲಿ ಹೇಗೆ ಕ್ರಿಯಾಶೀಲವಾಗಬೇಕು ಎಂಬುದನ್ನು ಅವರು ಬದಲಾಗಿರುವ ಸನ್ನಿವೇಶದಲ್ಲಿ ಮರುವ್ಯಾಖ್ಯಾನ ಮಾಡಿದರು. ಅರಾಜಕತೆಯ ಈ ಕಾಲದಲ್ಲಿ ತಾತ್ವಿಕ ಅಸ್ತ್ರವಾಗಿಸಿಕೊಳ್ಳುವ ಕ್ರಿಯಾ ವಿಧಾನಗಳನ್ನು ರೂಪಿಸಿದ ಕ್ರಮ ಈಗ ಹೆಚ್ಚು ಜೀವಂತವೂ, ಚಲನಶೀಲವೂ ಆಗಬೇಕಿದೆ. ತತ್ವಗಳು ಕೇವಲ ಪುಸ್ತಕಗಳಲ್ಲಿ ಹುಟ್ಟುವುದಿಲ್ಲ ಸ್ವೇಚ್ಛೆಯೂ ಅಲ್ಲ. ಅದು ನಿರ್ಭೀತ ಕ್ರಿಯೆ. ಅತ್ತಕಡೆ ನಾವು ನಡೆಯಬೇಕಲ್ಲವೇ? ಅದೇ ಚಳುವಳಿಯ ಹಾದಿ.

ಪ್ರೊಫೆಸರ್: ರೈತರ ಆತ್ಮಗೌರವದ ಸಂಕೇತ

- ಕೆ.ಪಿ. ಪೂರ್ಣಚಂದ್ರ ತೇಜಸ್ವಿ


ನಂಜುಂಡಸ್ವಾಮಿಯವರು ನನಗೆ ಕಾಲೇಜು ದಿನಗಳಿಂದಲೂ ಗೊತ್ತಿದ್ದವರು. ಆದರೆ ಓದು ಮುಗಿದ ನಂತರ ನಾವು ಸಮಾಜವಾದಿ ಪಕ್ಷದಲ್ಲಿ ಸಕ್ರಿಯರಾಗಿ ಕೆಲಸ ಮಾಡಲು ಶುರು ಮಾಡಿದಾಗ ನಾನು, ನಂಜುಂಡಸ್ವಾಮಿ, ಸುಂದರೇಶ್, ಶ್ರೀರಾಮ್, ರಾಮದಾಸ್, ಕಡಿದಾಳು ಶಾಮಣ್ಣ ಈ ಐದು ಜನರೂ ಬಹಳ ಆತ್ಮೀಯ ಮಿತ್ರರಾದೆವು. ಸಮಾಜವಾದಿ ಪಕ್ಷದಲ್ಲಿ ಆಗ ಗೋಪಾಲಗೌಡರು, ಜೆ.ಹೆಚ್. ಪಟೇಲರು, ಕೆ.ಜಿ. ಮಹೇಶ್ವರಪ್ಪ ಮೊದಲಾದ ಹಳಬರಿದ್ದುದರಿಂದ ಅವರ ಮೇಲುಸ್ತುವಾರಿಯಲ್ಲಿ ಕೆಲಸ ಮಾಡಲು ನಮಗೆ ತುಂಬಾ ಇರಿಸುಮುರುಸಾಗುತ್ತಿತ್ತು. ಆದ್ದರಿಂದ ನಾವು ಸಮಾಜವಾದಿ ಪಕ್ಷದೊಳಗೆ ಸಮಾಜವಾದಿ ಯುವಜನ ಸಭಾ ಎಂಬ ಒಂದು ತರುಣರ ಉಪ ಸಂಘಟನೆ ಕಟ್ಟಿಕೊಂಡೆವು. ನಾನು, ನಂಜುಂಡಸ್ವಾಮಿ ಆ ಸಂಘಟನೆಯ ಮುಂಚೂಣಿಯಲ್ಲಿದ್ದುದರಿಂದ ಸಂಘಟನೆಯ ಕಾರ್ಯಕ್ರಮಗಳನ್ನು ರೂಪಿಸುವುದು, ಆ ಕಾರ್ಯಕ್ರಮಗಳಿಗೆ ಒಂದು ಸೈದ್ಧಾಂತಿಕ ಸ್ವರೂಪ ಕೊಡುವುದು ಮೊದಲಾದ ಜವಾಬ್ದಾರಿಗಳು ನಮ್ಮ ಮೇಲೆ ಬೀಳುತ್ತಿತ್ತು. ಆಗೆಲ್ಲ ನಂಜುಂಡಸ್ವಾಮಿಯವರು ಹಗಲೂ ರಾತ್ರಿ ಎನ್ನದೆ ಊಟ-ಉಪಚಾರ ಅಲಕ್ಷಿಸಿ ಕೆಲಸ ಮಾಡುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ.

ಒಮ್ಮೆ ಲೋಹಿಯಾರವರ ಕೆಂಪು ಪುಸ್ತಕ ಸಿದ್ಧಪಡಿಸಲು ಲೋಹಿಯಾ ಪುಸ್ತಕಗಳ ಭಾರಿ ರಾಶಿ ಹೊತ್ತುಕೊಂಡು ನಂಜುಂಡಸ್ವಾಮಿ ನಮ್ಮ ತೋಟಕ್ಕೆ ಬಂದರು. ಲೋಹಿಯಾ ಆಗ ಇರಲಿಲ್ಲ. ಅವರು ಹೊರಡಿಸುತ್ತಿದ್ದ ಮ್ಯಾನ್‌ಕೈಂಡ್ ಪತ್ರಿಕೆಯ ಅಪಾರ ಸಾಮಗ್ರಿ ಸಹ ಅವರು ಹೊತ್ತು ತಂದಿದ್ದ ಪುಸ್ತಕದ ಬೆಟ್ಟದಲ್ಲಿ ಸೇರಿತ್ತು. ಅದನ್ನೆಲ್ಲಾ ಓದಿ, ಅದರಿಂದಲೇ ಸೂಕ್ತಿಗಳನ್ನು ಸಂಗ್ರಹಿಸಿ ನಾವು ಪುಸ್ತಕ

ಸಿದ್ಧಪಡಿಸಲು ಸಾಧ್ಯವೇ ಎಂದು ನನಗೆ ಅಧೈರ್ಯವಾಗಿ 'ಇಷ್ಟೆಲ್ಲಾ ಮಾಡಲು ನಮ್ಮಿಂದ ಆಗುತ್ತದೆಯೇ' ಎಂದೆ. ನಂಜುಂಡಸ್ವಾಮಿ 'ಪ್ರಯತ್ನ ಮಾಡೋಣ' ಎಂದು ಧೈರ್ಯ ಹೇಳಿ ಕೈಕಾಲು ತೊಳೆದುಕೊಂಡು ಬಂದವರೇ ಜಗಲಿ ಮೇಜಿನ ಮೇಲೆ ಪುಸ್ತಕಗಳನ್ನು ಅಡಚಿ ಒಂದು ಪುಸ್ತಕ ಹಿಡಿದು ಕೆಲಸಕ್ಕೆ ಕೈ ಹಚ್ಚಿಯೇಬಿಟ್ಟರು. ಸುಮಾರು ಒಂದು ತಿಂಗಳು ನಾವು ಕುಳಿತಲ್ಲಿಂದ ಏಳದೆ ಕೆಲಸ ಮಾಡಿ ಮುಗಿಸಿದೆವು. ಆ ಸಮಯದಲ್ಲಿ ಕೆಲಸ ಮಾಡುತ್ತಲೇ ಲೋಹಿಯಾ ಬಗ್ಗೆ ನಾವು ಮಾಡಿದ ಚರ್ಚೆ, ವಿವರಣೆ, ವಿಶ್ಲೇಷಣೆಗಳಿಂದ ಲೋಹಿಯಾ ನಮಗೆ ಎಷ್ಟು ಚೆನ್ನಾಗಿ ಅರ್ಥವಾದರೆಂದರೆ, ನಮ್ಮ ಕೆಲಸ ಮುಗಿಯುವ ಹೊತ್ತಿಗೆ ನಾವಿಬ್ಬರೂ ಲೋಹಿಯಾ ಬಗ್ಗೆ ಅಧಿಕಾರಯುತವಾಗಿ ಮಾತನಾಡುವಷ್ಟು ಪಳಗಿ ಹೋಗಿದ್ದೆವು.

ಮೂಡಿಗೆರೆ ಬಸ್‌ಸ್ಟ್ಯಾಂಡ್ ಹತ್ತಿರ ಇದ್ದ ಟೆಂಟ್ ಸಿನಿಮಾ ಮಂದಿರದ ಒಳಗೆ ಸಭೆ ಸೇರಿ ರೈತಸಂಘದ ಮೊಟ್ಟಮೊದಲ ಸಮಾವೇಶ ನಡೆಸಿದ್ದು ನಾವೆ. ಆದರೆ ಅದನ್ನು ಪ್ರಾರಂಭಿಸಿದ ಕೆಲವೇ ದಿವಸದೊಳಗೆ ಜೆ.ಪಿ.ಯವರ ನವನಿರ್ಮಾಣ ಕ್ರಾಂತಿ ಆರಂಭವಾದ್ದರಿಂದ ರೈತ ಚಳುವಳಿಯನ್ನು ತಾತ್ಕಾಲಿಕವಾಗಿ ತಟಸ್ಥ ಮಾಡಿ ಅದಕ್ಕೆ ಧುಮುಕಿದೆವು. ನಾನು, ನಂಜುಂಡಸ್ವಾಮಿ ಭಾಷಣ, ಮೌನ ಮೆರವಣಿಗೆ ಇತ್ಯಾದಿಗಳನ್ನು ಮಾಡಿಕೊಂಡು ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳನ್ನು ಸ್ಕೂಟರ್ ಮೇಲೆ ಸುತ್ತಿದೆವು. ೧೯೭೧ರಿಂದ ೭೬ರ ವರೆಗಿನ ನನ್ನ ನೆನಪಿನ ಬಹುಭಾಗ ನಂಜುಂಡಸ್ವಾಮಿ ಆಕ್ರಮಿಸಿದ್ದಾರೆ. ನಂಜುಂಡಸ್ವಾಮಿ ಬಗ್ಗೆ ನಾನು ಹೇಳಬಹುದಾದ ಸಾವಿರಾರು ಘಟನೆಗಳು ನನ್ನ ಮನಸ್ಸಿನಲ್ಲಿ ಹಚ್ಚ ಹಸಿರಾಗಿ ಇವೆ. ೧೯೭೬ರಲ್ಲಿ ನಮ್ಮ ಕೆಲವು ಮಿತ್ರರ ವರ್ತನೆಯಿಂದ ಬೇಸರಗೊಂಡ ನಾನು ಸಕ್ರಿಯ ರಾಜಕಾರಣಕ್ಕೆ ವಿದಾಯ ಹೇಳಿ ದೂರಾದೆ. ನಂಜುಂಡಸ್ವಾಮಿ, ಸುಂದರೇಶ್, ಶಾಮಣ್ಣ ಮುಂತಾದವರು ರೈತಸಂಘದ ಪೂರ್ಣ ಪ್ರಮಾಣದ ಸಕ್ರಿಯ ರಾಜಕಾರಣಕ್ಕೆ ಇಳಿದರು. ಅದನ್ನೊಂದು ಅದ್ಭುತ ಆಂದೋಲನವಾಗಿ ಬೆಳೆಸಿದರು. ಸ್ವಾತಂತ್ರ್ಯ ಸಂಗ್ರಾಮದ ನಂತರ ನಮ್ಮ ಗ್ರಾಮಗಳವರೆಗೂ ವಿಸ್ತರಿಸಿದ ಏಕಮಾತ್ರ ರಾಜಕೀಯ ಚಳುವಳಿ ಎಂದರೆ ಕರ್ನಾಟಕ ರಾಜ್ಯ ರೈತಸಂಘದ ಚಳುವಳಿ ಆವರೆಗೂ ಅಧಿಕಾರಿಗಳ, ರಾಜಕಾರಣಿಗಳ ಮರ್ಜಿಯಲ್ಲಿ ತಗ್ಗಿ-ಬಗ್ಗಿ ಗೂನು ಬೆನ್ನಾಗಿದ್ದ ರೈತನನ್ನು ನೆಟ್ಟಗೆ ನಿಲ್ಲಿಸಿ, ಅವನಲ್ಲಿ ಆತ್ಮವಿಶ್ವಾಸ ತುಂಬಿ ದರ್ಪದ ಮನಗಳ ಎದುರು ಸೆಟೆದು ನಿಲ್ಲುವ ಆತ್ಮಗೌರವ ತಂದುಕೊಟ್ಟ ಮೊದಲಿಗರು ನಂಜುಂಡಸ್ವಾಮಿ. ಅನಂತರ ಸುಂದರೇಶ್.

ಪ್ರೊಫೆಸರ್ ಚಿಂತನೆ: "ರೈತನ ಬೆಳೆಗೆ ಬೆಲೆಯಿಲ್ಲ ಆಗಿರೋ ಮೋಸಕ್ಕಾಗಿ ಸಾಲ ರದ್ದು ಮಾಡಿ ಎಂದು ಕೇಳ್ತಾ ಇದ್ದೀವಿ. ನಮ್ಮ ವ್ಯವಸಾಯದ ವೆಚ್ಚದ ಅರ್ಧ ಬೆಲೆಗೆ ತಗೊಂಡು ಊಟ ಮಾಡಿರೋದು ನೀವು. ಆದ್ದರಿಂದ ಈ ಸಾಲವೇ ಕೃತಕ ಕಾಗದದ ಲೆಕ್ಕಾಚಾರ. ಈ ಕೃತಕ ಕಾಗದದ ಲೆಕ್ಕಾಚಾರ ರದ್ದಾಗಬೇಕು ಎಂದಷ್ಟೇ ನಾವು ಕೇಳುತ್ತಿರುವುದು..."



"ಇದು ಪತ್ರಿಕೆಯಲ್ಲ, ಪ್ರತಿಭಟನೆಯ ಅಸ್ತ್ರ" ಎಂಬ ಘೋಷಣೆಯೊಂದಿಗೆ 'ಅಗ್ನಿ' ವಾರಪತ್ರಿಕೆಯನ್ನು ಕಳೆದ ಆರು ವರ್ಷಗಳಿಂದ ಪ್ರಕಟಿಸುತ್ತಿರುವ ಶ್ರೀಧರ್ ಪ್ರಗತಿಪರ ಆಲೋಚನೆಗಳಿಗೆ ಒತ್ತು ಕೊಡುತ್ತಾ ಬಂದಿದ್ದಾರೆ. ಜಾತ್ಯತೀತರಿಗೆ ಅಗ್ನಿ ನಿಜಕ್ಕೂ ಒಂದು ಅಸ್ತ್ರ. ಶ್ರೀಧರ್ ಕರ್ನಾಟಕದ ಎಲ್ಲಾ ಬೌದ್ಧಿಕ ಸಂಪತ್ತನ್ನು ಒಟ್ಟುಗೂಡಿಸಿ ಪತ್ರಿಕೆಗೆ ಧಾರೆ ಎರೆದಿದ್ದಾರೆ ಅನಿಸುತ್ತದೆ. ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರು ನಿಧನರಾದ ಸಂದರ್ಭದಲ್ಲಿ ಅವರ ನೆನಪಿಗೆ 'ಹಸಿರು ಟವಲ್ ಪರಿವಾರ' ಎಂದೆಸರಿಸಿ ವಿಶೇಷ ಬರಹಗಳ ಸಂಚಿಕೆ ಹೊರತಂದು ಸೂಕ್ತ ಶ್ರದ್ಧಾಂಜಲಿ ಅರ್ಪಿಸಿದ್ದಾರೆ. ಆ ಪತ್ರಿಕೆಯ ಎರಡು ಬರಹಗಳು ಇಲ್ಲಿವೆ. ಶ್ರೀಧರ್ ಹಾಗೂ ಅವರ ಬರಹಗಾರರ ಬಳಗಕ್ಕೆ ಕೃತಜ್ಞತೆಗಳು.

ಯುವಪ್ರತಿಭೆ ವಿಭಾ: ಉರುಳಿಬಿದ್ದ ನಕ್ಷತ್ರ

- ವಿಷ್ಣುನಾಯ್ಕ

ಆ ಗಳಿಗೆ,
ಹೊರಗೆ ಯಾರೋ ಕೂಗಿದರು
'ಪುಟ್ಟ ಮಗುವೊಂದು ಕಾಲು ಜಾರಿ
ಬಾವಿಗೆ ಬಿದ್ದಿದೆ !'
ತಕ್ಷಣ
ಮಾತೇ ಹೊರಡುತ್ತಿಲ್ಲ, ಢವಗುಟ್ಟುವ
ಎದೆ, ಬಾಯಾರಿದೆ - ಕೈಕಾಲು ತಣ್ಣಗೆ
ನಡುಗುವ ದನಿಯಲ್ಲಿ ಕೇಳುತ್ತೇನೆ :
'ಯಾರು?...'
ಆ ಕಡೆಯ ಉತ್ತರ
'ಯಾರಿಗೆ ಗೊತ್ತು?'
ಛೇ, ಎಂಥಾ ಅನಾಸಕ್ತಿ!

ಮೊದಲ ಓದಿಗೇ ನನ್ನನ್ನು ಸಾಕಷ್ಟು ತಟ್ಟಿದ ಒಂದು ಕವಿತೆಯ ('ಆ ಗಳಿಗೆಯ ಸತ್ಯ') ಆರಂಭದ ಸಾಲುಗಳಿವು.



'ವಿಭಾ' - ಎರಡು ಅಕ್ಷರಗಳ ಹೆಸರಿನ ಈ ಹುಡುಗಿ ಕವಯತ್ರಿ, ಅನುವಾದಕಿ, ವಿಚಾರಶೀಲ ಬರಹಗಾರಳಾಗಿ ಸಾಹಿತ್ಯದಲ್ಲಿ ಬೇರುಬಿಡುವ ಸಂದರ್ಭದಲ್ಲೇ ನಮ್ಮನ್ನಗಲಿದ್ದಾಳೆ. ಬಂಡಾಯ ಗೆಳೆಯ 'ಬಸೂ'ವನ್ನು ಜೀವನ ಸಂಗಾತಿಯಾಗಿ ಪಡೆದಿದ್ದ ಈಕೆ, ವೈಯಕ್ತಿಕವಾಗಿ ನನಗೆ ಪರಿಚಯವಿಲ್ಲದಿದ್ದರೂ, ಅಲ್ಲಲ್ಲಿ ಈಕೆಯ ಬರಹದ ಮಿಂಚನ್ನು, ಗಟ್ಟಿತನವನ್ನು ಗಮನಿಸಿದ್ದೆ. ಕಳೆದ ವರ್ಷ ಬಸೂ ಮದುವೆಯ ಪತ್ರ ಕಳುಹಿಸಿದ್ದಾಗ ಇಬ್ಬರೂ ಸಂಗಾತಿಗಳಾಗುವ ಸುದ್ದಿ ಖುಷಿ ಕೊಟ್ಟಿತ್ತು. ಶುಭಾಶಯದ ಪತ್ರ ಕಳುಹಿಸದಿದ್ದರೂ ಮನದಲ್ಲೇ ಇಬ್ಬರನ್ನೂ ಹರಸಿದ್ದೆ. ಮೊನ್ನೆ ಯುಗಾದಿಯಂದು ಒಂದು ಮಗುವಿಗೆ ಜೀವಕೊಟ್ಟು 'ವಿಭಾ' ಕಣ್ಮುಚ್ಚಿದ್ದಾಳೆ. ಆಕೆಯ ನೆನಪಿಗೆ ಇಲ್ಲಿನ ಬರಹಗಳೇ ಶ್ರದ್ಧಾಂಜಲಿ. ಹಾಗೇ ಆಕೆ ಸಾಯುವ ಮುನ್ನ 'ಹೊಸತು' ಪತ್ರಿಕೆಗೆ ಬರೆದ ಒಂದು ಚಿಂತನಾರ್ಹ ಬರಹ ಸಹಾ ಈ ಮುಂದಿನ ಪುಟದಲ್ಲಿದೆ. *- ಸಂಪಾದಕ.*

ಬರೆದವಳು ಬಾಗಲಕೋಟೆಯ ಯುವ ಕವಯಿತ್ರಿ, - ವಿಭಾ ತಿರುಕಪಡಿ. ಓದಿದ ಸಂದರ್ಭ, - 'ಸಕಾಲಿಕ' ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಹೊಸ ತಲೆಮಾರಿನ ಬರಹಗಾರರಿಗಾಗಿ ಏರ್ಪಡಿಸಿದ ಕವನ ಸ್ಪರ್ಧೆ.

ಈ ವಿಭಾ ನನಗೆ ಪರಿಚಯವಾದದ್ದು ಯುವ ಕವಿಮಿತ್ರ ಸಂದೀಪನ ಮೂಲಕ. 'ಸಕಾಲಿಕ' ಆರಂಭವಾಗಲು ಒಂದೆರಡು ವಾರಗಳು ಮಾತ್ರ ಇದ್ದವು. ಪತ್ರಿಕೆಯನ್ನು ಎಲ್ಲ ದೃಷ್ಟಿಯಿಂದ ಗಟ್ಟಿಗೊಳಿಸಬೇಕು ಎಂಬ ಉದ್ದೇಶವಿತ್ತು. ಸಮರ್ಥ ದನಿಗಳೇ ಹೆಚ್ಚು ಹೆಚ್ಚು ಕಾಣಿಸಿಕೊಳ್ಳಬೇಕು, ಹೊಸ ಬರಹಗಾರರಿಗೆ ಅವಕಾಶದ ಸಿಂಹಪಾಲು ಸಿಗಬೇಕು, ಮಕ್ಕಳ ಪುಟಕ್ಕೆ ಒತ್ತು ಕೊಡಬೇಕು - ಹೀಗೆ ಏನೆಲ್ಲ ಕನಸುಗಳನ್ನು ಹೆಣೆಯುತ್ತಿದ್ದ ಆ ದಿನಗಳಲ್ಲಿ ಅತ್ತ ಸಂದೀಪ, ಇತ್ತ ಸಿದ್ಧಲಿಂಗಸ್ವಾಮಿ ವಸ್ತ್ರದ, ಇನ್ನೊಂದೆಡೆ ಪ್ರೇಮಾನಂದ ಸ್ವಯಿಯವಾಗಿ ನನ್ನ ಬಲಕ್ಕೆ ನಿಂತವರು.

ಸಂದೀಪ ತಂದುಕೊಟ್ಟ ಹೊಸ ತಲೆಮಾರಿನ ಬರಹಗಾರರ ಪಟ್ಟಿಯಲ್ಲಿ ಈ ವಿಭಾಳ ಹೆಸರಿತ್ತು. ತಾನೇ ಮುಂದಾಗಿ ಅವಳಿಂದ ಕವಿತೆಯೊಂದನ್ನು ಪಡೆದು 'ಸಕಾಲಿಕ'ಕ್ಕೆ ಪರಿಚಯಿಸಿದ್ದ.

ಅಲ್ಲಿಂದ ಶುರು - 'ಸಕಾಲಿಕ'ದೊಂದಿಗಿನ ಅವಳ ಸಂಬಂಧ. 'ಸಕಾಲಿಕ'ದ ನವೆಂಬರ್ ೧೩ರ ಸಂಚಿಕೆಯಲ್ಲಿ ಮೇಲೆ ಉದ್ಧರಿಸಿದ ಕವನ ಪ್ರಕಟವಾದಾಗ ಬಾಯ್ತುಂಬ ಹೊಗಳಿ ಬಂದ ದೂರವಾಣಿಯ ಧ್ವನಿಗಳು ಈಗಲೂ ನನ್ನ ಕರ್ಣ - ಕವಾಟದ ಒಳಗಡೆಯೇ ಮರುಧ್ವನಿ ಪಡೆಯುತ್ತಿರುವ ಅನುಭವ.

ಒಮ್ಮೆ ಅವಳು ತಾನು ಕೆಲಸ ಮಾಡುತ್ತಿರುವ ಆಫೀಸಿನಿಂದ (ಅಂಚೆ ಅಧೀಕ್ಷಕರ ಕಚೇರಿ, ಬಾಗಲಕೋಟೆ) ದೂರವಾಣಿಯಲ್ಲಿ ಮಾತನಾಡಿ ಸ್ಪರ್ಧೆಯ ಬಹುಮಾನ ಸ್ವೀಕರಿಸಲು ಅಂಕೋಲೆಗೆ ಬರಲಾಗದ್ದಕ್ಕೆ ಬೇಸರಿಸದಿರುವಂತೆ ಕೇಳಿಕೊಂಡಿದ್ದಳು. ಡಾ. ಆರ್.ವಿ. ಭಂಡಾರಿಯವರಿಂದ ನನ್ನ ಬಗ್ಗೆ ತನ್ನ ಮನೆಯವರಿಗೆ (ಬಸವರಾಜ ಸೂಳಿಬಾವಿ) ಹೆಚ್ಚಿನ ಸಮಾಚಾರ ತಿಳಿದಿದೆಯೆಂದೂ ಇಬ್ಬರೂ ಕೂಡಿ ಮುಂದೊಂದು ದಿನ ಉಳಿದು ಹೋಗುವುದಾಗಿಯೂ, - ಬಾಯ್ತುಂಬ ಆಡಿದ ಅಂದಿನ ತನ್ನ ಮಾತಿನ ಮಧ್ಯೆ - ಭರವಸೆ ಕೊಟ್ಟಿದ್ದಳು.

ಆದರೆ ಅವಳು ಬಂದಿಲ್ಲ ಮಾತ್ರವಲ್ಲ, ಬರಲಾಗದ ದಾರಿ ಹಿಡಿದು ಈಗ ಹೋಗಿ ಬಿಟ್ಟಿದ್ದಾಳೆ, - ೧೯ ದಿನಗಳ ತನ್ನ ಹಸುಕಂದನನ್ನು ಇಲ್ಲಿಯೇ ಬಿಟ್ಟು!

ಸರ್ರನೆ ಕಾಲುಜಾರಿ ಕಣ್ಮರೆಯಾದಂತೆ; ಅದಕ್ಕೆ ಯಾರದೋ ಅನಾಸಕ್ತಿ ಕಾರಣವಾದಂತೆ; ಯಾರಿಗೆ ಗೊತ್ತು? ಅವಳ ಕವನದ ಭಾಷೆಯಲ್ಲೇ ಹೇಳುವುದಾದರೆ, 'ಹೊರಗೆ ಯಾರೊ ಕೂಗಿದರು' ಇವಳು ಎದ್ದು ನಡೆದೇ ಬಿಟ್ಟಳು!

ಅಂದು (ಮಾರ್ಚ್ ೩೦) ಕಾಲೇಜಿನಿಂದ ತಡ ಮಾಡಿ ಬಂದು ಊಟ ಮುಗಿಸಿದ್ದೆನಷ್ಟೇ. ಗದುಗಿನ ಕವಿಮಿತ್ರ ಎಂ.ಡಿ. ಒಕ್ಕುಂದ ಫೋನ್ ಮಾಡಿ, 'ಸರ್, ನಿಮಗೊಂದು ಕೆಟ್ಟ ಸುದ್ದಿ ಹೇಳುತ್ತಿದ್ದೇನೆ' ಅಂದಾಗ, ಜಾಗ್ರತಗೊಂಡ ಮನಸ್ಸು, 'ಇದು ಯಾರ ಸಾವಿಗೂ ಸಂಬಂಧಿಸಿದ್ದಾಗದೇ ಇರಲಿ' ಎಂದು ಬೇಡಿಕೊಳ್ಳತೊಡಗಿತ್ತು, - ಇತ್ತೀಚೆಗಷ್ಟೇ ಕಳೆದುಕೊಂಡ ಕವಿಮಿತ್ರ ಗವಿಸಿದ್ಧ ಬಳ್ಳಾರಿಯೇ ಕಣ್ಮುಂದೆ ನಿಂತಂತಾಗಿ!

ಆದರೆ ಮುಂದುವರೆದ ದೂರವಾಣಿಯ ಧ್ವನಿ ಸ್ಫೋಟಿಸಿದ್ದು,- ಯಾವುದನ್ನು ಬೇಡ ಅಂದೆನೊ ಅದನ್ನೇ! 'ವಿಭಾ ಹೋಗಿಬಿಟ್ಟಳು ಸರ್!' ಎಂದಾಗ, ೨೫ರ ಹರೆಯದಲ್ಲಿ - ದಿಗ್ಗನೆ ಮೇಲಕ್ಕೇರಿದ್ದ ತಂಗಿ - ವಿಭಾ ತಿರುಕಪಡಿಯ ಸಾಧನೆಯ ಹಾದಿಯಲ್ಲಿಯ - ಸಾವಿರ ಕನಸುಗಳು ದೊಪ್ಪನೆ ಕೆಳಗೆ ಬಿದ್ದು ಚೂರುಚೂರಾದಂತೆ ನೋವಿನ ಅನುಭವ!... ಹೊಳಪು ಕಣ್ಣಿನ, ದುಂಡುಮೊಗದ, ದಿಟ್ಟ ಹೆಣ್ಣು ಮೊಳಕೆಯಲ್ಲೇ ಪ್ರಚಂಡ ಪ್ರತಿಭೆಯನ್ನು ತೋರಿ ತಟ್ಟನೆ ನೇಪಥ್ಯಕ್ಕೆ ಸರಿದಂತೆ!...

ಅಂದಿನ ಮಧ್ಯಾಹ್ನದ ಧಗೆ ಎಂದಿಗಿಂತ ಹೆಚ್ಚು ಉರಿಯಿಂದ ಕೊಲ್ಲತೊಡಗಿತ್ತು. ಈ ವಿಚಾರ ಸಂದೀಪನಿಗೆ ಗೊತ್ತಿದೆಯೇ?... ಗೊತ್ತಿದ್ದರೆ ನನಗೊಂದು ಫೋನ್ ಮಾಡುತ್ತಿದ್ದ - ಅಂದುಕೊಂಡವನೇ, ಫೋನ್ ಎತ್ತಿದೆ. ಆತ ಮನೆಯಲ್ಲಿಲ್ಲ.

ಕೆಲವೇ ನಿಮಿಷಗಳಲ್ಲಿ ನನಗೇ ಫೋನು. ರಿಸೀವರ್ ಕಿವಿಗೆ ಹಿಡಿದಾಗ, ತೀರಾ ಅಪರಿಚಿತ ದನಿ! 'ನಾನು ಸರ್, ಬಾಗಲಕೋಟೆಯಿಂದ ಬಸವರಾಜ ಸೂಳಿಬಾವಿ. ವಿಭಾಳ ಗಂಡ!' ಎಂದಾಗ ಸಾಕಷ್ಟು ಡಿಸ್ಟರ್ಬ್ ಆಗಿದ್ದ ಆತನನ್ನು ಸಂತೈಸುವ ಪದಗಳಿಗಾಗಿ ಒದ್ದಾಡಿದ್ದೆ.

ಮದುವೆಯಾಗಿ ಹನ್ನೊಂದು ತಿಂಗಳಲ್ಲೇ ತಾಯಿಯಾದ ವಿಭಾ, ಹೆರಿಗೆಯ ವೇಳೆ ಆಯಿತೆನ್ನಲಾದ ಅಚಾತುರ್ಯಕ್ಕೆ ಪ್ರಾಣ ಒಪ್ಪಿಸುವಂತಾದುದು ಕರುಳು ಹಿಂಡುವ ಘಟನೆ. ಮಾರ್ಚ್ ೬ಕ್ಕೆ ಹೆತ್ತಳು. ಹೆತ್ತ ಗಳಿಗೆಯಿಂದ, ಸಾವಿನ ಗಳಿಗೆಯವರೆಗಿನ ದಿನಗಳನ್ನು - ಯಾರದೋ ತಪ್ಪಿಗಾಗಿ - ಯಮಯಾತನೆಯಲ್ಲಿ ಕಳೆದಳು. ಕೊನೆಗೊಂದು ಕ್ಷಣ, 'ಇನ್ನು ನನ್ನಿಂದಾಗದು ಈ ಮಗು ನಿಮ್ಮದು' ಎಂದೊಪ್ಪಿಸಿ ಹೋಗೇ ಬಿಟ್ಟಳು! (ಮಾರ್ಚ್ ೨೫).

ಕಲ್ಪನಾ ಚಾವ್ಲಾ ದೇಹಾಂತ್ಯವಾದ ವಾರ್ತೆ ಕೇಳಿದ ದಿನ ಇದೇ ತೆರನಾದ ನೋವು ಕಾಡಿತ್ತು. ಕನ್ನಡ ಸಾಹಿತ್ಯ ರಂಗದ ತುಂಬು ಭರವಸೆಯ ಈ ನಕ್ಷತ್ರ ಹೀಗೆ, - ಇಷ್ಟು ಬೇಗ, ಉರುಳಿ ಬೀಳುತ್ತದೆಂಬುದನ್ನು ಒಪ್ಪಿಕೊಳ್ಳುವುದಕ್ಕೆ ಮನಸ್ಸೇಕೋ ಸಿದ್ಧವಾಗಿಯೇ ಇಲ್ಲ.

(ವಿಷ್ಣುನಾಯ್ಕರವರ ಸಕಾಲಿಕ ವಾರಪತ್ರಿಕೆಯ ಅರೆಖಾಸಗಿಯಿಂದ)

ಇನ್ನಿಲ್ಲವಾದ ಕನಸುಗಾರ್ತಿ ವಿಭಾತಿರುಕಪಡಿ

- ಎನ್.ಎಸ್. ಶ್ರೀಧರಮೂರ್ತಿ

ಹೊಸ ಪೀಳಿಗೆ ಬರಹಗಾರರಲ್ಲಿ ಎದ್ದು ಕಾಣುತ್ತಿದ್ದ ಹೆಸರು, ಕತೆ ಕವಿತೆ ಲೇಖನ ಪ್ರಬಂಧ ಅನುವಾದ ಹೀಗೆ ಹಲವು ಕ್ಷೇತ್ರದಲ್ಲಿ ಸಕ್ರಿಯವಾಗಿದ್ದ ಅವಳ ದೈತ್ಯ ಪ್ರತಿಭೆಯೇ, ಅಂಕಣ ಬರೆಸುವಂತೆ ನನ್ನನ್ನು ಪ್ರೇರೇಪಿಸಿದ್ದು. ಆ ಅಂಕಣದ ಮೂಲಕ ವಿಭಾ ಮಲ್ಲಿಗೆ ಓದುಗರಿಗೆ ಆತ್ಮೀಯಳಾಗಿದ್ದಳು. ಎರಡು ವರ್ಷದ ಹಿಂದೆ ಅವಳ ಸೋದರಿ ವಿದ್ಯಾ ಅಕಾಲಿಕ ಮರಣಕ್ಕೆ ತುತ್ತಾದಾಗ, ನಮ್ಮ ಓದುಗರು ಕಂಬನಿ ಮಿಡಿದಿದ್ದರು. ವಿಭಾಗೆ ಒಳಿತನ್ನು ಹಾರೈಸಿದ್ದರು. ಬದುಕು ಏಕೋ ನನ್ನನ್ನು ಅತಿಯಾಗಿ ಪರೀಕ್ಷಿಸುತ್ತಿದೆ ಎಂದು ಅಧೈರ್ಯ ಹೊಂದಿದ್ದ ವಿಭಾಳನ್ನು ಸಂತೈಸಲು ಸಂಗಾತಿಯಾಗಿ ಬಸವರಾಜ್ ಸೂಳೆಬಾವಿ ಕಳೆದ ೨೦೦೩ ಮೇ ಆರಂದು ಸಪ್ತಪದಿ ತುಳಿದಿದ್ದರು.

೨೦೦೪, ಮಾರ್ಚ ೨೨, ಯುಗಾದಿ ಮರುದಿನದ ಬೆಳಗ್ಗೆ ಆನಂದ ಋಗ್ವೇದಿಯ ಅನಿರೀಕ್ಷಿತ ದೂರವಾಣಿ ಕರೆ ಹೇಳಿದ್ದು ನಂಬಲಸಾಧ್ಯವಾದ ಶೋಕದ ಸುದ್ದಿಯನ್ನು, ತಾಯ್ತನದ ಕನಸು ಹೊತ್ತ ವಿಭಾ, ಹೆರಿಗೆಯಲ್ಲಿನ ತಾಂತ್ರಿಕ ದೋಷಕ್ಕೆ ಬಲಿಯಾಗಿ ಅಕಾರಣವಾಗಿ ಮರಣವನ್ನಪ್ಪಿದ್ದಳು. ಬದುಕಿನ ಪ್ರತೀ ಸವಾಲನ್ನು ದಿಟ್ಟವಾಗಿ ಎದುರಿಸಿದ ಛಲಗಾತಿಯನ್ನು ಸಾವು ಮಣಿಸಿತ್ತು.

ವಿಭಾ, ಕ್ರೈಸ್ಟ್ ಕಾಲೇಜ್ ಸ್ಪರ್ಧೆಗಳ ಮೂಲಕ ನನ್ನ ಗಮನಕ್ಕೆ ಬಂದಳು. ಮಲ್ಲಿಗೆಗಾಗಿ ಅವಳು ಕಳುಹಿಸಿದ್ದ ಹಕ್ಕಿಗಳ ಕುರಿತಾದ ಪ್ರಬಂಧ ನನಗೆ ಬಹಳವಾಗಿ ಇಷ್ಟವಾಗಿತ್ತು. ಇದೇ ಪ್ರೇರಣೆಯಲ್ಲಿ ಅಂಕಣಕ್ಕಾಗಿ ಅವಳನ್ನು ಆಹ್ವಾನಿಸಿದ್ದು, ಆರಂಭದಲ್ಲಿ ವಿಶಿಷ್ಟವಾಗಿದ್ದ ಅಂಕಣ ಬರುತ್ತಾ ಅರ್ಪಣೆಯ ಕೊರತೆಯಿಂದ ಸಪ್ಪೆಯಾಗತೊಡಗಿತ್ತು. ಅದೇ ಹೊತ್ತಿಗೆ ಭಾವನಾ ಎಂಬ ಚೆಂದದ ಮಾಸಿಕವನ್ನು ಜಯಂತ್ ಕಾಯ್ಕಿಣಿ ತಂದಿದ್ದರು. ಹೊಸ ಪೀಳಿಗೆಯ ಹಲವರಿಗೆ ಭಾವನಾ ಪ್ರಿಯವಾಗಿತ್ತು. ಮಲ್ಲಿಗೆ ಅದೇ ಹಾದಿ ಹಿಡಿಯಲಿ ಎಂದು ಹಂಬಲಿಸಿದವರು ಹಲವರು. ಹೀಗೆ ಉಗ್ರವಾಗಿ ವಾದಿಸಿದವರಲ್ಲಿ ವಿಭಾ ಪ್ರಮುಖಳು. ತನ್ನದೇ ಆದ, ದಶಕಗಳಷ್ಟು ಹಳೆಯ ಬಾಂಧವ್ಯವುಳ್ಳ ಓದುಗರನ್ನು ಹೊಂದಿದ್ದ ಮಲ್ಲಿಗೆ ಹಾಗೆ ದಿಢೀರನೆ ಪರಿವರ್ತಿತವಾಗುವುದು ಅಸಾಧ್ಯವಾಗಿತ್ತು, ಜೊತೆಗೆ ಅನಗತ್ಯವೂ ಆಗಿತ್ತು. ಇದನ್ನು ವಿಭಾಳಿಗೆ ವಿವರಿಸುವಲ್ಲಿ ನಾನು ಸೋತಿದ್ದೆ... ಭಾವನಾ ಅಕಾಲಿಕ ನಿಲುಗಡೆ ಕಂಡ ಮೇಲೆ ಇಂತಹ ಅಪೇಕ್ಷೆ ಹೆಚ್ಚಾಯಿತು. ನಾನು ಅದನ್ನು ಈಡೇರಿಸಲಿದ್ದು, ವಿಭಾಳ ಅಸಮಧಾನಕ್ಕೆ ಕಾರಣವಾಗಿ ಅಂತಿಮವಾಗಿ ಅಂಕಣ ನಿಲುಗಡೆಗೂ ನಾಂದಿಯಾಯಿತು. ಇದರ ಹೊರತಾಗಿಯೂ ಬದುಕು ವಿಭಾಳನ್ನು ಅತಿಯಾಗಿ ಪರೀಕ್ಷೆಗೆ ಒಳಪಡಿಸುತ್ತಿತ್ತು. ಇಂತಹ ಗೊಂದಲವೂ ಅವಳ ಬರಹಕ್ಕೆ ತಡೆಯೊಡ್ಡಿತು.

ಕಳೆದ ಕೆಲವು ತಿಂಗಳುಗಳಲ್ಲಿ ಅವಳ ಸೃಜನಶೀಲತೆ ಮರುಹುಟ್ಟು ಕಂಡಿತು. ಪುಂಖಾನುಪುಂಖವಾಗಿ ಅನುವಾದಗಳು ಬಂದವು. ನಿಜಕ್ಕೂ ಸಂತೋಷವೆನ್ನಿಸುವಂತಿತ್ತು. ಇಂತಹ ಹೊತ್ತಿನಲ್ಲೇ ಅಂಕಣ ಮುಂದುವರಿಸಲೇ ಎಂದಳು. ಮೊದಲ ಪ್ರಯೋಗದ ಕಹಿ ನನ್ನನ್ನು ಇನ್ನು ಕಾಡುತ್ತಿತ್ತು. ಒಲ್ಲೆ ಅಂದೆ. ಆದರೆ ವಿಶಿಷ್ಟವಾದ ಕತೆಗೆ ಪ್ರಯತ್ನಿಸಿ ಎಂದೆ. ಅದರ ಫಲವಾಗಿ ಓ ಹೆನ್ರಿಯ ಮದುವೆಯ ಅತಿಥಿಯನ್ನು ಚೆಂದವಾಗಿ ಅನುವಾದಿಸಿ ಕಳುಹಿಸಿದಳು. ಅದಕ್ಕೆ ನಾನಿನ್ನು ಪ್ರತಿಕ್ರಿಯಿಸಿರಲಿಲ್ಲ. ಆಗಲೇ ಅವಳ ಸಾವಿನ ಸುದ್ದಿ ಬಂದಿದೆ. ಬದುಕು ಇಷ್ಟೊಂದು ಕ್ರೂರವಾಗಬೇಕೆ!

ನನ್ನ ಅಂಕಣವಲ್ಲೊಮ್ಮೆ ಅವಳ ಕುರಿತು ಪ್ರಸ್ತಾಪಿಸುವಾಗ ಪುಟ್ಟ ಹುಡುಗಿ ಎಂದು ಕರೆದಿದ್ದೆ. ಈ ಒಕ್ಕಣೆ ಅವಳಿಗೆ ಪ್ರಿಯವಾಗಿತ್ತು. ಪ್ರತಿ ಪತ್ರದಲ್ಲೂ ನಿಮ್ಮ ಪುಟ್ಟ ಹುಡುಗಿ ಎಂಬ ಸಾಲು ಇದ್ದೇ ಇರುತ್ತಿತ್ತು. ಪುಟ್ಟ ಹುಡುಗಿಯ ಸಾವಿನ ಸುದ್ದಿಯನ್ನು ಓದುಗರಿಗೆ ಹೇಳಬೇಕಾದ್ದಕ್ಕಿಂತ ದೌರ್ಭಾಗ್ಯ ಬಹುಶಃ ಬೇರೆ ಇಲ್ಲ.

•

ಕೃಪೆ: 'ಮಲ್ಲಿಗೆ' (ಮೇ, ೨೦೦೪)

ಹೊಸದಿಕ್ಕಿನ ಹುಡುಕಾಟದತ್ತ...

- ವಿಭಾ ತಿರುಕಪಡಿ

'ಮಾಧ್ಯಮಗಳ ಅಬ್ಬರ, ಅವಸರದ ಜಗತ್ತು, ಅಶಾಂತಿ ತುಂಬಿದ ಬದುಕು, ಧರ್ಮ ಮತಗಳ ಕೈಗೊಂಬೆಯಾದ ಸಮಾಜ... ಹೀಗೆ ಎಲ್ಲ ಗಮನಿಸುತ್ತ ಹೋದರೆ ಆಧುನಿಕ ಯುಗದಲ್ಲಿ ಕಾವ್ಯ ತನ್ನ ಛಾಪನ್ನು ಉಳಿಸಿಕೊಂಡಿದೆಯೆ? ಕಾವ್ಯ ಬದುಕಿದೆಯೆ? ಎಂಬ ವಿಷಾದವೊಂದು ಪ್ರಶ್ನೆಯಾಗಿ ಕಾಡುತ್ತದೆ' ಎಂದು ಹಳಹಳಿಸುವವರ ಸಂಖ್ಯೆ ಈಗಿನ ದಿನಗಳಲ್ಲಿ ಹೆಚ್ಚಾಗಿದೆ. ಉದಾತ್ತ ಪ್ರೇರಣೆ

ಹಾಗೂ ಕಾವ್ಯ ಕಲೆಯ ಪರಿಚಯ ಇಲ್ಲದೆ ಕಾವ್ಯ ರಚನೆಗೆ ತೊಡಗಿದವರಿಂದ ಕಾವ್ಯಕ್ಕೆ ಅನ್ಯಾಯವೇ ಆಗುತ್ತ ಬಂದಿದೆ, ಆಗುತ್ತಿದೆ. ಇದೆಲ್ಲದರಾಚೆ ಕಾವ್ಯದ ಸಹಜ ಗುಣಗಳನ್ನೆಲ್ಲ ಮೈಗೂಡಿಸಿಕೊಂಡು ಮೌನವಾಗಿ ಕಾವ್ಯ ರಚನೆಯಲ್ಲಿ ತೊಡಗಿದವರ ಸಂಖ್ಯೆ ಕನ್ನಡ ಕಾವ್ಯಲೋಕದಲ್ಲಿ ಕಡಿಮೆಯೇನಿಲ್ಲ. ಕಾವ್ಯ ಬೆಳವಣಿಗೆಯ ಹಲವಾರು ಘಟ್ಟಗಳಲ್ಲಿ ಕಾಲ ಮಹತ್ವದ ಪಾತ್ರ ವಹಿಸುತ್ತದೆ. ಹೊಸಗನ್ನಡ ಕಾವ್ಯವನ್ನು ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ-ದಲಿತ ಇತ್ಯಾದಿಯಾಗಿ ವಿಂಗಡಿಸಿದ್ದೇವಷ್ಟೆ. ಒಂದು ಕಾಲಕ್ಕೆ ಅತ್ಯಂತ ಜನಪ್ರಿಯ ಮಾಧ್ಯಮವಾದ ಕಾವ್ಯ ಬರ-ಬರುತ್ತ ಸಾಮಾನ್ಯ ಜನರ ಬದುಕಿನಿಂದ ದೂರ ಸರಿದದ್ದಕ್ಕೆ ಕಾರಣಗಳೇನೇ ಇರಬಹುದು. ಆದರೆ ಜನಸಮುದಾಯ ಹಾಗೂ ಕಾವ್ಯದ ನಡುವೆ ಅಂತರ ಸೃಷ್ಟಿಯಾದದ್ದು ಸತ್ಯವಾದ ಮಾತು. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನವೋದಯ ಕಾಲಘಟ್ಟದವರೆಗೆ ವ್ಯಾಪಕವಾಗಿ ಪ್ರಚಾರದಲ್ಲಿದ್ದ ಕಾವ್ಯ ಮಾಧ್ಯಮ ಕ್ರಮೇಣ ಜನಪ್ರೀತಿಯನ್ನು ಉಳಿಸಿಕೊಳ್ಳಲು ಅಸಮರ್ಥವಾದದ್ದು ಕಾವ್ಯಲೋಕದ ದುರಂತವೇ ಸರಿ.

ನವೋದಯ ಕಾವ್ಯ ಒಂದು ಹಂತವನ್ನು ತಲುಪಿದ್ದನ್ನು ಗಮನಿಸಿ ಡಾ. ವಿ.ಕೃ. ಗೋಕಾಕರು 'ಒಂದು ಪರಂಪರೆಯು ಪೂರ್ಣವಾದಾಗ ಇನ್ನೊಂದು ಹೊಳಹನ್ನು ಹಾಕದೆ ಉಕ್ತಿಗೆ ಸಮಗ್ರತೆಯೂ, ಕಾಂತಿಯೂ ಬರುವುದು ಕಠಿಣ' ಎನ್ನುವ ಮಾತನ್ನು ಹೇಳಿ ಹೊಸ ಕಾವ್ಯ ಪರಂಪರೆಯನ್ನು ಮುಕ್ತವಾಗಿ ಸ್ವಾಗತಿಸಿದ್ದರು. ನವ್ಯಕಾವ್ಯ ಮುಕ್ತಛಂದದ ಮಾದರಿಯಲ್ಲಿ ಹೊಸ ತೆರನಾದ ಕಾವ್ಯ ಕಟ್ಟಿಕೊಡುತ್ತ, ಮಣ್ಣಿನ ವಾಸನೆಯನ್ನು, ಆಡುಮಾತಿನ ಲಯವನ್ನು ಕಾವ್ಯಕ್ಕೆ ತರಬೇಕೆಂಬ ಧೋರಣೆಯನ್ನು ಪ್ರತಿಪಾದಿಸುತ್ತಲೇ 'ಬುದ್ಧಿ ಭಾಷೆಗಳ ವಿದ್ಯುದಾಲಿಂಗನದಲ್ಲಿ ಲೀನವಾಗಿ, ರೂಪಕ, ಸಂಕೇತ, ಪ್ರತಿಮೆಗಳಲ್ಲಿ ಒಂದಾಗಿ, ರಚನೆ ಕ್ಲಿಷ್ಟವಾಗಿ ಕಾವ್ಯ ಕೆಲವೇ ಬುದ್ಧಿಜೀವಿಗಳ ಸೊತ್ತಾಗಿಬಿಟ್ಟಿತು'. ಕವಿಯ ಆಂತರಿಕ ಹಳಹಳಿಕೆಗಳು ದಟ್ಟವಾದ ಸಂಕೇತ-ಪ್ರತಿಮೆಗಳ ಮೂಲಕ, ಕ್ಲಿಷ್ಟ ಭಾಷೆಯ ಮೂಲಕ ಹೊರಬಂದು ಕವಿತೆಗಳು ಹೆಚ್ಚು ಸಂಕೀರ್ಣವಾಗುತ್ತ ಸಾಮಾನ್ಯ ಜನರಿಂದ ದೂರವಾಗತೊಡಗಿದವು. ನವ್ಯಕಾವ್ಯದ ಹರಿಕಾರರಾದ ಗೋಪಾಲಕೃಷ್ಣ ಅಡಿಗರ ಕಾವ್ಯದ ಧೋರಣೆ ಹಾಗೂ ಪ್ರಾಮಾಣಿಕತೆಯನ್ನು ಅವರ ಹಿಂಬಾಲಕರೇ ಪ್ರಶ್ನಿಸತೊಡಗಿದರು. ಅಡಿಗರಿಂದ ಭಿನ್ನವಾಗಿ ಬರೆಯಬೇಕೆಂಬ ಛಲ ಹುಟ್ಟಿಕೊಂಡಿತು. ನವ್ಯರ ಕಾವ್ಯ ಹೆಚ್ಚು ಅಂತರ್ಮುಖಿಯಾಗತೊಡಗಿತ್ತು. ಅವರ ಬಚ್ಚಿಟ್ಟ ಭಾವನೆಗಳಿಗೆ ಅಭಿವ್ಯಕ್ತಿ ಕೊಡಲು ಪ್ರಯತ್ನಿಸಿದರು. ಹೀಗಾಗಿ ಕಾವ್ಯ ಜಟಿಲವಾಗತೊಡಗಿತು. ಇಂಥ ಸಂದರ್ಭದಲ್ಲಿ ನವ್ಯಕಾವ್ಯದ ವಿರುದ್ಧ ಬಂಡಾಯ ಹುಟ್ಟಿಕೊಂಡಿತು. ಸಾಮಾಜಿಕ, ಸಮಕಾಲೀನ ರಾಜಕೀಯ ಸ್ಥಿತಿ ಗತಿಗಳ ಪ್ರಭಾವದ ಅಡಿಯಲ್ಲಿ, ಕಾವ್ಯ ಸಾಮಾಜಿಕ ಅಗತ್ಯ ಎಂಬ ಧೋರಣೆ ಬೆಳೆದು ಕಾವ್ಯ ಹೊಸಹಾದಿ ಕಂಡುಕೊಂಡಿತು. ಬೌದ್ಧಿಕ ಆಟಾಟೋಪಗಳಿಗಿಂತ ಸಾಮಾನ್ಯರ ಆಡುಮಾತು ಕಾವ್ಯವಾಗಬೇಕೆಂಬುದು ಬಂಡಾಯದ ಆಶಯವಾಯಿತು.

ಆದರೆ ಕೆಲವೊಮ್ಮೆ ಬಂಡಾಯ ಕಾವ್ಯ ಹೋರಾಟ, ಘೋಷಣೆಗಳ ಅಬ್ಬರದಲ್ಲಿ ಕಾವ್ಯಾಂಶ ಕಳೆದುಕೊಂಡು ವಾಚಾಳಿಯಾದಂತೆ ಭಾಸವಾಗುತ್ತದೆ. ಕಾವ್ಯದ ಅನುಭವಗಳ ತುರ್ತು ಸಾಂದರ್ಭಿಕ

ಅನ್ನಿಸಿ, ಸಂದರ್ಭ ಮುಗಿದು ಹೋದ ಮೇಲೆ ಕಾವ್ಯ ತನ್ನ ಪರಿಣಾಮವನ್ನು ಕಳೆದುಕೊಂಡುಬಿಡುವ ಆತಂಕ ಈ ಕವಿತೆಗಳನ್ನು ಕಾಡತೊಡಗಿತು. 'ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ' ಇತ್ಯಾದಿ ಘೋಷಣೆಗಳ ಮೂಲಕ ಸಾಮಾನ್ಯ ಜನತೆಯನ್ನು ಸಮೀಪಿಸಲು ಯತ್ನಿಸುವ ಮೂಲಕ, ಈ ಪರಂಪರೆಯಲ್ಲಿ ಹುಟ್ಟಿಕೊಂಡ ಹಲವಾರು ಹೋರಾಟದ ಹಾಡುಗಳು ವ್ಯಾಪಕ ಪ್ರಚಾರ ಗಿಟ್ಟಿಸಿಕೊಂಡಿವೆ. ಇಂಥ ಕವಿತೆಗಳು ವ್ಯಂಗ್ಯ-ವಿಡಂಬನೆಗಳಲ್ಲಿ ಹೊಸದಾಗಿದ್ದು ಆಡುಮಾತಿನ ಲಯವನ್ನು ಕಾಪಾಡಿಕೊಂಡು ಬಂದಿವೆ. ಬಂಡಾಯ ಕಾವ್ಯದ ಜೊತೆ-ಜೊತೆಗೆ ಹುಟ್ಟಿಕೊಂಡ ದಲಿತ ಕಾವ್ಯ ಆ ಬದುಕಿನ ಕ್ರೂರ ಸತ್ಯಗಳನ್ನು ಯಥಾವತ್ತಾಗಿ ಚಿತ್ರಿಸುವ ಮೂಲಕ ಅಕ್ಷರ ಲೋಕದಲ್ಲಿ ಹೊಸ ಅಲೆ ಎಬ್ಬಿಸಿದ್ದು ಸತ್ಯ.

ಈ ನಡುವೆ ಭಿನ್ನ ವಿಚಾರಧಾರೆಗಾಗಿ ಹಾತೊರೆವ ಗುಂಪು, ಇಂಗ್ಲಿಷ್ ಕಾವ್ಯ ಪ್ರಭಾವದಿಂದ ಮುಕ್ತವಾಗಿ, ನೀಗ್ರೋ, ಆಫ್ರಿಕನ್, ರಶಿಯನ್ ಕವಿತೆಗಳತ್ತ ಗಮನ ಹರಿಸಿ, ಆ ತೆರನಾದ ಕವಿತೆಗಳನ್ನು ಕಟ್ಟಿಕೊಡುವ ಪ್ರಯತ್ನವೂ ನಡೆದಿದೆ. ಶರಣರ ಬೆಡಗಿನ ವಚನಗಳು, ಮೌಖಿಕ ಕಾವ್ಯ ಪರಂಪರೆ, ಸೂಫಿ-ಸಂತರ ಕವಿತೆಗಳ ಅಧ್ಯಯನ ನಡೆಸಿ ಪರಂಪರೆಯನ್ನು ಸ್ವೀಕರಿಸುತ್ತ, ಹೊಸ ಹಾದಿಗಾಗಿ ತುಡಿಯುತ್ತ ಪಾರಲೌಕಿಕ ಸತ್ಯಗಳನ್ನು ಕಾವ್ಯದಲ್ಲಿ ಮೂಡಿಸುವ ಹಂಬಲದಿಂದ ಬರೆಯುತ್ತಿರುವ ಎಚ್.ಎಸ್. ಶಿವಪ್ರಕಾಶ್‌ರಂಥವರೂ ಇದ್ದಾರೆ.

ಈ ಎಲ್ಲ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುತ್ತಿರುವ, ಹುಟ್ಟಿಕೊಳ್ಳಬೇಕಾದ ಹೊಸ ಕನ್ನಡ ಕಾವ್ಯ ಓದುಗ ಹಾಗೂ ಕಾವ್ಯದ ನಡುವೆ ಸೃಷ್ಟಿಯಾಗಿರುವ ಅಂತರವನ್ನು ಕಡಿಮೆ ಮಾಡಬೇಕಾದ ಬಹು ಮಹತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧಗೊಳ್ಳಬೇಕಿದೆ. ಕನ್ನಡ ಕಾವ್ಯ ಹೊಸದಿಕ್ಕು ಈ ನಿಟ್ಟಿನಲ್ಲಿ ಒಂದು ಸಣ್ಣ ವಿವೇಚನೆ.

ವರ್ತಮಾನ ಕಾವ್ಯ ಜಗತ್ತಿನ ಜರೂರಿಯೆಂದರೆ ಜನರ ಪ್ರೀತಿ ಮತ್ತು ವಿಶ್ವಾಸವನ್ನು ಗಳಿಸಬಲ್ಲ ಕಾವ್ಯ. ವರ್ತಮಾನವನ್ನು ಎಚ್ಚರದಿಂದ ನೋಡುವ ಕಾವ್ಯ. ಒಂದು ಅಖಂಡ ಮಾನವೀಯ ದೃಷ್ಟಿ ಕಾವ್ಯದ ಧೋರಣೆಯಾಗಬೇಕಿದೆ. ಸಮಕಾಲೀನ ಸಮುದಾಯದ ತಲ್ಲಣಗಳಿಗೆ ಕವಿಯ ಆಂತರಿಕ ತಲ್ಲಣಗಳು ಸ್ಪಂದಿಸಬೇಕು. ಅಂಥ ಕಾವ್ಯ ಖಂಡಿತ ಸಾಮಾನ್ಯ ಓದುಗನನ್ನು ತಲುಪುತ್ತದೆ. ಹೊಸ ಪೀಳಿಗೆಯ ಕವಿಗಳಲ್ಲಿ ಅಪಾರ ಮಾನವೀಯ ಕಳಕಳಿಯಿಂದ ಬರೆಯುವವರ ಸಂಖ್ಯೆಗೇನು ಕೊರತೆಯಿಲ್ಲ. ಕಾಲದ ಒತ್ತಡಗಳು ಕಾವ್ಯಕ್ಕೆ ರೂಪ ಕೊಡಬೇಕು. ಕೈಗೆ ಸಿಗದ ವರ್ತಮಾನವನ್ನು ಹಿಡಿದಿಡುವುದೇ ಕಾವ್ಯದ ಉದ್ಯೋಗವಾಗಬೇಕು. ನವೋದಯ, ನವ್ಯ, ನವ್ಯೋತ್ತರ ಸಂದರ್ಭಗಳಲ್ಲಿ ಸೃಷ್ಟಿಯಾಗುತ್ತ ಬಂದ ಕಾವ್ಯವನ್ನು ಕಂಡು, ಕಾವ್ಯಧೋರಣೆ, ದೃಷ್ಟಿ, ಬದಲಾದಂತೆ, ತಮ್ಮ ಕಾವ್ಯಮಾರ್ಗವನ್ನು ಬದಲಿಸಿಕೊಳ್ಳುತ್ತ ಬಂದಿರುವ ಹಿರಿಯ ಕವಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪ ಹಾಗೂ ಚೆನ್ನವೀರ ಕಣವಿಯವರ ಕವಿತೆಗಳನ್ನು ಗಮನಿಸಿದಾಗ 'ಆಯಾ ಕಾಲಕ್ಕೆ ತಕ್ಕಂತೆ ಕಾವ್ಯ ತನ್ನ ದಿಕ್ಕನ್ನು ತಾನೇ ಕಂಡುಕೊಳ್ಳುತ್ತದೆ' ಎಂಬ ಮಾತೂ ಸತ್ಯವೆನ್ನಿಸುತ್ತದೆ.

ಕಾವ್ಯದ ಹೊಸ ಅಪೇಕ್ಷೆಗಳೇನು ಎಂಬುದು ಎಲ್ಲಿಯೂ ಸ್ಪಷ್ಟರೂಪ ಪಡೆಯುತ್ತಿಲ್ಲ. ಕನ್ನಡ ಕಾವ್ಯ ಸ್ಥಿತ್ಯಂತರಗೊಳ್ಳುತ್ತಿರುವ ಈ ಸಂಧಿಕಾಲದಲ್ಲಿ, ನವೋದಯ ಪ್ರಗತಿಶೀಲ, ನವ್ಯ, ಬಂಡಾಯ

ಪರಂಪರೆಗಳ ಅಸ್ಪಷ್ಟ ಹೊದಿಕೆಯಲ್ಲಿ ಹುಟ್ಟಿಕೊಳ್ಳುತ್ತಿರುವ ಯುವ ಪೀಳಿಗೆಯ ಕವಿಗಳ ಕಾವ್ಯ ನಿಶ್ಚಿತವಾಗಿಯೂ ಹೊಸದೊಂದು ನೆಲೆಯನ್ನು ಹುಡುಕಿಕೊಳ್ಳಬೇಕಿದೆ. ಭಾಷೆಯ ಹೊಸ ಹೊಸ ಸಾಧ್ಯತೆಗಳನ್ನು ಮೈಗೂಡಿಸಿಕೊಳ್ಳುವುದರ ಮೂಲಕ ಹೊಸ ಕಾವ್ಯ ರೂಪುಗೊಳ್ಳಬೇಕಿದೆ.

ಭಾಷೆಯ ಕುರಿತಾದ ಎಚ್ಚರ ಯುವ ಕವಿಗಳ ಮಹತ್ವದ ಜವಾಬ್ದಾರಿಯಾಗಿದೆ. ಭಾಷೆಯ ಕೃತಕತೆ ಅಥವಾ ಅಸಹಜತೆ ಕಾವ್ಯವನ್ನು ಅಂದಗೆಡಿಸುವುದಲ್ಲದೇ ಕೆಲವೊಮ್ಮೆ ಕಾವ್ಯದ ಆಶಯಕ್ಕೆ ಧಕ್ಕೆ ತರುವ ಸಾಧ್ಯತೆಗಳೂ ಇರುತ್ತವೆ. ಸಮಕಾಲೀನ ಹಿರಿಯ ಕವಿಗಳ ಧಾಟಿಯನ್ನು ಅನುಸರಿಸಿ ಬರೆಯುವ ಆತಂಕದಿಂದಲೂ ನಾವು ಹೊರಬರಬೇಕಿದೆ. ಧ್ಯಾನ, ಅಧ್ಯಯನ, ಮನನ, ವ್ಯವಧಾನಗಳು ಪ್ರತಿಭೆಗೆ ಹೊಸ ಶಕ್ತಿ ನೀಡಬಲ್ಲವು.

ಮುಕ್ತ ಛಂದದ ಮಾದರಿಯನ್ನೇ ಅನುಸರಿಸುತ್ತ ಬರೆಯುತ್ತಿರುವ ನಾವುಗಳು ಭಾಷೆಯ ಲಯದ ಬಗ್ಗೆ ಸಾಕಷ್ಟು ಎಚ್ಚರ ವಹಿಸಬೇಕಿದೆ. ಆಡುವ ಮಾತಿಗೂ ಒಂದು ಲಯವಿದೆ. ಹೀಗಾಗಿ ಸಂಕೇತ, ಪ್ರತಿಮೆ, ರೂಪಕಗಳು ಕಾವ್ಯವನ್ನು ವ್ಯಾಪಿಸಿಕೊಂಡಿದ್ದರೂ ಅದು ಲಯವನ್ನು ಕಳೆದುಕೊಳ್ಳದ ಹಾಗೆ ಬರೆಯುವುದು ಕವಿಯ ಜವಾಬ್ದಾರಿ. ಹೊಸ ಪ್ರತಿಮೆಗಳು ಕಾವ್ಯಕ್ಕೆ ಜೀವ ತುಂಬಬೇಕು. ಭಾಷೆಯ ಪ್ರಾಮಾಣಿಕ ಸಾಂಗತ್ಯ ಇಂಥ ಸಾಧ್ಯತೆಗಳನ್ನು ಆಗುಮಾಡಬಲ್ಲದು.

'ಪ್ರಾಮಾಣಿಕತೆ' ಹೊಸಬರ ಕಾವ್ಯದ ಮುಖ್ಯ ಅಂಶವಾಗಬೇಕಿದೆ. ತೀರ ಕೃತಕವಾದ ಜಗತ್ತಿನಲ್ಲಿ ಯಾಂತ್ರಿಕವಾಗಿ ಬದುಕುತ್ತಿರುವ ಜಡಜೀವಗಳಲ್ಲಿ ಹೊಸ ಚೇತನ ಮೂಡಬೇಕಾದರೆ ಕಾವ್ಯ 'ಪ್ರಾಮಾಣಿಕ'ವಾಗಿರಬೇಕು. ತುಂಬ ಹಿಂದೆಯೇ ಇ.ಪಿ. ರೈಸ್ ಎಂಬ ವಿಮರ್ಶಕ ಕನ್ನಡ ಕಾವ್ಯದ ಕುರಿತು ಹೇಳಿದ ಮಾತೊಂದು ನೆನಪಿಗೆ ಬರುತ್ತಿದೆ: 'ಮನುಷ್ಯನಿಗೆ ಯಾವಾಗಲೂ ಪ್ರಿಯವಾಗುವ ವಿಷಯಗಳ ಬಗ್ಗೆ ಕನ್ನಡ ಕವಿಗಳಲ್ಲಿ ಸ್ವತಂತ್ರವಾದ ಮತ್ತು ಅಮರವಾದ ವಿಚಾರವಿಲ್ಲ... ಜೀವನವೆಂದರೆ ಒಂದು ಮುಗಿಯದ ಜನ್ಮಯಾತ್ರೆ, ನಿರ್ವಾಣದ ಶೋಧನೆ ಎಂದು ತಿಳಿದ ಕಾರಣ ಆಸೆಯನ್ನು ಹುಟ್ಟಿಸುವ ಹಿರಿಯ ಸಾಹಸಕ್ಕೆ ಸ್ಫೂರ್ತಿಯನ್ನು ಕೊಡುವ ಸಾಹಿತ್ಯವು ಅವರಿಂದ ನಿರ್ಮಾಣವಾಗಿಲ್ಲ. ಈ ಮಾತಿನ ಸತ್ಯಾಸತ್ಯತೆಯ ಬಗ್ಗೆ ಹಲವಾರು ಆಕ್ಷೇಪಣೆಗಳು ಹುಟ್ಟಿಕೊಂಡಿವೆ. ಆದಿಕವಿ ಪಂಪನಿಂದ ಹಿಡಿದು, ಹೊಸಗನ್ನಡ ಕಾವ್ಯ ಪರಂಪರೆಗಳವರೆಗೆ ಕನ್ನಡ ಸಾಹಿತ್ಯ ಬೆಳೆದುಬಂದ ದಾರಿಯನ್ನು ಗಮನಿಸಿದರೆ, ಸಾಕಷ್ಟು ವೈವಿಧ್ಯತೆ, ಜೀವನಪ್ರೀತಿ, ಸವಾಲಾಗಬಲ್ಲ ವಿಷಯಗಳ ಚರ್ಚೆ, ಸಾಹಸ ಇತ್ಯಾದಿ ಬದುಕಿನ ಎಲ್ಲ ಮುಖಗಳನ್ನು ಪರಿಚಯಿಸುವ ಕಾವ್ಯ ಕನ್ನಡದಲ್ಲಿ ಹುಟ್ಟಿಕೊಂಡಿದೆ. ಆದರೂ ರೈಸ್‌ನ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ಅಭಿವ್ಯಕ್ತಿಗೆ ಸವಾಲಾಗಿರುವ ವಿಷಯ ವಸ್ತುಗಳನ್ನಾಯ್ದುಕೊಂಡು ಪ್ರಾಮಾಣಿಕ ಕಾವ್ಯ ರಚನೆಯತ್ತ ಯುವ ಪೀಳಿಗೆ ಲಕ್ಷ್ಯವಹಿಸಬೇಕಿದೆ. ನಮ್ಮೊಳಗಿನ ದುರ್ಬಲತೆಗಳನ್ನು ಕಂಡುಕೊಳ್ಳುತ್ತ, ಅವುಗಳ ಮೇಲೆ ಜಯ ಸಾಧಿಸುತ್ತ, ವ್ಯವಸ್ಥೆಯನ್ನು ಶೋಧಿಸುತ್ತ ಕಾವ್ಯದ ಮೂಲಕ ಹೊಸ ಹೋರಾಟಕ್ಕೆ ನಾವು ಸಿದ್ಧಗೊಳ್ಳಬೇಕಿದೆ.


(೨೦೦೪, ಮೇ ತಿಂಗಳ 'ಹೊಸತು' ಪತ್ರಿಕೆಯ ಲೇಖನದ ಸಾರಾಂಶ)

ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಬರವಣಿಗೆ

- ಡಾ. ಯು.ಬಿ. ಪವನಜ

ಕುಮಾರವ್ಯಾಸ ತನ್ನ ಭಾರತ ಕಥಾಮಂಜರಿಯಲ್ಲಿ ತನ್ನ ಬಗ್ಗೆ ಹೇಳಿಕೊಳ್ಳುತ್ತಾನೆ ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ ಎಂದು. ಇತ್ತೀಚೆಗೆ ಗಣಕಗಳು (ಕಂಪ್ಯೂಟರ್) ಜನಜೀವನದಲ್ಲಿ ಹಾಸುಹೊಕ್ಕಾಗಿ ವ್ಯಾಪಿಸುತ್ತಿವೆ. ಮುಂದಿನ ಪೀಳಿಗೆಯ ಜನರು ಪೆನ್ನು ಪೆನ್ಸಿಲ್ ಉಪಯೋಗಿಸದೆ ಗಣಕಗಳ ಕೀಲಿಮಣೆಯನ್ನು (ಕೀಬೋರ್ಡ್) ಕುಟ್ಟಿಯೇ ಕಲಿಯುತ್ತಾರೆ. ಅವರನ್ನು ಆಧುನಿಕ ಕುಮಾರವ್ಯಾಸರು ಎನ್ನಲು ಅಡ್ಡಿಯಿಲ್ಲ. ಸ್ವಲ್ಪ ಮುಂದುವರೆದು "ಕೀಲಿಮಣೆಯ ಕುಟ್ಟಿಯೇ ಕಲಿತೆನೆಂಬೊಂದಗ್ಗಳಿಕೆ" ಎಂದು ಹೇಳಿದರೂ ಹೇಳಿಯಾರು!

ಗಣಕಗಳು ಜನಜೀವನದಲ್ಲಿ ಹಾಸುಹೊಕ್ಕಾಗಿ ವ್ಯಾಪಿಸುತ್ತಿದ್ದಂತೆ ನಮ್ಮ ಕನ್ನಡ ಭಾಷೆಯನ್ನೂ ಅದರಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಇದರ ಜೊತೆಜೊತೆಗೆ ಕನ್ನಡ ಭಾಷೆಯಲ್ಲಿ ಮಾಹಿತಿ ತಂತ್ರಜ್ಞಾನದ ಬಗೆಗಿನ ಸಾಹಿತ್ಯ ಸೃಷ್ಟಿಯಾಗಬೇಕಾಗಿದೆ. ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಸಾಹಿತ್ಯ ಇಲ್ಲವೇ ಇಲ್ಲವೆಂದಲ್ಲ. ಆದರೆ ಈಗಿರುವುದು ಏನೇನೂ ಸಾಲದು. ಭೀಮನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿದೆ. ಕೆಲವು ಪುಸ್ತಕಗಳು, ಒಂದೆರಡು ಪತ್ರಿಕೆಗಳು, ಪತ್ರಿಕೆಗಳಲ್ಲಿ ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುವ ಲೇಖನಗಳು - ಇಷ್ಟು ಮಾತ್ರ ಲೆಕ್ಕಕ್ಕೆ ಸಿಗುತ್ತವೆ. ಮಾಹಿತಿ ತಂತ್ರಜ್ಞಾನದಲ್ಲಿ ಕನ್ನಡ ಭಾಷೆ ಬೆಳೆಯಬೇಕಾದರೆ ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಸಾಹಿತ್ಯ ನಿರ್ಮಾಣ ದೊಡ್ಡ ಮಟ್ಟದಲ್ಲಿ ಆಗಬೇಕಾಗಿದೆ.



ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನ ಸಾಹಿತ್ಯ ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಬಹುಮಟ್ಟಿಗೆ ಸಾಮ್ಯವಾಗಿದೆ. ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಸುಮಾರು ೯೦ ವರ್ಷಗಳ ಇತಿಹಾಸವಿದೆ. ವಿಜ್ಞಾನವನ್ನು (ಮಾತೃಭಾಷೆಯಲ್ಲಿ) ಜನಪ್ರಿಯಗೊಳಿಸಿದ್ದಕ್ಕೆ ರಾಷ್ಟ್ರಮಟ್ಟದ ಪ್ರಶಸ್ತಿ ಕನ್ನಡಕ್ಕೆ ಏಳು ಸಲ ದೊರಕಿದೆ. ಜ್ಞಾನಪೀಠ ಪ್ರಶಸ್ತಿಯಲ್ಲಿ ಹೇಗೋ ಹಾಗೆಯೇ ಇಲ್ಲೂ ನಾವು ರಾಷ್ಟ್ರಕ್ಕೆ ಪ್ರಥಮ ಸ್ಥಾನದಲ್ಲಿದ್ದೇವೆ. ಹೀಗಿದ್ದೂ ನಮ್ಮ ಸಾಹಿತಿಗಳು ಮತ್ತು

ಸಾಹಿತ್ಯ ಪರಿಷತ್ತು ವಿಜ್ಞಾನ ಸಾಹಿತ್ಯವನ್ನು ಸಾಹಿತ್ಯವೆಂದು ಪರಿಗಣಿಸುತ್ತಿಲ್ಲ. ಅದು ಬೇರೆ ವಿಷಯ. ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ಅನ್ವಯವಾಗುವ ಸೂತ್ರಗಳು ಜನಪ್ರಿಯ ಮಾಹಿತಿ ತಂತ್ರಜ್ಞಾನ ಸಾಹಿತ್ಯಕ್ಕೂ ಅನ್ವಯವಾಗುತ್ತವೆ. ಮಾಹಿತಿ ತಂತ್ರಜ್ಞಾನವು ವಿಜ್ಞಾನದ ಒಂದು ವಿಭಾಗವಾಗಿರುವುದು ಇದಕ್ಕೆ ಕಾರಣ. ಸರಳವಾದ ವಾಕ್ಯಗಳು, ಸೂಕ್ತ ಪಾರಿಭಾಷಿಕ ಪದಗಳ ಬಳಕೆ, ಆಕರ್ಷಕ ಭಾಷೆ, ನಮ್ಮ ಸಂಸ್ಕೃತಿಗೆ ಅನುಗುಣವಾದ ಉದಾಹರಣೆಗಳು, ಇತ್ಯಾದಿಗಳೆಲ್ಲವೂ ಜನಪ್ರಿಯ ವಿಜ್ಞಾನ ಸಾಹಿತ್ಯದಲ್ಲಿ ಅಡಕವಾಗಿರಬೇಕು. ಇದು ಮಾಹಿತಿ ತಂತ್ರಜ್ಞಾನ ಬರವಣಿಗೆಗೂ ಅನ್ವಯಿಸುತ್ತದೆ.

ಲೇಖನ ಬರೆಯುವಾಗ ಬಹುಮುಖ್ಯವಾಗಿ ಎದುರಾಗುವುದು ಪಾರಿಭಾಷಿಕ ಪದಗಳ ಸಮಸ್ಯೆ. ಇಂಗ್ಲೀಷ್ ಭಾಷೆಯಲ್ಲಿ ರಚಿತವಾಗಿರುವ ವಿಜ್ಞಾನ ಸಾಹಿತ್ಯಕ್ಕೂ ಈಗ ಬರುತ್ತಿರುವ ಮಾಹಿತಿ ತಂತ್ರಜ್ಞಾನ ಸಾಹಿತ್ಯಕ್ಕೂ ಒಂದು ಪ್ರಮುಖ ವ್ಯತ್ಯಾಸವಿದೆ. ಅದು ತಾಂತ್ರಿಕ ಪದಗಳಿಗೆ ಸಂಬಂಧಪಟ್ಟದ್ದು. ೧೮-೧೯ನೆಯ ಶತಮಾನಗಳಲ್ಲಿ ಯುರೋಪ್ ಮತ್ತು ೨೦ನೆಯ ಶತಮಾನದಲ್ಲಿ ಯುರೋಪ್ ಮತ್ತು ಅಮೇರಿಕಗಳಲ್ಲಿ ವಿಜ್ಞಾನವು ವಿಪುಲವಾಗಿ ಬೆಳೆಯಿತು. ಆಗ ವಿಜ್ಞಾನಿಗಳು ಹಲವು ಹೊಸ ಹೊಸ ಪದಗಳ ಸೃಷ್ಟಿ ಮಾಡಿದರು. ಆಗಿನ ವಿಜ್ಞಾನಿಗಳು ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಪರಿಣತರಾಗಿದ್ದರು. ಹೊಸ ಪದಗಳ ಸೃಷ್ಟಿ ಮಾಡುವಾಗ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಿಂದ ಮೂಲವನ್ನು ಎರವಲಾಗಿ ತೆಗೆದುಕೊಂಡು ಹೊಸ ಪದಗಳ ಸೃಷ್ಟಿ ಮಾಡಿದರು. ಟೆಲಿಫೋನ್, ಟೆಲಿವಿಶನ್, ಕ್ಯಾಲ್ಕುಲಸ್, ಕ್ಯಾಲ್ಕುಲೇಟರ್, ಫೋಟೋಸಿಂಥೆಸಿಸ್, ಫ್ಲೋರೆಸೆನ್ಸ್, ಇತ್ಯಾದಿ. ಕ್ಯಾಲ್ಕುಲಸ್ ಮತ್ತು ಕ್ಯಾಲ್ಕುಲೇಟರ್‌ಗಳನ್ನೇ ಗಮನಿಸೋಣ. ಇವೆರಡಕ್ಕೂ ಮೂಲ ಲ್ಯಾಟಿನ್ ಭಾಷೆಯ ಕ್ಯಾಲ್ಕ್ಸ್ ಎಂಬ ಪದ. ಈ ಪದದ ಅರ್ಥ ಸುಣ್ಣದ ಸಣ್ಣ ಸಣ್ಣ ಕಲ್ಲುಗಳು ಎಂದು. ಹಿಂದಿನ ಕಾಲದಲ್ಲಿ ಕಲ್ಲುಗಳ ಮೂಲಕ ಲೆಕ್ಕ ಹಾಕುತ್ತಿದ್ದರು. ಇದನ್ನೇ ಮೂಲವಾಗಿಟ್ಟುಕೊಂಡು ಕ್ಯಾಲ್ಕುಲೇಟ್ ಮತ್ತು ಕ್ಯಾಲ್ಕುಲೇಟರ್ ಪದಗಳ ಸೃಷ್ಟಿಯಾಯಿತು. ಕನ್ನಡ ಭಾಷೆಯಲ್ಲಿ ಪಾರಿಭಾಷಿಕ ಪದಗಳ ಸೃಷ್ಟಿ ಮಾಡುವಾಗ ಇದೇ ಸೂತ್ರವನ್ನು ಇಟ್ಟುಕೊಂಡು ಸಂಸ್ಕೃತದಿಂದ ಎರವಲು ಪಡೆಯಲಾಯಿತು. ಉದಾಹರಣೆಗೆ ಫೋಟೋಸಿಂಥೆಸಿಸ್‌ಗೆ ದ್ಯುತಿ ಸಂಶ್ಲೇಷಣೆ.

ಇಂದಿನ ಮಾಹಿತಿ ತಂತ್ರಜ್ಞಾನ ಯುಗದ ವಿಜ್ಞಾನಿ ಮತ್ತು ತಂತ್ರಜ್ಞರು ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಲ್ಲಿ ಪರಿಣತರಲ್ಲ. ಅವರಿಗೆ ಗೊತ್ತಿರುವುದು ಇಂಗ್ಲೀಷ್ ಮಾತ್ರ. ಅವರು ಇಂಗ್ಲೀಷ್ ಭಾಷೆಯಿಂದಲೇ ಪದಗಳನ್ನು ಹೆಕ್ಕಿಕೊಂಡು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅವುಗಳನ್ನು ಬೇರೆಯೇ ಅರ್ಥದಲ್ಲಿ ಬಳಸುತ್ತಿದ್ದಾರೆ. ಮಾಹಿತಿ ತಂತ್ರಜ್ಞಾನದ ಬಗ್ಗೆ ಸ್ವಲ್ಪವೂ ಗೊತ್ತಿಲ್ಲದ ಇಂಗ್ಲೀಷ್ ಭಾಷಿಗರಿಗೇ ಈ ಪದಗಳು ವಿಚಿತ್ರವಾಗಿ ಕಂಡುಬರುತ್ತವೆ. ಉದಾಹರಣೆಗೆ ಮೌಸ್, ಬಗ್, ವರ್ಮ್, ಥ್ರೆಡ್, ಸ್ಲೋಪ್, ಇತ್ಯಾದಿ. ಇವುಗಳನ್ನು ಶಬ್ದಶಃ ಕನ್ನಡಕ್ಕೆ ಅನುವಾದ ಮಾಡಿದರೆ ಅದಕ್ಕಿಂತ ಆಭಾಸ ಇನ್ನಿಲ್ಲ.

ಮಾಹಿತಿ ತಂತ್ರಜ್ಞಾನದ ಬಗ್ಗೆ ಕನ್ನಡದಲ್ಲಿ ಬರೆಯುವವರಿಗೆ ಆ ವಿಷಯದಲ್ಲಿ ಪರಿಣತಿ ಇರುವುದು ಅತೀ ಅಗತ್ಯ. ಇದಕ್ಕೆ ಕಾರಣ ಈಗಾಗಲೇ ವಿವರಿಸಿದಂತೆ ಪದಗಳ ಅನುವಾದದಲ್ಲಿ ಆಗಬಹುದಾದ ಆಭಾಸಗಳು. ಪದಗಳ ಅನುವಾದ ಮಾಡುವಾಗ ಭಾವಾನುವಾದ ಮಾಡಬೇಕು. ಶಬ್ದಾನುವಾದ ಮಾಡಬಾರದು. ಸುಮಾರು ೮ ವರ್ಷಗಳ ಹಿಂದೆ ಕನ್ನಡದ ವಾರಪತ್ರಿಕೆಯೊಂದು ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಪದಗಳಿಗೆ ಕನ್ನಡದಲ್ಲಿ ಸೂಕ್ತ ಪದಗಳಿಲ್ಲ ಎಂದು ಘೋಷಿಸಿ ಅಂತಹ ಪದಗಳ ಸೃಷ್ಟಿಗೆ ಒಂದು ಸ್ಪರ್ಧೆಯನ್ನು ಏರ್ಪಡಿಸಿತ್ತು. ಬಹುಶಃ ಅದರ ಸಂಪಾದಕರು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿದ ಕನ್ನಡ ವಿಶ್ವಕೋಶ ಮತ್ತು ಎರಡು ದಶಕಗಳ ಹಿಂದೆಯೇ ಪ್ರಕಟವಾದ ದಿವಂಗತ ಡಾ. ನಳಿನಿ ಮೂರ್ತಿಯವರ "ಗಣಕಯಂತ್ರ" ಪುಸ್ತಕಗಳನ್ನು ಓದಿರಲಿಲ್ಲವೆಂದು ಕಾಣುತ್ತದೆ. ಅವುಗಳನ್ನು

ಓದಿದ್ದರೆ ಈ ಸ್ಪರ್ಧೆಯ ಅಗತ್ಯವೇ ಇರಲಿಲ್ಲ. ಇರಲಿ, ಆ ಪತ್ರಿಕೆಯವರು ಕೊನೆಗೆ ಸಾಫ್ಟ್‌ವೇರ್ ಪದಕ್ಕೆ ಲಘುವರ ಮತ್ತು ಹಾರ್ಡ್‌ವೇರ್ ಪದಕ್ಕೆ ಗುರುವರ ಎಂದು ಪಾರಿಭಾಷಿಕ ಪದಗಳನ್ನು ಸೂಚಿಸಿದವರಿಗೆ ಬಹುಮಾನ ಕೊಟ್ಟರು. ಇದು ಶುದ್ಧ ತರಲೆ ಅನುವಾದ. ಸಾಫ್ಟ್ ಮತ್ತು ವೇರ್ ಪದಗಳನ್ನು ಪ್ರತ್ಯೇಕವಾಗಿ ಅನುವಾದ ಮಾಡಿದ್ದಾರೆ. ಇದೇ ರೀತಿ ಶಬ್ದಾನುವಾದ ಮಾಡಿದರೆ "Microsoft Windows is hanging" ಎಂಬುದು "ಸೂಕ್ಷ್ಮಮೃದು ಕಿಟಿಕಿ ನೇಣು ಹಾಕಿಕೊಂಡಿದೆ" ಎಂದಾಗುತ್ತದೆ.

ಈಗ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಪದಗಳನ್ನು ಗಮನಿಸೋಣ. ಹಾರ್ಡ್‌ವೇರ್ ಎಂದರೆ ಗಣಕದಲ್ಲಿ ಕಣ್ಣಿಗೆ ಕಾಣಸಿಗುವ ಯಂತ್ರ ಭಾಗಗಳು. ಮದರ್‌ಬೋರ್ಡ್, ಹಾರ್ಡ್‌ಡಿಸ್ಕ್, ಕೀಲಿಮಣೆ, ಇತ್ಯಾದಿ. ಇದನ್ನು ಕನ್ನಡದಲ್ಲಿ ಯಂತ್ರಾಂಶ ಎಂದು ಕರೆಯಬಹುದು. ಸಾಫ್ಟ್‌ವೇರ್ ಎಂದರೆ ಗಣಕ ಕೆಲಸ ಮಾಡಲು ಬೇಕಾಗುವ ಯಂತ್ರಭಾಗವಲ್ಲದ ಕಣ್ಣಿಗೆ ಕಾಣದ ಕಾರ್ಯಾಚರಣ ವ್ಯವಸ್ಥೆ (operating system), ಕ್ರಮವಿಧಿ (program), ಇತ್ಯಾದಿ. ಕನ್ನಡದಲ್ಲಿ ತಂತ್ರಾಂಶ. ಯಂತ್ರಾಂಶವನ್ನು ಒಂದು ಸಂಗೀತ ಉಪಕರಣಕ್ಕೆ (ಉದಾ: ವೀಣೆ) ಹೋಲಿಸಿದರೆ, ಆ ಉಪಕರಣದಲ್ಲಿ ಬಾರಿಸುವ ರಾಗ ತಾಳ ಬದ್ಧವಾದ ಸಂಗೀತವು ತಂತ್ರಾಂಶ ಆಗಿರುತ್ತದೆ. ಈ ಪ್ರಬಂಧದಲ್ಲಿ ನಾನು ಈಗಾಗಲೇ ಕೆಲವು ಇಂಗ್ಲೀಷ್ ಪದಗಳನ್ನು ಹಾಗೆಯೇ ಬಳಸಿರುವುದನ್ನು ನೀವು ಗಮನಿಸಿರಬಹುದು.

ಕೆಲವೊಮ್ಮೆ ಇಂಗ್ಲೀಷ್ ಭಾಷೆಯ ಪದಗಳನ್ನು ಹಾಗೆಯೇ ಬಳಸುವುದು ಹೆಚ್ಚು ಸೂಕ್ತ. ಉದಾ: ಮೌಸ್, ವೈರಸ್, ಮೋಡೆಮ್, ಇತ್ಯಾದಿ. ನಾವು ಕಾರು, ಬಸ್ಸು, ಪೆನ್ನು, ಪೆನ್ಸಿಲ್, ಇತ್ಯಾದಿಗಳನ್ನು ಬಳಸುತ್ತಿಲ್ಲವೆ, ಹಾಗೆ. ಕೆಲವು ಪದಗಳು ಅಂಕಿತನಾಮಗಳಾಗಿರುತ್ತವೆ. ಕೆಲವು ಕಂಪೆನಿಗಳು ರೂಪಿಸಿಕೊಂಡ ಹೆಸರುಗಳೂ ಇರುತ್ತವೆ. ಇವುಗಳನ್ನು ಅನುವಾದಿಸುವಂತಿಲ್ಲ. ಉದಾ: ಫ್ಲ್ಯಾಷ್, ರಿಯಲ್ ಆಡಿಯೋ, ಬ್ಲ್ಯೂಟೂತ್, ಪಾಸ್ಕಲ್, ಜಾವಾ, ಇತ್ಯಾದಿ. ಅನುವಾದ ಮಾಡಲಾರದ ಇನ್ನೂ ಒಂದು ಗುಂಪಿನ ಪದಗಳಿವೆ. ಅವು ಉದ್ದ ಹೆಸರಿನ ಸಂಕ್ಷಿಪ್ತ ರೂಪ. ಇವುಗಳಲ್ಲಿ ಎರಡು ಬಗೆಯವಿವೆ. ಇವನ್ನು ಇಂಗ್ಲೀಷಿನಲ್ಲಿ abbreviation ಮತ್ತು acronym ಎಂದು ವಿಭಾಜಿಸಿದ್ದಾರೆ. ಅಬ್ರಿವಿಯೇಶನ್ ಎಂದರೆ ಉದ್ದ ಹೆಸರಿನ ಪ್ರತಿಯೊಂದು ಪದದ ಮೊದಲಿನ ಅಕ್ಷರಗಳ ಜೋಡಣೆ. ಉದಾ: COBOL (Common Business Oriented Language), BASIC (Beginners All-purpose Symbolic Instruction Code), DOS (Disk Operating System), SOAP (Simple Object Access Protocol). ಅಕ್ರೋನಿಮ್‌ಗೆ ಉದಾಹರಣೆಗಳು: FORTRAN (Formula Translation), ARPANET (Advanced Research Projects Agency Network), BIT (Binary Digit).

ಇಂಗ್ಲೀಷ್ ಭಾಷೆಯ ಪದಗಳನ್ನು ಹಾಗೆಯೇ ಬಳಸಬೇಕೇ ಅಥವಾ ಕೆಲವು ಪದಗಳನ್ನು ಮಾತ್ರ ಅನುವಾದಿಸಬೇಕೆ ಎಂಬುದು ಚರ್ಚೆಗೆ ಉತ್ತಮ ವಿಷಯ. ಗಣಕ ಎಂಬ ಪದಕ್ಕೇ ವಿರೋಧಿಗಳಿದ್ದಾರೆ. ಕಂಪ್ಯೂಟರ್ ಎಂದು ಬಳಸುವುದೇ ಸೂಕ್ತ, ಕನ್ನಡ ಭಾಷೆ ಬೆಳೆಯಲಿ ಎಂದು ಈ ಗುಂಪಿನವರ ವಾದ. ಕೆಲವು ಪಾರಿಭಾಷಿಕ ಪದಗಳನ್ನು ಉಪಯೋಗಿಸಿದರೆ ಯಾರಿಗೂ ಅರ್ಥವಾಗುವುದಿಲ್ಲ ಎಂಬ ಹೇಳಿಕೆಯೂ ಇದೆ. ಉದಾಹರಣೆಗೆ ಫ್ಲಾಪಿ ಡಿಸ್ಕ್‌ಗೆ ನಮ್ಯ ಮುದ್ರಿಕೆ ಎಂದು ಬಳಸಿದರೆ ಖಂಡಿತ ಬಹಳಷ್ಟು ಮಂದಿಗೆ ಅರ್ಥವಾಗಲಾರದು. ಬಳಸುವ ಶಬ್ದಗಳನ್ನು ಓದುವವರು ಯಾರು ಎಂಬುದರ ಮೇಲೆ ಈ ಶಬ್ದಗಳನ್ನು ಬಳಸಬೇಕೆ ಬೇಡವೇ ಎಂಬುದು ಅವಲಂಬಿಸಿದೆ. ಮಾಹಿತಿ ತಂತ್ರಜ್ಞಾನದ ಬಗ್ಗೆ ಏನೇನೂ ತಿಳಿಯದವರಿಗೆ ಕನ್ನಡದಲ್ಲಿ ನೀಡುವ ಪದವೂ ಹೊಸತೇ, ಇಂಗ್ಲೀಷಿನ ಪದವೂ ಹೊಸತೇ. ಇಂಗ್ಲೀಷಿನ ಪದವನ್ನು ಬಳಸಿದರೆ ಅದನ್ನು ಓದುವ ಓದುಗರು ಸದ್ಯಕ್ಕೆ ಕನ್ನಡದಲ್ಲೇ ಓದುವರಾದರೂ ಮುಂದಕ್ಕೆ ಇಂಗ್ಲಿಷ್

ಭಾಷೆಯಲ್ಲಿ ಓದುವವರಾದರೆ ಅವರಿಗೆ ಸುಲಭವಾಗುವುದು ಎನ್ನುವ ಒಂದು ವಾದವೂ ಇದೆ. ಇದರಲ್ಲಿ ಹುರುಳಿಲ್ಲದಿಲ್ಲ. ಯಾಕೆಂದರೆ ನಾವು ಹೆಚ್ಚೆಂದರೆ ಹತ್ತನೇ ತರಗತಿ ತನಕ ಮಾತ್ರ ಕನ್ನಡವನ್ನು ಬಳಸುವವರು. ಹಾಗೆಂದು ಹೇಳಿ ಸಂಪೂರ್ಣ ಇಂಗ್ಲೀಷ್‌ಮಯ ಪದಗಳಿಂದ ತುಂಬಿದ್ದರೆ ಆ ಲೇಖನವನ್ನು ಕನ್ನಡ ಲೇಖನ ಎಂದು ಕರೆಯುವುದು ಹೇಗೆ? ಉದಾಹರಣೆಗೆ ಮೂಲ ಇಂಗ್ಲೀಷಿನ ವಾಕ್ಯವೊಂದನ್ನು ಗಮನಿಸೋಣ - "Press the Enter Key on the Keyboard". ಇದನ್ನು ಕನ್ನಡದಲ್ಲಿ "ಕೀಲಿಮಣೆಯಲ್ಲಿರುವ ಎಂಟರ್ ಕೀಲಿಯನ್ನು ಒತ್ತಿ" ಅಥವಾ "ಕೀಬೋರ್ಡ್‌ನಲ್ಲಿರುವ ಎಂಟರ್ ಕೀಯನ್ನು ಒತ್ತಿ" ಎಂದು ಅನುವಾದಿಸಬಹುದು. ನನ್ನ ಪ್ರಕಾರ ಮೊದಲನೆಯ ವಾಕ್ಯವೇ ಹೆಚ್ಚು ಸೂಕ್ತ. ಯಾಕೆಂದರೆ ಎರಡನೆ ವಾಕ್ಯದಲ್ಲಿ "ಒತ್ತಿ" ಎಂಬುದು ಮಾತ್ರ ಕನ್ನಡ ಪದ.

ನಾವು ದಿನನಿತ್ಯ ಮಾತನಾಡುವಾಗ ಹಲವು ಪದಗಳನ್ನು ಬಳಸುತ್ತೇವೆ. ಅವುಗಳಲ್ಲಿ ಬಹಳಷ್ಟನ್ನು ನಾವು ಪುಸ್ತಕಗಳಲ್ಲಿ, ಲೇಖನಗಳಲ್ಲಿ, ಭಾಷಣಗಳಲ್ಲಿ ಬಳಸುವುದಿಲ್ಲ. ಅದೇ ರೀತಿ ಲೇಖನದಲ್ಲಿ ಬಳಸುವ ಬಹಳಷ್ಟು ಪದಗಳನ್ನು ದಿನನಿತ್ಯದ ವ್ಯವಹಾರಗಳಲ್ಲಿ ಬಳಸುವುದಿಲ್ಲ. ಉದಾಹರಣೆಗೆ ಲೇಖನಿ ಎಂಬ ಪದ. ಇದನ್ನು ಲೇಖನದಲ್ಲಿ ಬಳಸಿದಷ್ಟು ಮಾತಿನಲ್ಲಿ ಬಳಸುವುದಿಲ್ಲ. ಇದೇ ಸಿದ್ಧಾಂತವನ್ನು ಗಣಕ ಪಾರಿಭಾಷಿಕ ಪದಗಳಿಗೆ ಉಪಯೋಗಿಸೋಣ. ನಿಮ್ಮ ಸ್ನೇಹಿತನ ಜೊತೆ ಮಾತನಾಡುವಾಗ "ನನ್ನ ಕೀಬೋರ್ಡ್ ಹಾಳಾಗಿದೆ" ಎಂದೇ ಹೇಳಿ. ಆದರೆ ಲೇಖನದಲ್ಲಿ "ನನ್ನ ಕೀಲಿಮಣೆ ಹಾಳಾಗಿದೆ" ಎಂದಿರಲಿ.

ಕನ್ನಡದ ಪದಗಳನ್ನು ಹೊಸದಾಗಿ ಸೃಷ್ಟಿ ಮಾಡಿದರೆ ಅವು ಎಷ್ಟರ ಮಟ್ಟಿಗೆ ಉಳಿಯುತ್ತವೆ ಎಂಬುದನ್ನು ಜನರೇ ನಿರ್ಧರಿಸುತ್ತಾರೆ. ಇಂಜಿನಿಯರ್ ಪದಕ್ಕೆ ಅಭಿಯಂತರ ಮತ್ತು ಪೋಲೀಸ್ ಸ್ಟೇಶನ್‌ಗೆ ಆರಕ್ಷಕ ಠಾಣೆ ಎಂದು ಸೃಷ್ಟಿ ಮಾಡಿದ ಪದಗಳನ್ನು ಜನರು ಸ್ವೀಕರಿಸಲಿಲ್ಲ. ಆದರೆ ಪೋಸ್ಟ್ ಆಫೀಸ್‌ಗೆ ಅಂಚೆ ಕಚೇರಿ, ರೇಡಿಯೋಗೆ ಆಕಾಶವಾಣಿ ಎಂದು ಸೃಷ್ಟಿ ಮಾಡಿದ ಪದಗಳು ಉಳಿದುಕೊಂಡವು. ಅಂಚೆ ಕಚೇರಿ ಪದ ಒಂದು ಉತ್ತಮ ಕನ್ನಡ ಪದವನ್ನು ಸೃಷ್ಟಿ ಮಾಡುವುದು ಹೇಗೆ ಎಂಬುದಕ್ಕೆ ಉದಾಹರಣೆ. ಇದು ಪೋಸ್ಟ್ ಆಫೀಸ್‌ನ ಶಬ್ದಾನುವಾದವಲ್ಲ. ಅಂಚೆ ಎನ್ನುವುದು ಸಂಸ್ಕೃತದ ಹಂಸ ಪದದ ಕನ್ನಡ ರೂಪ. ಮಹಾಭಾರತದಲ್ಲಿ ಬರುವ ನಳದಮಯಂತಿ ಕಥೆಯಲ್ಲಿ ನಳ ಮಹಾರಾಜ ದಮಯಂತಿಗೆ ಹಂಸ ಪಕ್ಷಿಯ ಮೂಲಕ ಸಂದೇಶ ಕಳುಹಿಸುತ್ತಾನೆ. ಅಂಚೆ ಕಚೇರಿ ಪದದ ಮೂಲ ಇಲ್ಲಿದೆ. ಒಂದು ಪದವನ್ನು ಭಾರತೀಕರಣ ಮತ್ತು ಕನ್ನಡೀಕರಣ ಮಾಡುವುದು ಹೇಗೆಂಬುದಕ್ಕೆ ಅಂಚೆ ಕಚೇರಿ ಉತ್ತಮ ಉದಾಹರಣೆ.

ಯಾವುದೇ ವಿಷಯದ ಬಗ್ಗೆ ಬರೆಯಬೇಕಾದರೆ ಆ ವಿಷಯದ ಬಗ್ಗೆ ಜ್ಞಾನ ಇರುವುದು ಅತೀ ಅಗತ್ಯ. ಮಾಹಿತಿ ತಂತ್ರಜ್ಞಾನದ ಬಗೆಗಂತು ಇದು ಇನ್ನೂ ಹೆಚ್ಚು ಪ್ರಸ್ತುತ. ಯಾವುದಾದರೊಂದು ಪುಸ್ತಕ, ಅಂತರಜಾಲ ತಾಣದಲ್ಲಿ (ಇಂಟರ್‌ನೆಟ್) ಪ್ರಕಟವಾದ ಲೇಖನವನ್ನು ಓದಿ ಅನುವಾದ ಮಾಡಿ ಬರೆಯ ಹೊರಟರೆ ಕೆಲವೊಮ್ಮೆ ತಪ್ಪುಗಳು ನುಸುಳುತ್ತವೆ. ಇದು ವೇದ್ಯವಾಗುವುದು ಇಂಗ್ಲೀಷ್ ಬಾಷೆಯ ಪದಗಳನ್ನು ಕನ್ನಡೀಕರಿಸುವಲ್ಲಿ. ಅಂತರಜಾಲದಲ್ಲಿ ಹಲವು ಮಂದಿ ಸೇರಿ ಯಾವುದಾದರೊಂದು ವಿಷಯದ ಬಗ್ಗೆ ಚರ್ಚಿಸುವ ಸೌಕರ್ಯವಿದೆ. ಇವಕ್ಕೆ ಇಂಗ್ಲೀಷಿನಲ್ಲಿ Newsgroup ಎನ್ನುತ್ತಾರೆ. ಇಲ್ಲಿ ಇಂಗ್ಲೀಷಿನ ಹೆಸರೇ ಇದು ಏನು ಎಂಬುದನ್ನು ಅಸಂದಿಗ್ಧವಾಗಿ ಸೂಚಿಸುವಲ್ಲಿ ಸೋಲುತ್ತದೆ. ಇದನ್ನು ಕನ್ನಡದಲ್ಲಿ ಬರೆಯುವಾಗ "ಸುದ್ದಿಗುಂಪು" ಎಂದು ಬರೆಯಬಹುದು ಅನ್ನಿಸುವುದು ಸಹಜ. ಆದರೆ ಇದರ ಹೆಸರು ಮೂಲ ಇಂಗ್ಲೀಷಿನಲ್ಲೇ ಸರಿ ಇಲ್ಲದಿರುವುದರಿಂದ ಇದಕ್ಕೆ ಕನ್ನಡದಲ್ಲಿ "ವಿಚಾರಜಾಲ" ಎಂದು ಕರೆಯುವುದು ಹೆಚ್ಚು ಸೂಕ್ತ. ಮಾರುಕಟ್ಟೆಯಲ್ಲಿ ಸಿಗುವ ಇಂಗ್ಲೀಷ್ ಭಾಷೆಯ ಗಣಕ ಪದಕೋಶವನ್ನು ಕೊಂಡುಕೊಂಡು ಅದರಲ್ಲಿ ಕೊಟ್ಟಿರುವ ಪದಗಳನ್ನು ಶಬ್ದಶಃ ಕನ್ನಡೀಕರಿಸುವುದು ತಪ್ಪು. ವಿಷಯಜ್ಞಾನ

ಅತೀ ಅಗತ್ಯ. ಇದು ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದ ವಿಚಿತ್ರ ಸಮಸ್ಯೆ. ವಿಜ್ಞಾನ ವಿಷಯವನ್ನು ಪುಸ್ತಕಗಳಲ್ಲಿ ಓದಿ ಕನ್ನಡೀಕರಿಸುವಾಗ ಇಷ್ಟು ತೊಂದರೆಗಳಿರಲಿಲ್ಲ.

ಪದಗಳ ಸೃಷ್ಟಿ ಮಾಡುವಾಗ ಅಥವಾ ಅನುವಾದ ಮಾಡುವಾಗ ಮೂಲ ಇಂಗ್ಲೀಷಿನ ಪದವನ್ನು ಯಾವ ಸಂದರ್ಭದಲ್ಲಿ ಮತ್ತು ಯಾವ ವಿಷಯವನ್ನು ತಿಳಿಸಲು ಬಳಸಿದ್ದಾರೆ ಎಂದು ತಿಳಿದುಕೊಂಡಿರುವುದು ಮುಖ್ಯ. ಉದಾಹರಣೆಗೆ ಇಂಗ್ಲೀಷ್ ಭಾಷೆಯ Script ಪದವನ್ನು ಹಲವು ಅರ್ಥದಲ್ಲಿ ಬಳಸಬಹುದು. ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆಯೇ ಇದನ್ನು ಬೇರೆ ಬೇರೆ ಅರ್ಥಗಳಲ್ಲಿ ಬಳಸಿದ್ದಾರೆ. ಯುನಿಕೋಡ್ ಸಂದರ್ಭದಲ್ಲಿ ಸ್ಕ್ರಿಪ್ಟ್ ಲಿಪಿಯನ್ನು ಸೂಚಿಸುತ್ತದೆ. ದೇವನಾಗರಿ ಲಿಪಿ (ಸ್ಕ್ರಿಪ್ಟ್). ಸಂಸ್ಕೃತ, ಹಿಂದಿ, ಮರಾಠಿ, ನೇಪಾಳಿ, ಕೊಂಕಣಿ - ಇವು ದೇವನಾಗರಿ ಲಿಪಿಯನ್ನು ಬಳಸುವ ಭಾಷೆಗಳು (ಲ್ಯಾಂಗ್ವೇಜ್). ಕೆಲವು ತಂತ್ರಾಂಶ ಮತ್ತು ಕಾರ್ಯಾಚರಣ ವ್ಯವಸ್ಥೆಗಳಲ್ಲಿ ಕೆಲವೊಂದು ಆದೇಶಗಳನ್ನು (Instructions) ಒಟ್ಟಿಗೆ ಒಂದು ಕಡತ (file) ರೂಪದಲ್ಲಿ ಕೊಡುವುದನ್ನೂ ಗಣಕ ಪರಿಭಾಷೆಯಲ್ಲಿ ಸ್ಕ್ರಿಪ್ಟ್ ಎಂದು ಕರೆಯುತ್ತಾರೆ. ಇಲ್ಲಿ ಸ್ಕ್ರಿಪ್ಟ್‌ನ ಕನ್ನಡ ರೂಪ ಕ್ರಮವಿಧಿ ಎಂದೆನಿಸಿಕೊಳ್ಳುತ್ತದೆ. ಈಗ ಲ್ಯಾಂಗ್ವೇಜ್ ಶಬ್ದವನ್ನು ಗಮನಿಸೋಣ. ಇಂಗ್ಲೀಷ್, ಕನ್ನಡ ಇತ್ಯಾದಿಗಳನ್ನು ಲ್ಯಾಂಗ್ವೇಜ್ ಎಂದು ಕರೆಯುತ್ತಾರೆ. ಜೊತೆಗೆ ಬೇಸಿಕ್, ಸಿ, ಜಾವಾ, ಕೋಬೋಲ್, ಇತ್ಯಾದಿ ಗಣಕ ಕ್ರಮವಿಧಿ ರಚನೆಯ ಭಾಷೆಗಳನ್ನೂ ಲ್ಯಾಂಗ್ವೇಜ್ ಎಂದೇ ಕರೆಯುತ್ತಾರೆ. ಸರಿಯಾದ ರೀತಿಯಲ್ಲಿ ಬರೆಯುವವರಾದರೆ ಪ್ರೋಗ್ರಾಮ್ಮಿಂಗ್ ಲ್ಯಾಂಗ್ವೇಜ್ ಎಂದು ಬರೆಯುತ್ತಾರೆ. ಕೆಲವರು ಚುಟುಕಾಗಿ BASIC Language ಎಂದು ಬರೆದಿದ್ದಾರೆ ಎಂದಿಟ್ಟುಕೊಳ್ಳೋಣ. ಇದನ್ನು ಕನ್ನಡದಲ್ಲಿ "ಮೂಲಭೂತ ಭಾಷೆ" ಎಂದು ಅನುವಾದಿಸಿ ಬರೆದರೆ ಅದಕ್ಕಿಂತ ಅಭಾಸ ಇನ್ನೊಂದಿಲ್ಲ. ಸಂದರ್ಭ ಗೊತ್ತಿಲ್ಲದೆ ಅನುವಾದ ಮಾಡಹೊರಡುವುದು ಉಚಿತವಲ್ಲ. ಈ ಉದಾಹರಣೆಯನ್ನು ಗಮನಿಸಿ: ಕನ್ನಡ ಗಣಕ ಪರಿಷತ್ತಿನವರು ತಯಾರಿಸಿರುವ, ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಪ್ರಕಟಿಸಿರುವ "ಕನ್ನಡ ಗಣಕ ಪದವಿವರಣಕೋಶ"ದಲ್ಲಿ Active Server Pages ಎನ್ನುವುದನ್ನು "ಅಂತರಜಾಲದ ಪುಟದಲ್ಲಿ ಪೂರೈಕೆದಾರ ಸಂಬಂಧಿ ಕ್ರಮವಿಧಿ ರಚನೆಯನ್ನು ಅಳವಡಿಸಲು ಮೈಕ್ರೋಸಾಫ್ಟ್ ಅಭಿವೃದ್ಧಿ ಪಡಿಸಿದ ಒಂದು ಮಾನಕ ತಂತ್ರಾಂಶ" ಎಂದು ವಿವರಿಸಲಾಗಿದೆ. ಸೂಕ್ಷ್ಮವಾಗಿ ಗಮನಿಸಿದಾಗ ಇಲ್ಲೊಂದು ತಪ್ಪು ನುಸುಳಿದೆ. ಮಾನಕ ಎಂದರೆ standard. ಮೈಕ್ರೋಸಾಫ್ಟ್ ಕಂಪೆನಿಯವರ ಕಾಪಿರೈಟ್ ಆಗಿರುವ ಒಂದು ಕ್ರಮವಿಧಿ ರಚನೆಯ ಭಾಷೆ ಮಾನಕವಾಗಲು ಸಾಧ್ಯವಿಲ್ಲ.

ತಪ್ಪಾಗಿ ಅನುವಾದ ಮಾಡುವುದು ಅಥವಾ ತಪ್ಪು ಪದದ ಸೃಷ್ಟಿ ಮಾಡಿ ಬಳಸುವುದಕ್ಕಿಂತ ಮೂಲ ಇಂಗ್ಲೀಷ್ ಪದವನ್ನೇ ಬಳಸುವುದು ಉತ್ತಮ ಎಂದು ಕೆಲವು ಸಲ ಅನ್ನಿಸಬಹುದು.

ಮಾಹಿತಿ ತಂತ್ರಜ್ಞಾನದ ವಿಷಯಜ್ಞಾನ ಎಲ್ಲಿ ಸಿಗುತ್ತದೆ ಎಂಬ ಪ್ರಶ್ನೆ ಮೂಡುವುದು ಸಹಜ. ಉತ್ತಮ ಪುಸ್ತಕಗಳಲ್ಲಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಮಾಹಿತಿಯ ಅತಿದೊಡ್ಡ ಭಂಡಾರವೇ ಆಗಿರುವ ಅಂತರಜಾಲದಲ್ಲಿ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬಳಸುವ ಇಂಗ್ಲೀಷ್ ಪದಗಳ ವಿವರಣೆ ಬೇಕಿದ್ದಲ್ಲಿ www.webopaedia.com ಮತ್ತು whatis.techtarget.com ತಾಣಗಳನ್ನು ನೋಡಬಹುದು. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳ ಬಗೆಗೆ ತಿಳಿಯಲು www.internetnews.com ತಾಣಕ್ಕೆ ಭೇಟಿ ನೀಡಬಹುದು.

ಪದಗಳ ಬಗ್ಗೆ ಇಷ್ಟೊಂದು ಹೇಳುವುದೇಕೆ ಎಂದು ಕೇಳಬಹುದು. ಪದಗಳಿಲ್ಲದೆ ವಾಕ್ಯವಿಲ್ಲ. ವಾಕ್ಯವಿಲ್ಲದೆ ಲೇಖನವಿಲ್ಲ. ಒಂದು ಪಾರಿಭಾಷಿಕ ಪದವನ್ನು ಲೇಖನದಲ್ಲಿ ಮೊಟ್ಟ ಮೊದಲು ಬಳಸುವಾಗ

ಅದರ ಇಂಗ್ಲೀಷಿನ ಮೂಲ ರೂಪವನ್ನು ಕಂಸಗಳಲ್ಲಿ ಕೊಟ್ಟು ಅನಂತರ ಎಲ್ಲ ಕಡೆ ಕನ್ನಡದ ಪದವನ್ನು ಬಳಸುವುದು ಹೆಚ್ಚಿನ ಲೇಖಕರ ವಿಧಾನ. ಇದು ಸರಿಯಾದ ಕ್ರಮ. ಪದಗಳ ಆಯ್ಕೆಯ ನಂತರ ಭಾಷೆ. ಭಾಷೆ ಸರಳವಾಗಿರಬೇಕು. ಪದಗಳು ಮತ್ತು ವಾಕ್ಯಗಳು ಅಸಂದಿಗ್ಧವಾಗಿರತಕ್ಕದ್ದು. ಲೇಖನದಲ್ಲಿ ಬಳಸುವ ಉದಾಹರಣೆಗಳು ಭಾರತೀಯವಾಗಿರಲಿ. ಕೇವಲ ಭಾರತೀಯವಾಗಿದ್ದರೆ ಸಾಲದು. ಕನ್ನಡದ ಜಾಯಮಾನಕ್ಕೆ ಒಗ್ಗುವ ಉದಾಹರಣೆಗಳಾಗಿದ್ದರೆ ಇನ್ನೂ ಚೆನ್ನ. ವಿಷಯದ ಮಂಡನೆ ಒಂದು ಕ್ರಮಬದ್ಧವಾದ ರೀತಿಯಲ್ಲಿ ಸಾಗಬೇಕು. ಮೊದಲು ಹೇಳಬೇಕಾದುದನ್ನು ಮತ್ತೆ ಹೇಳುವುದು, ಮತ್ತೆ ಹೇಳಬೇಕಾದುದನ್ನು ಮೊದಲು ಹೇಳುವುದು ಸಲ್ಲದು.

ಅಕ್ಷರಾಭ್ಯಾಸವಿಲ್ಲದವನು ಅವಿದ್ಯಾವಂತ ಎಂದೆನಿಸಿಕೊಳ್ಳುತ್ತಿದ್ದ ಕಾಲ ಮುಗಿಯಿತು. ಈಗ ಗಣಕ ಗೊತ್ತಿಲ್ಲದವನು ಅವಿದ್ಯಾವಂತ ಎಂದು ಕರೆಯಿಸಿಕೊಳ್ಳುವ ಕಾಲ ಬಂದಿದೆ. ಮಾಹಿತಿ ತಂತ್ರಜ್ಞಾನದ ನೆಪದಲ್ಲಿ ಕನ್ನಡವನ್ನು ಮೂಲೆಗುಂಪು ಮಾಡಿ ಇಂಗ್ಲೀಷನ್ನು ಹಿಂದಿನ ಬಾಗಿಲಿನಿಂದ ಒಳತರಬಾರದು. ಮಾಹಿತಿ ತಂತ್ರಜ್ಞಾನದಲ್ಲಿ ಕನ್ನಡದ ಅಳವಡಿಕೆಯ ಜೊತೆಜೊತೆಗೇ ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನದ ಬಗ್ಗೆ ಸಾಹಿತ್ಯ ಸೃಷ್ಟಿ ದೊಡ್ಡ ಮಟ್ಟದಲ್ಲಿ ಆಗಬೇಕು. ಹಾಗೆ ಮಾಡದಿದ್ದಲ್ಲಿ ಇನ್ನು ಹತ್ತು ವರ್ಷಗಳಲ್ಲಿ ನಮ್ಮ ಕಸ್ತೂರಿ ಕನ್ನಡ ಕೇವಲ ಹಳ್ಳಿಗಳಲ್ಲಿ ಆಡುಭಾಷೆಯಾಗಿ ಉಳಿಯುವ ಸಾಧ್ಯತೆಗಳಿವೆ. ಇದನ್ನು ತಪ್ಪಿಸಲು ಎಲ್ಲರೂ ಕೈಜೋಡಿಸೋಣ. ಅಲ್ಲ, ಕೀಲಿಮಣೆ ಕುಟ್ಟೋಣ. ಗೋಪಾಲಕೃಷ್ಣ ಅಡಿಗರ ಕವನದ ಸಾಲನ್ನು ತಿರುಚಿ "ಕುಟ್ಟುವೆವು ನಾವು ಕೀಲಿಮಣೆಯೊಂದನು" ಎನ್ನೋಣ.

[ಹಾವೇರಿ ಜಿಲ್ಲೆಯ ಹೊಸರಿತ್ತಿಯಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಮೇ ೨೦೦೧ರಲ್ಲಿ ಆಯೋಜಿಸಿದ್ದ ವಿಜ್ಞಾನ ಲೇಖಕರ ಶಿಬಿರದಲ್ಲಿ ಇದೇ ವಿಷಯದ ಬಗ್ಗೆ ಭಾಷಣ ಮಾಡಲಾಗಿತ್ತು. ಈ ಲೇಖನ ಅದರ ವಿಸ್ತೃತ ರೂಪ]


ಕೆಲವು ಗಣಕ ಪಾರಿಭಾಷಿಕ ಪದಗಳು

English	ಕನ್ನಡ	English	ಕನ್ನಡ
Animation	ಚಿತ್ರ ಸಂಚಲನೆ	Internet	ಅಂತರಜಾಲ
Application - Software	ಅನ್ವಯ ತಂತ್ರಾಂಶ	Intranet	ಆಂತರಿಕ ಜಾಲ
		Keyboard	ಕೀಲಿಮಣೆ
CPU (Central Processing Unit)	ಕೇಂದ್ರ ಸಂಸ್ಕಾರಕ	Operating System	ಕಾರ್ಯಾಚರಣ-ವ್ಯವಸ್ಥೆ
Database	ದತ್ತಸಂಚಯ	Printer	ಮುದ್ರಕ
Edutainment	ಕಲಿಕಾರಂಜನೆ	Program	ಕ್ರಮವಿಧಿ
E-mail	ವಿ-ಅಂಚೆ, ವಿ-ಪತ್ರ, ವಿದ್ಯುದೋಲೆ	Software	ತಂತ್ರಾಂಶ
File	ಕಡತ	URL (Uniform Resource Locator)	ತಾಣಸೂಚಿ
Freeware	ಉಚಿತ ತಂತ್ರಾಂಶ	Web-site	ಅಂತರಜಾಲ ತಾಣ
Free Software (Opensource software)	ಮುಕ್ತ ತಂತ್ರಾಂಶ	World wide web	ವಿಶ್ವವ್ಯಾಪಿ ಜಾಲ
Hardware	ಯಂತ್ರಾಂಶ		

ಭಾರತೀಯ ಸಮಾಜದ ಸಾಮಾಜಿಕ ಆರ್ಥಿಕ ಸ್ಥಿತ್ಯಂತರಗಳು: ಕಾರಂತರ ದೃಷ್ಟಿಕೋನ

- ಬಿದರಹಳ್ಳಿ ನರಸಿಂಹಮೂರ್ತಿ

ಈ ಮೇಲಿನ ಶೀರ್ಷಿಕೆ ಆಧುನಿಕ ಚಿಂತನಾಕ್ರಮವನ್ನು ಎತ್ತಿ ಹಿಡಿಯುತ್ತದೆ. ಅಂದರೆ ಒಂದು ದೇಶ ಮತ್ತು ಕಾಲದ ಒಟ್ಟು ಅನುಭವವನ್ನು ಜ್ಞಾನಶಾಖೆಗಳ ಹೆಸರಿನಲ್ಲಿ ವಿಭಾಗಿಸಿ ಬಿಡಿಯಾಗಿ ನೋಡುವ ಪ್ರಯತ್ನ ಮಾಡುತ್ತದೆ. ಆದರೆ ಕಾರಂತರು, ಕುವೆಂಪು, ಟಾಲ್‌ಸ್ಟಾಯ್, ದಾಸ್ತೋವ್‌ಸ್ಕಿಯರ ಹಾಗೆ, ಬದುಕಿನ ಅನುಭವಗಳನ್ನು ಇಡಿಯಾದ ಜ್ಞಾನಮಂಡಲವನ್ನು ಒಂದು ಬಗೆಯ ಸಮಗ್ರ ದೃಷ್ಟಿಕೋನಕ್ಕೆ ಒಗ್ಗಿಸಿಕೊಂಡಂಥವರು. ಅವರುಗಳು ಯಾವತ್ತೂ ಇದು ಆರ್ಥಿಕ, ಇದು ಸಾಮಾಜಿಕ. ಇದು ರಾಜಕೀಯ, ಇದು ಧಾರ್ಮಿಕ ಎಂಬುದಾಗಿ ಅನುಭವಗಳನ್ನು ವಿಭಾಗಿಸಿ ನೋಡಿದವರಲ್ಲ. ಹಾಗಾಗಿಯೆ ಅವರುಗಳಿಗೆ, ನಮಗಿರುವ ಹಾಗೆ, ವಿಚಿತ್ರವಾದ ಆರ್ಥಿಕ, ಸಾಮಾಜಿಕ ಸಿದ್ಧಾಂತಗಳಿರಲಿಲ್ಲ. ಸಕಲವನ್ನೂ ಮಾನವೀಯತೆ ಎಂಬ ಮೂಲ ಮಾನದಂಡದಿಂದ ಅಳೆದು, ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸುವ ಲೇಖಕರಾಗಿದ್ದರು ಅವರೆಲ್ಲ. ಅದಕ್ಕೆಂದೆ ಆಧುನಿಕರು ಅವರುಗಳನ್ನು 'ಕ್ರಿಟಿಕಲ್ ರಿಯಲಿಸ್ಟ್' ಎಂದು ಕರೆದಿರಬಹುದು. ಆಧುನಿಕ ವಿಮರ್ಶೆಗೆ ಪ್ಲೇಸ್ಮೆಂಟ್ ಒಂದು ಮುಖ್ಯವಾದ ಸಮಸ್ಯೆಯಾದ್ದರಿಂದ ಹೀಗೆ ಕರೆದಿರಬಹುದು. ಅದಕ್ಕೆ ಕಾರಂತರಂಥವರು ಯಾವ ರೀತಿಯಲ್ಲೂ ಹೊಣೆಗಾರರಲ್ಲ.



ಇನ್ನು ಈ ಶೀರ್ಷಿಕೆ ಕಾರಂತರ ಕಾದಂಬರಿಗಳಿಗೆ ಮಾತ್ರ ಸೀಮಿತವಾಗಿದೆ ಎನ್ನುವಂತಿಲ್ಲ. ಇದು ಅವರ ಆತ್ಮಚರಿತ್ರೆ, ಜೀವನ ದರ್ಶನವನ್ನು ಒಳಗೊಂಡಂತೆ, ಅವರ ಇಡೀ ಸಾಹಿತ್ಯದಿಂದ ಹಿಡಿ ತೆಗೆಯಬೇಕಾದ ದೃಷ್ಟಿಕೋನವನ್ನು ಬೇಡುತ್ತದೆ. ಅವರ ಸಮಗ್ರ ಸಾಹಿತ್ಯವನ್ನು ತೂಗಿ ನೋಡುವುದು ಒಂದು ಪ್ರಬಂಧದ ಚೌಕಟ್ಟಿನಲ್ಲಿ ಅಸಾಧ್ಯವಾದುದರಿಂದ, ಕೆಲವು ಮುಖ್ಯ ಕಾದಂಬರಿಗಳು ಹಾಗೂ ಅವರ ಆತ್ಮಚರಿತ್ರೆಯಲ್ಲಿ ವ್ಯಕ್ತವಾಗಿರುವ ವಿಚಾರಗಳಿಗೆ ಈ ಪ್ರಬಂಧವನ್ನು ಸೀಮಿತಗೊಳಿಸಿಕೊಂಡಿದ್ದೇನೆ.

ಮತ್ತು ಕಾರಂತರ ಭಾರತೀಯತೆ ಸಮಗ್ರ ಭಾರತದ ಪ್ರಸಕ್ತ ವಿದ್ಯಮಾನಗಳನ್ನು ಕಲೆಹಾಕಿ ಕ್ರೋಢೀಕರಣಗೊಂಡಂಥ ಭಾರತೀಯತೆಯಲ್ಲ. ಅದು ಭಾರತದ ಸ್ವಾತಂತ್ರ್ಯ ಸಮರ, ಗಾಂಧೀಜಿಯ ಮಹಾ ಆದರ್ಶವಾದಿ ಮಾರುತ, ವಿಶ್ವಸಮರ. ಈ ಎಲ್ಲವನ್ನೂ ಅಪ್ಪಟ ದಕ್ಷಿಣ ಕನ್ನಡದ ಪ್ರಾದೇಶಿಕತೆಯಲ್ಲೆ ಸಾಕ್ಷಾತ್ಕರಿಸಿಕೊಂಡು, ಆ ಮೂಲಕ ಭಾರತದ ಪ್ರಾಂತ್ಯಗಳ ಹೋರಾಟದ ಪ್ರಾದೇಶಿಕ ಹಾಗೂ ರಾಷ್ಟ್ರೀಯ ಪ್ರತೀಕವಾಗಲು ನಡೆಸಿದ ಪ್ರಯತ್ನ ಎನ್ನಬಹುದು. ಕಾರಂತರಿಗೆ ದಕ್ಷಿಣ ಕನ್ನಡದ ಕರಾವಳಿಯ ಒಂದು ಪುಟ್ಟ ಭಾರತವಾಗಿತ್ತು ಎಂದರೂ ನಡೆಯುತ್ತದೆ.

ಈ ಪ್ರಬಂಧದ ಚೌಕಟ್ಟಿಗೆ ಇಷ್ಟು ಚಕ್ಕುಬಂದಿ ಹಾಕಿಕೊಂಡು ಮುಂದುವರೆಯುವುದು ಸೂಕ್ತ ಎನಿಸುತ್ತದೆ.

ಆಧುನಿಕ ಭಾರತದ ಸಾಮಾಜಿಕ, ಆರ್ಥಿಕ ಸ್ಥಿತ್ಯಂತರಗಳ ಬಗ್ಗೆ ಕಾರಂತರು ನೀಡಿರುವ ಘೋಷಣಾತ್ಮಕ ಪ್ರತಿಕ್ರಿಯೆಗಳಿಗಿಂತ ಅವರು ಮಾಡಿರುವ ಘಟನಾತ್ಮಕ ವಿಶ್ಲೇಷಣೆಗಳು ಅವರ ದೃಷ್ಟಿಕೋನವನ್ನು ಹೆಚ್ಚು ಸ್ಪಷ್ಟಪಡಿಸುತ್ತವೆ. ಈ ಘಟನಾತ್ಮಕ ವಿಶ್ಲೇಷಣೆಗಳು ಕಾರಂತರ ಬದುಕಿನ ಅನುಭವಗಳಿಂದಲೆ ಹುಟ್ಟೆದ್ದು ರೂಪುತಳೆದಾಗ, ಅವರ ದೃಷ್ಟಿಕೋನದ ಆಳ ಅಗಲ ಇನ್ನಷ್ಟು ಸ್ಫುಟವಾಗಿ ನಮಗೆ ಮನದಟ್ಟಾಗುತ್ತದೆ.

ಬ್ರಿಟಿಷರು ಜಾರಿಗೆ ತಂದ ವಿದ್ಯಾಭ್ಯಾಸ ಪದ್ಧತಿಯಿಂದಾಗಿ ನಮ್ಮ ಸಮಾಜ ಹೆಣ್ಣುಮಕ್ಕಳನ್ನು ಹೊಸಬೆಳಕಿನಲ್ಲಿ ಕಾಣತೊಡಗಿದ್ದು, ಅವರ ವಿದ್ಯಾಭ್ಯಾಸಕ್ಕೆ ನಾಂದಿ ಹಾಡಿದ್ದು ಎಲ್ಲರಿಗು ತಿಳಿದ ಸಂಗತಿ. ಕಾರಂತರು ಕುಂದಾಪುರದಲ್ಲಿದ್ದಾಗ, ಅವರ ಅಪಾರ ಶ್ರದ್ಧೆಯ ಕೇಂದ್ರವಾಗಿದ್ದ ಗಾಂಧೀಜಿಯವರ ಆದರ್ಶದ ಬಗ್ಗೆ ಭ್ರಮನಿರಸನವಾಗುವಂಥ ಸಂಗತಿ ನಡೆಯಿತು. ವೇಶ್ಯಾವೃತ್ತಿ ಕುಲದ ಕೆಲವು ಯುವತಿಯರನ್ನು ಕಂಡು ಮರುಗಿದ ಕಾರಂತರು, ಗಾಂಧೀಜಿಗೆ ಪತ್ರ ಬರೆದರು. "ಅಂಥ ಹುಡುಗಿಯರು ಯಾವ ಜೀವ ಬ್ರಹ್ಮಚರ್ಯೆ ನಡೆಯಿಸಲಿ" ಎಂಬ ಉತ್ತರ ಬಂತು. ಕಾರಂತರಿಗೆ ತೀರ ಬೇಸರವಾಗಿ ಕಣ್ಣೀರು ಬಂತು. "ಮನುಷ್ಯ ಸ್ವಭಾವದ ಪರಿಚಯವೇ ಗಾಂಧೀಜಿಗಿಲ್ಲ! ತಾವು ಮಾಡಿದ್ದು ಎಲ್ಲರಿಂದಲೂ ಆಗುತ್ತದೆ ಎಂದು ತಿಳಿದುಕೊಂಡಿದ್ದಾರೆ" ಎಂದು ಪರಿಭಾವಿಸಿದರು. ತಾವಾದರೂ ಅಂಥ ಒಬ್ಬ ಹುಡುಗಿಯನ್ನು ಲಗ್ನವಾಗಬೇಕು ಎಂದು ನಿರ್ಧರಿಸಿದರು.

ಈ ಅನುಭವ ಇಷ್ಟು ಅಂಶಗಳನ್ನು ಸ್ಪಷ ಪಡಿಸುತ್ತದೆ:

(೧) ಸಾಮಾಜಿಕ ಸಮಸ್ಯೆಗೆ ಉತ್ತರ ಹುಡುಕ ಹೊರಟವರು ತಮ್ಮ ಅನುಭವ ಮತ್ತು ಅನುಭೂತಿಗೆ ವ್ಯತಿರಿಕ್ತವಾದ ಸಿದ್ಧಾಂತ, ಅದೆಷ್ಟೇ ದೊಡ್ಡದಿರಲಿ, ಅದನ್ನು ತ್ಯಜಿಸಲು ತಯಾರಿರಬೇಕು.

(೨) ಆದರ್ಶ ಪಾಲನೆಯ ಛಲ ಹೊತ್ತವರು ಯಾವತ್ತೂ ಬೆರಳೆಣಿಕೆಯ ಅಸಾಮಾನ್ಯರು ಎಲ್ಲ ಸಾಮಾನ್ಯರು ಅವರಂತಾಗುವುದು ಅಸಾಧ್ಯ.

(೩.) ಒಂದು ಸಮಸ್ಯೆಯನ್ನು ಬಿಡಿಸಲು ಹೊರಟ ವ್ಯಕ್ತಿ ಅಗತ್ಯಬಿದ್ದರೆ ವೈಯಕ್ತಿಕ ತ್ಯಾಗಕ್ಕೂ ಸಿದ್ಧನಾಗುವ ಹೊಣೆಗಾರಿಕೆ ಹೊಂದಿರಬೇಕು. ಮತ್ತು

(೪) ಗಂಡಾಳ್ವಿಕೆ ಗಟ್ಟಿಗೊಂಡ ಸಮಾಜದಲ್ಲಿ ಹೆಣ್ಣುಮಕ್ಕಳ ವಿಮೋಚನೆಗೆ ನಾಂದಿ ಹಾಡಲು ಕೆಲವರಾದರೂ ಗಂಡಸರು ಹೆಂಗರುಳಿನಿಂದ ತುಡಿಯಬೇಕು.

ಇಂಥ ಇಂಗಿತಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ತಮ್ಮ ಕೆಲವು ದಾರುಣ ಸ್ತ್ರೀ ಪಾತ್ರಗಳನ್ನೂ, ಅವರ ಬದುಕಿನ ಘಟನಾವಳಿಗಳನ್ನೂ ಚಿತ್ರಿಸಿದ್ದಾರೆ ಕಾರಂತರು. "ಕನ್ಯಾಬಲಿ" (೧೯೨೯) ಕಾದಂಬರಿಯ ಮೂಲಕ ಮೆಚ್ಚಿದವನನ್ನು ಮದುವೆಯಾಗಲಾರದೆ, ಸೂಳೆಯಾಗಿ ಜೀವ ತೇಯ್ದು ಕಡೆಗೊಂದು ದಿನ ಹಡೆದಪ್ಪನನ್ನೆ

ವಿಟಪುರುಷನನ್ನಾಗಿ ಕಾಣುವ ದುರಂತಕ್ಕೆ ತಲುಪುತ್ತಾಳೆ. "ಚೋಮನ ದುಡಿ" (೧೯೩೩)ಯ ಬೆಳ್ಳಿ ತನ್ನ ಕೋಮಲ ಕೌಮಾರ್ಯವನ್ನು ವಸಾಹತುಶಾಹಿ ರಾಕ್ಷಸ ಬಿಂಗೇಲ, ದೇಶೀಯ ದಲ್ಲಾಳಿ ಮನ್ವೇಲರಿಗೆ ಬಲಿಗೊಟ್ಟು, ಕಣ್ಣೆದುರೆ ಅಪ್ಪ ಚೋಮ ಎದೆಯೊಡೆದು ಸಾಯುವುದಕ್ಕೆ ಸಾಕ್ಷಿಯಾಗುತ್ತಾಳೆ. "ಮೈಮನಗಳ ಸುಳಿಯಲ್ಲಿ" (೧೯೭೦)ಯ ಮಂಜುಳೆ ಸಾಕಷ್ಟು ಗಂಡಸರೊಂದಿಗೆ ಸಂಪರ್ಕವಿಟ್ಟುಕೊಂಡು ಸೂಳೆಯಾದರೂ ಲಕ್ಷ್ಮಣತೀರ್ಥನಾಥ ಸಂನ್ಯಾಸಿಯನ್ನು ಸುಳಿಪಡಿಸಿ ಸದ್ಗೃಹಸ್ಥನೆಂಬಂತೆ ಮಾಡಿ, ತಾನು ಸದ್ಗೃಹಿಣಿಯಂತೆ ಕಂಗೊಳಿಸುತ್ತಾಳೆ. "ಸ್ವಪ್ನದ ಹೊಳೆ" (೧೯೬೬)ಯ ಬನ್ನಿ ಎಂಬ ವಿದ್ಯಾರ್ಥಿನಿ ಮೇಸ್ಟರು ಮುದಗಾಂವಕರನ ಮೋಸಕ್ಕೆ ಬಲಿಯಾಗಿ ಗರ್ಭವತಿಯಾಗುತ್ತಾಳೆ. ಆತ್ಮಹತ್ಯೆಗೆ ಪ್ರಯತ್ನಿಸುವ ಅವಳನ್ನು ಇನ್ನೊಬ್ಬ ಹೃದಯವಂತ ಮೇಸ್ಟರು ಕೃಷ್ಣರಾಯ ಮದುವೆಯಾಗುತ್ತಾನೆ. ಹೀಗೆ ಪ್ರಾರಂಭಿಕ ಕಾದಂಬರಿಗಳಲ್ಲಿ ವ್ಯಭಿಚಾರ ವೇಶ್ಯಾವೃತ್ತಿಗಳಿಂದ ದುರಂತಕ್ಕೊಳಗಾಗುವ ಸ್ತ್ರೀಪಾತ್ರಗಳನ್ನು ಚಿತ್ರಿಸಿದ ಕಾರಂತರು ತಮ್ಮ ನಂತರದ ಕಾದಂಬರಿಗಳಲ್ಲಿ ತುಳಿತಕ್ಕೊಳಗಾದ ಹೆಣ್ಣುಮಕ್ಕಳಿಗೆ ಸಾರ್ಥಕ್ಯದ ಆಶಾವಾದಿ ದಿಕ್ಕನ್ನು ತೆರೆದುತೋರುತ್ತಾರೆ. ಇದು ಅವರ ಅನುಕಂಪದ ಕಲಾತ್ಮಕ ವಿಸ್ತರಣೆ ಎನ್ನುವಂತಿದೆ. ಕಾರಂತರ ಈ ಸ್ತ್ರೀ ಪಾತ್ರಗಳು ಯಥಾರ್ಥತೆಯಲ್ಲಿ ಹೊಳೆಯುವುದಕ್ಕೆ ಕಾರಣವೆಂದರೆ. ತಮ್ಮ ಅನುಭವದ ನಿಕಷಕ್ಕೆ ಉಜ್ಜಿ ತೆಗೆದ ಅವರ ಗಟ್ಟಿಯಾದ ಸ್ತ್ರೀಪರ ನಿಲುವು ಎನ್ನಬಹುದು. ಸಾಂಪ್ರದಾಯಿಕ ಸಮಾಜವನ್ನು ಎಚ್ಚರಿಸುವ ಸಲುವಾಗಿ ಅರ್ಥಪೂರ್ಣವಾದ ಸ್ತ್ರೀಪರ ಘಟನಾತ್ಮಕ ವಿಶ್ಲೇಷಣೆಗಳನ್ನು ಕಾರಂತರು ಕಟ್ಟಿಕೊಟ್ಟಿದ್ದಾರೆ.

ಭಾರತೀಯ ಸಮಾಜದ ಅತಿ ದೊಡ್ಡ ಸಾಮಾಜಿಕ ಪಿಡುಗಾದ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಗಾಂಧೀಜಿ ಹೂಡಿಕೊಂಡ ಹರಿಜನೋದ್ಧಾರದ ಆದರ್ಶದಿಂದ ಕಾರಂತರೂ ಪ್ರೇರಿತರಾದರು. ತಮ್ಮ ಸುತ್ತಲ ಹರಿಜನ ಜೀತದಾಳುಗಳ ಸಂಕಷ್ಟಗಳನ್ನು ಕಣ್ಣಾರೆ ಕಣ್ಣಿಟ್ಟು ನೋಡಿದ್ದಲ್ಲದೆ ಅವರ ವಿಷಮ ವಾಸ್ತವವನ್ನು ಆಳವಾಗಿ ಗ್ರಹಿಸಿದರು. ಅದರ ಫಲವಾಗಿ ಹುಟ್ಟಿತು 'ಚೋಮನ ದುಡಿ' ಕಾದಂಬರಿ. ಈ ಕೃತಿ ಒಟ್ಟೊಟ್ಟಿಗೆ ಸಾಮಾಜಿಕ ಹಾಗೂ ಆರ್ಥಿಕ ಆಂದೋಲನವನ್ನು ಕಟ್ಟಿಕೊಡುತ್ತದೆ. ಸ್ವಂತಕ್ಕೆ ಒಂದು ತುಂಡು ಜಮೀನು ಬೇಕೆಂಬುದು ಚೋಮನ ಅದಮ್ಯ ಬಯಕೆ. ಈ ಬಯಕೆಯೆ ಒಂದು ಕ್ರಾಂತಿಬೀಜ. ಹೊಲೆಯನಾದವ ಸ್ವಂತ ಭೂಮಿ ಉಳುವ ಬೇಸಾಯಗಾರನಾಗಬಾರದೆಂಬ ಮೇಲ್ಜಾತಿಯವರ ಕಟ್ಟಳೆ ತಪ್ಪು, ಮೋಸದ್ದು ಎಂಬುದು ಅವನ ನಿಸರ್ಗ ಸಹಜ ಭಾವನೆ. ಆ ಕಟ್ಟಳೆ ಮುರಿದು ಮೆಟ್ಟಿನಿಲ್ಲಬೇಕೆಂಬುದು ಅವನ ಛಲ. ಆ ಮೂಲಕ ತನಗಂಟಿದ ಜಾತಿ ಕಳಂಕದಿಂದ ಮುಕ್ತನಾಗಬೇಕೆಂಬುದು ಅವನ ಮನಸ್ಸಿನ ಹಂಬಲ. ತಾನೂ ಗಳಿಸಬೇಕು, ಉಳಿಸಬೇಕು, ಮಕ್ಕಳ ಮದುವೆ ಮಾಡಬೇಕು ಎಂಬ ಆರ್ಥಿಕ ಯೋಜನೆಗಳೂ ಮೇಲಿನ ಸಾಮಾಜಿಕ ಸಾಂಸ್ಕೃತಿಕ ಬಯಕೆಗಳೊಂದಿಗೆ ತಳುಕು ಹಾಕಿಕೊಂಡಿವೆ. ಆದರೆ ಇದಕ್ಕಾಗಿ ಅವ ಧರ್ಮ ಬಿಟ್ಟು ಪರಧರ್ಮ ಸ್ವೀಕರಿಸಲಾರ. ಧಣಿ ಸಂಕಪ್ಪಯ್ಯನ ವಿರುದ್ಧ ಹೋರಾಡಲಾರ. ಪಂಜುರ್ಲಿಯ ಸುಪ್ತ ಭೀತಿಯನ್ನು ಗೆದ್ದು ನಿಲ್ಲಲಾರ. ಹೆಚ್ಚೆಂದರೆ ಮಕ್ಕಳನ್ನು ಹೆಚ್ಚಿನ ದುಡಿಮೆಗಾಗಿ ಕಾಫಿ ತೋಟಕ್ಕೆ ಕಳಿಸಿಯಾನು. ಅಷ್ಟೆ. ಆದರೆ ಈ ಕಾಫೀ ತೋಟ ಅವನ ಮೂವರು ಮಕ್ಕಳನ್ನು ಮೂರು ಬಗೆಯಲ್ಲಿ ಬಲಿ ತೆಗೆದುಕೊಂಡು ಅವನ ಬದುಕನ್ನೆ ಮೂರಾಬಟ್ಟೆಯಾಗಿಸುತ್ತದೆ. ಚೋಮನ ಕನಸುಗಳಿಗೆ ಕೊಡಲಿಯೇಟು ಕೊಡುವ ಕೇಡಿನ ಸಂಕೇತವಾಗಿ ಬಿಡುತ್ತದೆ ಈ ಕಾಫಿ ತೋಟ. ಚನಿಯನನ್ನು ಮಲೇರಿಯಾ ಜ್ವರ ನುಂಗಿ ಹಾಕುತ್ತದೆ. ಗುರುವ ಕ್ರಿಶ್ಚಿಯಾನಿಟಿಗೆ ಬಿಕರಿಯಾಗುತ್ತಾನೆ. ಬೆಳ್ಳಿ ತನಗೇ ಗೊತ್ತಿಲ್ಲದಂತೆ ವಸಾಹತುಶಾಹಿ ಹಸಿವಿಗೆ ಸಸ್ತಾಸರಕಾಗಿ ಮಾರಾಟವಾಗಿಬಿಡುತ್ತಾಳೆ. ಲಾಭದ ಆಸೆಗೆ ಬಿದ್ದ ಚೋಮ ಸರ್ವನಾಶದ ಅಂಚಿಗೆ ತಲುಪುತ್ತಾನೆ. ಒಂದು ಕಡೆ ಜಾತಿ ಕಳಂಕ ಇನ್ನೊಂದು ಕಡೆ ದುಡಿವ ವರ್ಗದ ದೈನ್ಯಸ್ಥಿತಿ ಅವನ ಬೆನ್ನುಹತ್ತಿ

ಬಾರಿಸುತ್ತವೆ. ಆ ಏಟು ತಾಳಲಾರದೆ ಅವ ಹುಚ್ಚನಂತೆ ತನ್ನ ದುಡಿಮೆಯ ದುಡಿಯನ್ನು ಬಡಿದೇ ಬಡಿಯುತ್ತಾನೆ. ಕೂಲಿಕಾರ ಚೋಮ ವೈದಿಕಶಾಹಿ ಸಂಕಪ್ಪಯ್ಯನಿಂದ, ವಸಾಹತುಶಾಹಿ ಮಿಂಗೇಲನಿಂದ ಸಮಾನವಾಗಿ ಶೋಷಣೆಗೆ ತುತ್ತಾಗಿದ್ದಾನೆ. ಅವೆರಡೂ ದುಷ್ಟಶಕ್ತಿಗಳು ಅವನನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಪ್ಪೆ ಮಾಡುತ್ತವೆ. ಅವೆ ಅವನನ್ನು ಕೊಂದು ಕೂಗುತ್ತವೆ. ಚೋಮನದು ಸಹಜ ಸಾವಲ್ಲ; ಆತ್ಮಹತ್ಯೆಯಲ್ಲ; ಸಾಮಾಜಿಕ ಆರ್ಥಿಕ ಕಗ್ಗೊಲೆ. ಅವನನ್ನ ಹಾಗೆ ಕೊಂದ ವೈದಿಕಶಾಹಿ ಹಾಗೂ ವಸಾಹತುಶಾಹಿ ಶಕ್ತಿಗಳೆ ಚರಿತ್ರೆಯ ನಂತರದ ಅಧ್ಯಾಯದಲ್ಲಿ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳಾಗಿ ಮೆರೆಯುತ್ತಿರುವುದನ್ನು ಪ್ರಸಕ್ತ ವಿದ್ಯಮಾನಗಳಲ್ಲಿ ನಾವು ಕಾಣುತ್ತಿದ್ದೇವೆ.

ಕೈಮುಟ್ಟಿ ದುಡಿಯುವ ಕೃಷಿ ಕೂಲಿಕಾರರಿಗೆ ಭೂಮಿ ದಕ್ಕಬೇಕು. ಭೂಮಿಯು ಮರುಹಂಚಿಕೆಯಾಗಬೇಕು. ಸಮಾನ ಸಣ್ಣ ಹಿಡುವಳಿಗಳಲ್ಲಿ ಭೂಮಿ ಹಂಚಿಹೋಗುವ ಮೂಲಕ ಆರ್ಥಿಕ ಸಮೃದ್ಧಿ ಹಾಗೂ ಸಾಮಾಜಿಕ ಸಮಾನತೆ ನೆಲೆಯೂರಬೇಕು - ಇಂಥ ಇಂಗಿತಗಳು ಹೊರಡುತ್ತವೆ ಈ ಕಾದಂಬರಿಯಿಂದ. ಚೋಮನ ಮನಮುಟ್ಟುವ ದಾರುಣ ದುರಂತದ ಮೂಲಕ ಭಾರತದ ಭೂ ಸುಧಾರಣೆಯ ಮುನ್ಸೂಚನೆ ನೀಡಿದ್ದಾರೆ ಕಾರಂತರು. ಅವರ ಹಲವಾರು ಕಾದಂಬರಿಗಳ ಕೇಂದ್ರ ಪಾತ್ರಗಳು ಮರಮರಳಿ ಸ್ವಂತೂರಿಗೆ, ನಿಸರ್ಗದ ಮಡಿಲಿಗೆ, ಉತ್ತಿಬಿತ್ತು ಬೆಳೆವ ಮಣ್ಣಿಗೆ ಬರುವುದನ್ನು ಕಾಣುತ್ತೇವೆ. "ಮರಳಿ ಮಣ್ಣಿಗೆ" (೧೯೪೧) ಕಾದಂಬರಿಯ ಮೂರನೆ ತಲೆಮಾರಿನ ರಾಮ ಮುಂಬೈನ ಲಾಭತತ್ತ್ವ (Surplus economy)ದ ಬದುಕಿಗೆ, ಅಲ್ಲಿನ ಯಾಂತ್ರಿಕತೆಗೆ ಹೊಂದಿಕೊಳ್ಳಲಾರದೆ ಮರಳಿ ಮಣ್ಣಿಗೆ ಅಂದರೆ ಕೋಡಿಗೆ ವಾಪಸ್ ಬಂದು ತೃಪ್ತಿತತ್ತ್ವ (subsistence economy)ದ ಬದುಕನ್ನು ಕೃಷಿ ಅರ್ಥವಂತಿಕೆಯನ್ನು ಕಟ್ಟಿಕೊಳ್ಳುತ್ತಾನೆ. ತನಗೆಷ್ಟು ಬೇಕು ಎಂಬುದು ವಿನಾಶಕಾರಿ ಭಾವನೆ; ತನಗೆ ಎಷ್ಟು ಸಾಕು ಎಂಬುದು ಸುಂದರ ಭಾವನೆ ಎಂಬುದನ್ನು ಅರಿಯುತ್ತಾನೆ.

ಪ್ರಕೃತಿಯ ಸಂಪನ್ಮೂಲಗಳು ನಿರಂತರ ನಿಧಿಯಲ್ಲ, ಅವೆಲ್ಲ ಬರಿದಾಗಿಬಿಡಬಹುದು ಎಂಬ ಆಧುನಿಕ ಪರಿಸರಾತ್ಮಕ ಸತ್ಯ, ನಮ್ಮ ಔದ್ಯೋಗೀಕರಣದ ಅರ್ಥವ್ಯವಸ್ಥೆಯ ತಳ ಹಾರಿಸಿದೆ. ಬಂಡವಾಳಶಾಹಿ ಈಗ ನಿಧಾನವಾಗಿ ವಿಶ್ವದ ಸಕಲ ಚರಾಚರವಸ್ತುಗಳನ್ನೂ ಮಾರುವ ಕೊಳ್ಳುವ ಸರಕುಗಳನ್ನಾಗಿಸುವ ಹುನ್ನಾರಿನಲ್ಲಿದೆ. ಇಂಡಸ್ಟ್ರಿಯಲೈಸೇಷನ್ ಈಗ ಮುಕ್ತ ಮಾರುಕಟ್ಟೆಗೆ ದಾರಿ ಮಾಡಿಕೊಡುತ್ತಿದೆ. ಇದು ಇಷ್ಟರಲ್ಲೆ ಬರಿ ರೇಟು ಏರಿಸಿ ಇಳಿಸಿ ಎಲ್ಲರ ಜೀವಗಳೊಡನೆ ಚೆಲ್ಲಾಟವಾಡುವ ಜೂಜಾಟವಾಗಲಿದೆ. ಈ ಹಿನ್ನೆಲೆಯಲ್ಲಿ ಕಾರಂತರು ತಮ್ಮ ಕಾದಂಬರಿಗಳಲ್ಲಿ ಪದೆ ಪದೆ ನಮಗೆ ನೀಡುತ್ತಿರುವ "ಮರಳಿ ಮಣ್ಣಿಗೆ" ಎಂಬ ಹಸಿರು ಸಂದೇಶ ಅಪ್ಪಟ ಕಾಲಜ್ಞಾನದಂತೆ ಅನುರಣಿಸುತ್ತಿದೆ. "ಚಿಗುರಿದ ಕನಸು" (೧೯೫೧) ಕಾದಂಬರಿಯ ನಾಯಕ ಶಂಕರ ಕೂಡ ಆಧುನಿಕನಗರಿ, ಮುಂಬಯಿಯ ಒಣ ಆಡಂಬರದ ಬದುಕಿಗೆ ತಿಲಾಂಜಲಿ ಕೊಟ್ಟು, ಬಂಗಾಡಿ ಎಂಬ ತನ್ನ ಹುಟ್ಟುಹಳ್ಳಿಗೆ ಬಂದು ನೆಲೆಸುತ್ತಾನೆ. ಅತಿ ನಾಗರಿಕ ಪರಿಸರದ, ಉಸಿರುಗಟ್ಟಿಸುವ ಉಪದ್ವ್ಯಾಪಗಳಿಗೆ ಬೇಸತ್ತು ಮುಂದಿನ ತಲೆಮಾರಿನವರಲ್ಲಿ ಕೆಲವರಾದರೂ ಮರಳುತ್ತಾರೆ ತಮ್ಮೂರ ಮಣ್ಣಿಗೆ, ಮಣ್ಣಿನೊಡನೆ ತಾದಾತ್ಮ್ಯಕ್ಕೆ ಎಂದು ಕಾರಂತರಿಗೆ ಪದೆ ಪದೆ ಆಳವಾಗಿ ಅನ್ನಿಸಿದ್ದಿರಬೇಕು. ಹೀಗಾಗಿ ಈ ವಸ್ತು ಅವರ ಕಾದಂಬರಿಗಳ ಒಂದು ವಿಶೇಷ ವಸ್ತುಪ್ರತಿರೂಪವೇ ಆಗಿದೆ ಅನ್ನಬಹುದು. 'ಸ್ವಪ್ನದ ಹೊಳೆ'ಯ ಕೃಷ್ಣ, ಬಸ್ಸಿ ಕೂಡ ಆ ಕಾದಂಬರಿ ಕೊನೆಯಲ್ಲಿ ಸೊಪ್ಪಿನ ಹಳ್ಳಿಯ ವಿಶಿಷ್ಟ ಸುಂದರ ಪರಿಸರದಲ್ಲಿ ನೈಸರ್ಗಿಕ ತಾದಾತ್ಮ್ಯವನ್ನು ಅನುಭವಿಸುತ್ತಾರೆ. ನಾವು ಹುಟ್ಟಿದ ಹಳ್ಳಿ ಮಣ್ಣು ಒಟ್ಟೊಟ್ಟಿಗೆ ಸ್ವಚ್ಛಂದ ನಿಸರ್ಗದ ಚೆಲುವಿಗೆ ಹಾಗೂ ಶಾಂತಿ ಸಮಾಧಾನ ನೀಡಬಹುದಾದ, ನೀಡಬೇಕಾದ ಕೃಷಿಕ ಬದುಕಿಗೆ ರೂಪಕವಾಗಿ ಬಿಡುವಂತೆ ಕಾರಂತರು ಸಂಯೋಜಿಸುತ್ತಾರೆ. ವಿದ್ಯುನ್ಮಾನ


ಯುಗದಲ್ಲಿ ಕಳೆದುಹೋಗಿರುವ ನಮಗೆಲ್ಲ ಕಾರಂತರು ನಿಸರ್ಗ ರಹಸ್ಯದ ದೀಕ್ಷೆಕೊಡುವ ಗುರುವಿದ್ದಂತೆ. ನಿಸರ್ಗದ ಸಹವಾಸವಿಲ್ಲದೆ ಇದ್ದರೆ ನಾವೆಲ್ಲ ಕೃತಕ ಕೃತ್ರಿಮ ವ್ಯಕ್ತಿಗಳಾಗಿಬಿಡುತ್ತೇವೆ ಎಂಬುದೆ "ಬೆಟ್ಟದ ಜೀವ" (೧೯೪೩)ದಂಥ ಕಾದಂಬರಿಯ ಸಂದೇಶ. ಕಾರಂತರು ನಿಸರ್ಗ ಮತ್ತು ಕೃಷಿ ಕುರಿತು ಬರೆಯುವಲ್ಲೆಲ್ಲ ನಮ್ಮ ಆಧುನಿಕ ಯುಗದ ನೈಸರ್ಗಿಕ ಕೃಷಿಸಂತ ಮಸನೋಬು ಫುಕುವೋಕಾನನ್ನು ನೆನಪಿಗೆ ತರುತ್ತಾರೆ. ನಮ್ಮ ಬದುಕು ಎಲ್ಲವನ್ನು ಒಡೆದುನೋಡುವ ಒಡೆತನವನ್ನು ಬಿಟ್ಟು, ಇಡಿಯಾಗಿ ನೋಡುವ ಇಡಿತನವನ್ನು ಬೆಳೆಸಿಕೊಂಡರೆ ನಮ್ಮ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಸಮಸ್ಯೆಗಳೆಲ್ಲವು, ಒಂದೇ ಏಟಿಗೆ ಬಗೆಹರಿದಾವು ಎಂಬ ಹೊಸ ಆಶಾವಾದ ಕಾರಂತರ ಬದುಕು-ಬರಹಗಳಿಂದ ಹೊಮ್ಮುತ್ತಿರುವಂತೆ ಕಾಣುತ್ತದೆ. ಭಾರತೀಯ ಸಮಾಜ ಇಂಡಸ್ಟ್ರಿ ಟೆಕ್ನಾಲಜಿ ಮತ್ತು ಮಾರ್ಕೆಟಿಂಗ್‌ಗಳನ್ನಷ್ಟೆ ಎತ್ತಿ ಹಿಡಿಯುವ ಅಮೆರಿಕ ರಾಷ್ಟ್ರಗಳನ್ನು ಅನುಕರಿಸದೆ, ನಿಸರ್ಗ ಮತ್ತು ಕೃಷಿಯನ್ನೂ ನೆಚ್ಚಿದ ಚೀನಾ ಜಪಾನುಗಳ ಹಾದಿಯಲ್ಲಿ ಸಾಗಿದರೆ ಹೆಚ್ಚಿನ ಶ್ರೇಯಸ್ಸು ಸಿಗಬಲ್ಲದು ಎಂಬುದು ಇದೆಲ್ಲದರ ಒಳಾರ್ಥವೆ?

ಭಾರತೀಯ ಸಮಾಜದ ಅತಿಭಾವುಕತೆ ಕಾರಂತರನ್ನು ಕಾಡಿರುವ ಮತ್ತೊಂದು ಸಮಸ್ಯೆ ಎನ್ನಬಹುದು. ಭಾರತ ಮಹಾನ್ ಅನುಭಾವಿಗಳ, ತಪಸ್ವಿಗಳ, ಸಂತರ ದೇಶ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಒಬ್ಬ ಖರೆ ಸಂತನ ಸುತ್ತ ಹತ್ತು ಮಂದಿ ಖೋಟಾ ಸಂತರು ನೆರೆದು ಜನ ಜಂಗುಳಿಯನ್ನು ದಿಕ್ಕು ತಪ್ಪಿಸುತ್ತಿರುವುದು ಭಾರತದ ದುರ್ದೈವ. ಹೀಗಾಗಿ ಇಲ್ಲಿ ಅಜ್ಞಾನ, ಮೂಢನಂಬಿಕೆ, ಜಗಳಗಂಟಿತನಗಳು ತಾಂಡವವಾಡುತ್ತಿವೆ. ಇಂಥ ಸಮಾಜದ ಮನಸ್ಸಿಗೆ ಬೌದ್ಧಿಕತೆಯ, ಚಾರಿತ್ರಿಕತೆಯ, ತಾರ್ಕಿಕತೆಯ, ವೈಚಾರಿಕತೆಯ ಚುಚ್ಚುಮದ್ದು ಕೊಡುವುದು ಅಗತ್ಯ ಎನ್ನಿಸಿರಬೇಕು ಕಾರಂತರಿಗೆ. ಹೀಗಾಗಿ ಅವರು ನಮ್ಮ ಪರಂಪರಾಗತ ನಂಬಿಕೆಗಳನ್ನು ಉಡಾಯಿಸುವ ಪಕ್ಕಾ ವಾಸ್ತವವಾದಿ ಚಿಂತನೆಯ, ಚಾರಿತ್ರಿಕ ದೃಷ್ಟಿಕೋನದ "ಮೂಕಜ್ಜಿಯ ಕನಸುಗಳು" (೧೯೭೮), "ಸ್ವಪ್ನದ ಹೊಳೆ" ಯಂಥ ಕಾದಂಬರಿಗಳನ್ನು ಬರೆದಿದ್ದಾರೆ. ಮೂಕಜ್ಜಿ ಆದಿಮಾನವನಿಂದ ಹಿಡಿದು ಇಂದಿನವರೆಗಿನ ಮನುಕುಲದ ಕಥೆಯನ್ನು ಒಂದು ಚಾರಿತ್ರಿಕ ನೆಲೆಗಟ್ಟಿನಮೇಲೆ ಕಟ್ಟಿಕೊಡುತ್ತ ಧರ್ಮವನ್ನು ಪ್ರಶ್ನಿಸುತ್ತಾಳೆ, ಕಾಮದ ಒಳಸುಳಿಗಳನ್ನು ಕೆದಕಿ ತೋರಿಸುತ್ತಾಳೆ, ಮೋಕ್ಷದ ಹಲುಬು ಕಲ್ಪನೆ ಎಂಬುದನ್ನು ವಿವರಿಸುತ್ತಾಳೆ. 'ಸ್ವಪ್ನದ ಹೊಳೆ' ಲಿಂಗದ ಪರಿಕಲ್ಪನೆ ಇತಿಹಾಸದ ಆದಿಯಿಂದ ಬೆಳೆದು ಬಂದ ಪರಿಯನ್ನು ನಾಟ್ಯೀಕರಿಸಿ ತೋರಿಸುವುದರ ಜೊತೆಗೆ, ಸಂಸ್ಕೃತಿ ನಾಗರಿಕತೆಗಳು ಬೆಳೆದಂತೆ ಹೇಗೆ ನಮ್ಮ ಪಾಶವೀ ಕಾಮ, ಸಂಯಮದ ಶೃಂಗಾರವಾಗಿ, ಶ್ರೇಷ್ಠ ಕಲೆಯಾಗಿ ಪರಿವರ್ತನೆ ಹೊಂದಿತು ಎಂಬುದನ್ನು ಮನದಟ್ಟು ಮಾಡಿಸುತ್ತದೆ. ಇಂಥ ಕಾದಂಬರಿಗಳು ಭಾರತದ ಜನಸಾಮಾನ್ಯರ ಅಮಾಯಕ ಮನಸ್ಸುಗಳನ್ನು ಅತಿಭಾವುಕತೆ, ಅಳುಬುರುಕುತನಗಳಿಂದ ಪಾರುಮಾಡಿ ಶುದ್ಧಚಿಂತನೆ, ಚಾರಿತ್ರಿಕ ದೃಷ್ಟಿಕೋನ, ವೈಚಾರಿಕ ವಿವೇಕ ಇವುಗಳ ಕಡೆಗೆ ಕರೆದೊಯ್ಯುವ ಪ್ರಯತ್ನ ಮಾಡುತ್ತವೆ. ಸ್ವತಃ ಕೂತು ವಿಜ್ಞಾನದ ಶಾಖೆಗಳನ್ನು ಅಭ್ಯಾಸಮಾಡಿ 'ಬಾಲವಿಜ್ಞಾನ', 'ವಿಜ್ಞಾನ ಪ್ರಪಂಚ'ದ ಹೊತ್ತಿಗೆಗಳನ್ನು ಬರೆದು ಪ್ರಕಟಿಸಿದ ನಮ್ಮ ಕಾರಂತರಿಗೆ ಸಮೂಹ ಶಿಕ್ಷಣದ ತುರ್ತು ಅರ್ಥವಾಗಿರಬೇಕು. ಸಮೂಹ ಶಿಕ್ಷಣವನ್ನು ವೈಜ್ಞಾನಿಕ ಚಿಂತನೆಯ ತಳಹದಿಯ ಮೇಲೆ ನೀಡಲು ಬಯಸಿದಾಗ ಇಂಥ ಕಾದಂಬರಿಗಳ ಹೊಳಹು ಮೂಡಿರಬಹುದು. ಅವರ ಬದುಕಿನ ತತ್ತ್ವ ಪ್ರಣಾಲಿಯಂಥ "ಬಾಳ್ವೆಯೆ ಬೆಳಕು" ಹಾಗೂ ಅವರ ಪ್ರಾಯೋಗಿಕ ಬದುಕಿನ ಆತ್ಮಕಥೆಯಾದ "ಹುಚ್ಚು ಮನಸ್ಸಿನ ಹತ್ತುಮುಖಗಳು" ಈ ಬಗೆಯ ವೈಜ್ಞಾನಿಕ ಚಿಂತನೆಯ ಶ್ರೇಷ್ಠ ಕೃತಿಗಳಾಗಿವೆ. ಅದರ ಕಲಾತ್ಮಕ ಸ್ವರೂಪವೆ ಆ ಕಾದಂಬರಿಗಳು ಎನ್ನಬಹುದು.

ಹೀಗೆ ನಮ್ಮ ಆಧುನಿಕ ಚಿಂತನಾ ಕ್ರಮಕ್ಕೆ ಅನುಗುಣವಾಗಿ, ನಮ್ಮ ಸೈದ್ಧಾಂತಿಕ ನಿಲುವುಗಳಿಗೆ ಅನುಗುಣವಾಗಿ ಕಾರಂತರ ಕೃತಿಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಸೂಚನೆಗಳನ್ನು ಗುರ್ತಿಸಬಹುದೆ ಹೊರತು, ಕಾರಂತರು ಹಾಗೆಲ್ಲ ಪರಿಭಾವಿಸಿ ಕೃತಿಗಳನ್ನು ಕಟ್ಟಿದ್ದಾರೆ ಎನ್ನಲು ಬರುವುದಿಲ್ಲ. ನಾವು ಗುರ್ತಿಸುತ್ತಿರುವುದು, ನಮಗೆ ಬೇಕಾದ ಸಂಗತಿಗಳನ್ನು, ನಾವು ಹೊರಡಿಸುತ್ತಿರುವುದು ನಮಗೆ ಅಗತ್ಯವಾದ ಅರ್ಥಗಳನ್ನು. ಕಾರಂತರ ಕೃತಿಗಳು ಈ ಅರ್ಥಗಳನ್ನೂ ಬಿಟ್ಟುಕೊಡಬಲ್ಲದು ಎಂಬುದು ಅವುಗಳ ಕಲಾತ್ಮಕ ಸಾಧನೆ ಎನ್ನಬಹುದು. ಅದು ಬಿಟ್ಟು ನಮಗಿರುವ ಸೈದ್ಧಾಂತಿಕ ತುರ್ತುಗಳು ಅವರಿಗೂ ಇರಬೇಕಾಗಿತ್ತು ಯಾಕಿರಲಿಲ್ಲ ಎನ್ನುವುದು ತರವಲ್ಲ. ಮೊದಲೆ ಹೇಳಿದ ಹಾಗೆ ಕಾರಂತರು ಬದುಕನ್ನ ಇಡಿಯಾಗಿ ಸ್ವೀಕರಿಸುವ ಒಟ್ಟಾಗಿ ಪರಿಭಾವಿಸುವ, ಯಾವುದೇ ಬಗೆಯ ಕಂಪಾರ್ಟ್‌ಮೆಂಟಲೈಸೇಷನ್ನನ್ನೂ ಇಷ್ಟಪಡದ ಲೇಖಕರು. ಅವರಿಗೆ ಇಡಿಯಾಗೇ ದಕ್ಕಿದ ದರ್ಶನ ನಮ್ಮ ಕಾಲಕ್ಕೆ ತಕ್ಕಂತೆ ದಳ ದಳವಾಗಿ ಅಥವಾ ಹೋಳು ಹೋಳಾಗಿ ಕೂಡ ಕಾಣಿಸಿಕೊಳ್ಳುವಷ್ಟು ಶಕ್ತವಾಗಿದೆ.

ತಾವು ಬದುಕಿದ ದೇಶ ಮತ್ತು ಕಾಲದಲ್ಲಿ ಉಂಟಾಗುವ ಎಲ್ಲ ಸಮಸ್ಯೆಗಳಿಗು ತೀವ್ರವಾಗಿ, ಪ್ರಾಮಾಣಿಕವಾಗಿ, ಆತ್ಮಪೂರ್ವಕವಾಗಿ ಸ್ಪಂದಿಸುವುದು ಕಾರಂತರ ಹುಟ್ಟುಗುಣ. ಹದಿಹರೆಯದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಹವೆಯಲ್ಲಿ ಗಾಂಧೀ ಪ್ರಭಾವದಲ್ಲಿ ಉಂಟಾದ ಹಸಿ ಹಸಿ ಅನುಭವಗಳ ಮೊತ್ತವಾಗಿ "ಔದಾರ್ಯದ ಉರುಳಲ್ಲಿ" (೧೯೪೭) ಕಾದಂಬರಿ ಹುಟ್ಟಿತು. ವೃದ್ಧಾಪ್ಯದಲ್ಲಿ, ಪರಿಸರವಾದದ ಗಾಳಿ ಬೀಸುತ್ತಿದ್ದಾಗ, ಸೃಜನಶೀಲ ಕೃತಿಗೆ ಮನಸ್ಸು ತಯಾರಾದಾಗ 'ಭಾರತದ ಪರಿಸರದ ಪರಿಸ್ಥಿತಿ' ಎಂಬ ಪರಿಸರ ತಜ್ಞರ ವರದಿಯನ್ನು ಕನ್ನಡಿಸಿಕೊಟ್ಟರು. 'ಸ್ವತಂತ್ರಪಕ್ಷ' ಎಂಬುದು ಅಕ್ಷರಶಃ ಸ್ವಾತಂತ್ರ್ಯವನ್ನು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುತ್ತದೆ ಎನಿಸಿದಾಗ ಅದರ ಪರವಾಗಿ ಪ್ರಚಾರ ಮಾಡಿದರು. ತುರ್ತು ಪರಿಸ್ಥಿತಿ ದೇಶಕ್ಕೆ ಮಾರಕ ಎನಿಸಿದಾಗ ಸರ್ಕಾರ ಕೊಟ್ಟ ಪ್ರಶಸ್ತಿಯನ್ನು ಅದರ ಮುಖಕ್ಕೆ ಎಸೆದರು. ಕೈಗಾ ಅಣುಸ್ಥಾವರವನ್ನು ವಿರೋಧಿಸಿ ಪರಿಸರವಾದಿಗಳ ಪರವಾಗಿ ಚುನಾವಣೆಗೂ ನಿಂತು ಸೋತರು. ಏನೀಗ? ಅವರ ಈ ಎಲ್ಲ ಕೃತಿಗಳು ಕಾರ್ಯಗಳು ಒಟ್ಟೊಟ್ಟಿಗೆ ಅವರ ರಾಜಕೀಯ, ಸಾಮಾಜಿಕ ನಿಲುವುಗಳನ್ನು ಸಾಂಸ್ಕೃತಿಕ ಕಾಳಜಿಯನ್ನು, ಮಾನವ ಪ್ರೇಮವನ್ನು ವ್ಯಕ್ತಪಡಿಸುವಂಥವು ಎಂಬುದಷ್ಟು ನಮಗೆ ಅರ್ಥವಾದರೆ ಸಾಕು. ನಮ್ಮ ಮಾನದಂಡಗಳಿಂದ ನಮ್ಮ ಹಿರಿಯರನ್ನೆಲ್ಲ ಅಳೆಯುವುದು ಶುದ್ಧ ಅವೈಜ್ಞಾನಿಕ ಎಂದು ತಿಳಿದರೆ ಸಾಕು, ಕಾರಂತರನ್ನು ನಾವು ಅರಿತಂತಾಯಿತು.

"ಬುದ್ಧ"ನಾದ ಮೇಲೆ...



ಬೆಂಕಿ ಬೇಕಾದರೆ ಕಟ್ಟಿಗೆಯನ್ನು
ಕೊಡಲಿಯಿಂದ ಸೀಳಿದರೆ ಸಿಗುವುದಿಲ್ಲ-
ಒಂದರಿಂದೊಂದನ್ನು ಉಜ್ಜಿದರಲ್ಲದೆ!
ಅಂತೆಯೇ ಅಮೃತತ್ವ ಲಭಿಸುವುದು
ಯೋಗಮಾರ್ಗದಿಂದಲ್ಲದೆ ಕೇವಲ
ಕಾಯಕ್ಲೇಶದಿಂದಲ್ಲ!


ಕೆಂಡದ ಮೇಲೆ ಹುಲ್ಲು ಹಾಕಿ
ಗಾಳಿ ಬೀಸಿದರೆ
ಅದು ಉರಿಯೇಳದೇ ಹೋದೀತೇ?
ಹಾಗೆಯೇ
ಕಾಮದಲ್ಲಿ ಚಿತ್ತವಿಟ್ಟರೆ ಎಂದಿಗೂ
ಶಾಂತಿ ಸಿಗುವುದಿಲ್ಲ.

- ಡಾ. ಎಲ್. ಬಸವರಾಜು

(ಬುದ್ಧ ಚರಿತೆ, ಪುಟ. ೨೩೮ - ೨೩೯)

ಗಿರೀಶ ಕಾರ್ನಾಡ ಚರಿತ್ರೆ ಜೊತೆಗಿನ ಜಗಳ ಮತ್ತು ಗೆಳೆತನ

- ವಿಕ್ರಮ ವಿಸಾಜಿ



ಕಳೆದ ನಾಲ್ಕು ದಶಕಗಳಿಂದ ನಾಟಕಗಳನ್ನು ಬರೆಯುತ್ತಿರುವ ಗಿರೀಶ ಕಾರ್ನಾಡ ಕನ್ನಡದ ಮುಖ್ಯ ನಾಟಕಕಾರರಲ್ಲಿಒಬ್ಬರು. ತಮ್ಮ ನಾಟಕಗಳ ಮೂಲಕ ಧರ್ಮ, ರಾಜಕಾರಣ ಮತ್ತು ಮನುಷ್ಯ ಸಂಬಂಧಗಳ ಕುರಿತು ಕನ್ನಡದಲ್ಲಿ ನಡೆದಿರುವ ಚರ್ಚೆಯನ್ನು ಇನ್ನಷ್ಟು ಸೂಕ್ಷ್ಮಗೊಳಿಸಿದವರು. ಅವರು ಎಲ್ಲಿಯೇ ಇರಲಿ ತಮ್ಮ ನಾಟಕದ ಬೇರುಗಳನ್ನಂತೂ ಭಾರತದ ಚರಿತ್ರೆ, ಪುರಾಣ ಮತ್ತು ಜಾನಪದದಲ್ಲಿ ಇಳಿಬಿಟ್ಟಿರುತ್ತಾರೆ. ಇಂಥ ಕಥನ ಮಾದರಿಗಳಿಂದ ಕಾರ್ನಾಡರು ಹೊರಬಂದದ್ದು ಕಡಿಮೆ. ಇವು ಅವರ ಸೃಜನಶೀಲತೆಯ ಅಕ್ಷಯ ಪಾತ್ರೆ. ಇಂಥ ಅಕ್ಷಯ ಪಾತ್ರೆಯಿಂದ ಅವರು ಒಳನೋಟಗಳನ್ನು ಕಂಡುಕೊಳ್ಳುವ ಬಗೆ ಕೂಡ ಕುತೂಹಲಕಾರಿಯಾದದ್ದು. ನಾಟಕ ರಚನೆಯ ಪೂರ್ವದಲ್ಲಿ ಸಂಶೋಧಕರಂತೆ ಕೆಲಸ ಮಾಡುವ ಕಾರ್ನಾಡರು ರಚನೆಯ ಹೊತ್ತಿನಲ್ಲಿ ಅಪ್ಪಟ ಕವಿಯಾಗಿ ಬಿಡುತ್ತಾರೆ.

ಚರಿತ್ರೆ ಕಾರ್ನಾಡರ ನಾಟಕಗಳ ಮುಖ್ಯ ಭಿತ್ತಿ. ಆರಂಭದಿಂದಲೂ ಚರಿತ್ರೆಯ ಜೊತೆ ಅನುಸಂಧಾನ ಮಾಡುತ್ತಲೇ ಬಂದಿದ್ದಾರೆ. ಇದರೊಂದಿಗಿನ ಅವರ ಜಗಳ ಮತ್ತು ಗೆಳೆತನ ಇಂದಿಗೂ ನಿಂತಿಲ್ಲ. ಇತ್ತೀಚಿನ ಅವರ ಹೊಸನಾಟಕ "ಟಿಪ್ಪೂ ಸುಲ್ತಾನ ಕಂಡ ಕನಸು" ಇನ್ನೊಂದು ನಿದರ್ಶನ ಚರಿತ್ರೆಯನ್ನು ಬಳಸಿಕೊಂಡು 'ತುಘಲಕ್' ನಾಟಕ ಬರೆದಾಗ ನಮ್ಮ ರಂಗಭೂಮಿ ಅನುಭವಿಸಿದ ರೋಮಾಂಚನವನ್ನು ಯಾರೂ ಮರೆತಿಲ್ಲ. 'ತಲೆದಂಡ' ಬರೆದ ಮೇಲೆ ಕಾರ್ನಾಡರು ಮತ್ತೊಮ್ಮೆ ಚರ್ಚೆಯ ಕೇಂದ್ರಬಿಂದುವಾದರು. ಚರಿತ್ರೆಯ ಕುಲುಮೆಯಿಂದ ವರ್ತಮಾನಕ್ಕೆ ಬೆಳಕು ಹಾಯಿಸಿದ ಈ ಎರಡು ನಾಟಕಗಳ ಕುರಿತಂತೆ ಒಂದು ಲಹರಿಯ ಚರ್ಚೆ ಮಾಡಬಯಸಿರುವೆ.

ಕನ್ನಡದಲ್ಲಿ ಚರಿತ್ರೆಯ ಸಂಗತಿಗಳು ನಾಟಕಗಳ ವಸ್ತುವಾದದ್ದು ಹೊಸದೇನಲ್ಲ. ನಾಟಕ ರಚನೆಯ ಆರಂಭದಿಂದಲೂ ಇಂಥ

ಪ್ರಯತ್ನಗಳು ಹೇರಳವಾಗಿ ಕಂಡುಬರುತ್ತವೆ. ಆದರೆ ಆರಂಭದ ನಾಟಕಕಾರರಿಗೆ ಚರಿತ್ರೆಯನ್ನು ಸಮಕಾಲೀನ ತುರ್ತಿನಲ್ಲಿ ಪುನರ್‌ರಚಿಸುವ ಅನಿವಾರ್ಯತೆ ಇದ್ದಂತೆ ಕಾಣುವುದಿಲ್ಲ. ಹೆಚ್ಚಾಗಿ ಅಂದಿನ ನಾಟಕಗಳೆಲ್ಲ ಚರಿತ್ರೆಯ ಕಥೆಯನ್ನು ಸಮರ್ಥವಾಗಿ ಹೇಳುತ್ತವೆ. ಅಥವಾ ಭಾರತೀಯ ಸಂಸ್ಕೃತಿಯ ಜನಪ್ರಿಯ ಮೌಲ್ಯಗಳನ್ನು ಭಾವುಕವಾಗಿ ಕಟ್ಟಿಕೊಡುತ್ತವೆ. ಚರಿತ್ರೆ ಜೊತೆಗಿನ ಜಗಳ ಅವರಿಗೆ ಒಡಿಸದು. ಅವರದೇನಿದ್ದರೂ ಗೆಳೆತನಕ್ಕಾಗಿ ಹಾತೊರೆಯುವ ಮನಸ್ಸು.

ಕುವೆಂಪು ತಮ್ಮ ಪೌರಾಣಿಕ ನಾಟಕಗಳಲ್ಲಿ ಅಚ್ಚರಿಯ ಸಾಧನೆ ಮಾಡಿದರು. ನಿರ್ಲಕ್ಷ್ಯಕ್ಕೊಳಗಾದ ಪಾತ್ರಗಳನ್ನು ಭಿನ್ನದೃಷ್ಟಿಯಲ್ಲಿ ಗ್ರಹಿಸುವುದರ ಮುಖಾಂತರ ಅದನ್ನೊಂದು ಸಾಂಸ್ಕೃತಿಕ ಜರೂರಿಯಾಗಿ ಪರಿಗಣಿಸಿದರು. ಜಡತೆಯನ್ನು ಹೊರಗಿಟ್ಟು ಮಾನವೀಯ ನೆಲೆಯಿಂದ ಶೂದ್ರಶಕ್ತಿಗಳ ಜೀವಂತಿಕೆ ಹಿಡಿದಿಟ್ಟರು. ಆದರೆ ಚರಿತ್ರೆಯ ನೆರಳಿರುವ ಅವರ 'ರಕ್ತಾಕ್ಷಿ' ನಾಟಕಕ್ಕೆ ಈ ಭಾಗ್ಯ ಸಿಗಲಿಲ್ಲ. ಸಂಸರದೊಂದು ಭಿನ್ನ ಮಾರ್ಗ ರಾಜರ ವ್ಯಕ್ತಿತ್ವದ ಬಿರುಕುಗಳನ್ನು ತೆರೆದಿಟ್ಟರೂ ಪ್ರಭುತ್ವದ ಬಗ್ಗೆ ಅವರಿಗೆ ಗಾಢ ನಿಷ್ಠೆ.

ಕಾರ್ನಾಡರ 'ತುಘಲಕ್' ಮತ್ತು 'ತಲೆದಂಡ'ದ ಚರಿತ್ರೆಗೆ ಒಂದು ವಿಶೇಷ ಗುಣವಿದೆ. ಈ ನಾಟಕಗಳ ಕಥೆಯ ಚಕ್ರ ಚರಿತ್ರೆಯಲ್ಲೆ ಗಿಣಿ ಹೊಡೆದು ನಿಲ್ಲುವುದಿಲ್ಲ. ಅಂಥ ಚಕ್ರವನ್ನು ಕಾರ್ನಾಡರು ನಮ್ಮ ಕಾಲದವರೆಗೆ ತಂದು ನಿಲ್ಲಿಸುತ್ತಾರೆ. 'ತಲೆದಂಡ'ದ ಒಂದು ಸನ್ನಿವೇಶದಲ್ಲಿ ಬಿಜ್ಜಳ ಸ್ವತಃ ಅಧಿಕಾರದ ವಂಶಪಾರಂಪರ್ಯವನ್ನು ಮುರಿದು ರಾಜನಾದರೂ ಮುಂದೆ ವಂಶಪಾರಂಪರ್ಯವನ್ನು ಸಮರ್ಥಿಸಿಕೊಳ್ಳುತ್ತಾನೆ. ತನ್ನ ಮಗನ ಕುರಿತು ತನಗಿರುವ ಮೋಹ ತಪ್ಪಲ್ಲವೆಂದು ಭಾವಿಸಿಕೊಳ್ಳುತ್ತಾನೆ. ಕೊನೆಗೆ ಬಸವಣ್ಣನನ್ನೆ ಇಕ್ಕಟ್ಟಿಗೆ ಸಿಲುಕಿಸುವ ಆತ ಶೂನ್ಯಸಿಂಹಾಸನದ ಪೀಠಕ್ಕೆ ಚನ್ನಬಸವಣ್ಣನ ಆಯ್ಕೆಯನ್ನು ಬೆಂಬಲಿಸುತ್ತಾನೆ. ರಾಜಕಾರಣದ ಸ್ವಾರ್ಥದ ನಡೆಯನ್ನು ಬಿಜ್ಜಳ ಹೇಳುವಲ್ಲಿ ವರ್ತಮಾನವನ್ನು ಚುಚ್ಚುವ ಗುಣವಿದೆ.

'ತುಘಲಕ್' ನಾಟಕದಲ್ಲೂ ಅಷ್ಟೇ. ಅಧಿಕಾರದ ದಾಹ, ಸಂಶಯ, ಕೊಲೆ, ಹುನ್ನಾರಗಳು ನಿರಂತರವಾಗಿ ವ್ಯವಸ್ಥೆಯ ಹುಣ್ಣುಗಳನ್ನು ಬಿಚ್ಚಿಡುತ್ತವೆ. ಈ ಹುಣ್ಣು ಇಂದಿಗೂ ಮಾಯದೇ ಇರುವುದರಿಂದ ಕಾರ್ನಾಡರ ನಾಟಕಗಳು ಪ್ರಸ್ತುತ ಎನಿಸುತ್ತವೆ.

ಈ ಎರಡೂ ನಾಟಕಗಳಲ್ಲಿರುವ ಧರ್ಮ ಮತ್ತು ರಾಜಕಾರಣದ ನಂಟು ಕಥೆಯ ಹಲವು ತಿರುವುಗಳಿಗೆ ಕಾರಣವಾಗಿದೆ. 'ತುಘಲಕ್' ನಾಟಕದ ಮಹಮ್ಮದನಿಗೆ ದೈವಿಕ ಹುಚ್ಚು ಇದೆಯೇ ಹೊರತು ವರ್ತನೆಯಲ್ಲಿ ಮಾತ್ರ ಆತ ಪಕ್ಕಾ ರಾಜಕಾರಣಿ. ಧರ್ಮ ತನ್ನ ಹಂಗಿನಲ್ಲಿರಬೇಕೆಂಬ ಅಪೇಕ್ಷೆ ಆತನದು. ಸಮಯಕ್ಕೆ ತಕ್ಕಂತೆ ಧರ್ಮ, ಪ್ರಾರ್ಥನೆ, ಇಮಾಮರನ್ನು ದುರುಪಯೋಗಪಡಿಸಿಕೊಳ್ಳುವ ಸ್ವಭಾವದವನು. ಧರ್ಮದ ಯಾವುದೋ ಒಂದು ನಡೆಯಿಂದ ಅಪಾಯವಿದೆ ಎಂದು ಅನಿಸಿದರೆ ಅದನ್ನು ಚಿವುಟಿ ಹಾಕುವ ಕಲೆ ಆತನಿಗೆ ಕರಗತವಾಗಿದೆ. ಧಾರ್ಮಿಕ ಸಂಗತಿಗಳು ಎಲ್ಲ ಕಾಲದಲ್ಲೂ ಅಧಿಕಾರಶಾಹಿಯಿಂದ ದುರುಪಯೋಗಕ್ಕೆ ಈಡಾಗಿವೆ. ಮಹಮ್ಮದನ ನಡವಳಿಕೆ ಕೂಡ ಇದರಿಂದ ಹೊರತಾಗಿಲ್ಲ.

ಮಹಮ್ಮದ್ ಧರ್ಮವನ್ನು ಸ್ವಾರ್ಥಕ್ಕೆ ಬಳಸಿಕೊಂಡರೆ ಅಝಿಝ್‌ನಂಥ ಧಾರ್ಮಿಕ ನಾಯಕನ ವೇಷತೊಟ್ಟು ಮಹಮ್ಮದನನ್ನೆ ವಂಚಿಸುತ್ತಾನೆ. ಇಡೀ ನಾಟಕದಲ್ಲಿ ಧರ್ಮ ಮಹಮ್ಮದನಿಂದಷ್ಟೇ ಅಲ್ಲ ಸುತ್ತಲಿನ ಜನರಿಂದಲೂ ದುರುಪಯೋಗಕ್ಕೆ ಒಳಗಾಗಿದೆ. ರಾಜಕಾರಣಕ್ಕೆ ನೈತಿಕ ನೆಲೆಗಟ್ಟನ್ನು ನಿರ್ಮಿಸಬೇಕಾದ ಧರ್ಮ ಅರಾಜಕತೆಯಿಂದಾಗಿ ವಂಚನೆಯ ರಹದಾರಿಗಳನ್ನು ಮಾತ್ರ ತೆರೆಯುತ್ತ ಸಾಗಿದೆ. ಧರ್ಮ ಮತ್ತು ರಾಜಕಾರಣದ ಅನೈತಿಕ ಸಂಬಂಧ ರಕ್ತದ ಕಲೆಗಳನ್ನು ಇಲ್ಲಿ ಮೂಡಿಸಿದೆ.

'ತಲೆದಂಡ' ದಲ್ಲಿ ಜಾತಿ ಮತ್ತು ರಾಜಕಾರಣದ ಸಂಬಂಧದ ಸ್ವರೂಪ ಇನ್ನೊಂದು ತೆರನಾಗಿದೆ. "ಅವರಿಗೆ ಏರೇನ್ಮ ಜಾತಿ ಬಿಡಿಸಿದರ ಉಸುರುಗಟ್ಟಿ ತಳಮಳ ಒದ್ದಾಡಿ ಗೊಟಕ್ ಅಂದಾರು" ಎಂಬ ಬಿಜ್ಜಳನ ಮಾತು ಗಮನಿಸಿ. ಬಸವಣ್ಣನ ಕ್ರಿಯಾಶೀಲತೆಯ ಬಗೆಗೆ ಬಿಜ್ಜಳನಿಗೆ ಮೆಚ್ಚುಗೆ ಇದೆ. ಈ ಮೆಚ್ಚುಗೆಗೆ ಎರಡು ಕಾರಣಗಳಿವೆ. ಒಂದು ಬಸವಣ್ಣನ ಮಾತು ಮತ್ತು ಕ್ರಿಯೆಗಳಿಂದ ಬಿಜ್ಜಳ ತನ್ನ ಕೀಳರಿಮೆಯಿಂದ ಹೊರಬಂದಿದ್ದಾನೆ. ಕ್ಷೌರಿಕನಾದ ಬಿಜ್ಜಳನನ್ನು ಬಸವಣ್ಣ ಜಾತಿಯ ಹಂಗಿಲ್ಲದೆ ನೋಡಿದ್ದು, ಗೌರವಿಸಿದ್ದು ಅವನನ್ನು ಗಾಢವಾಗಿ ಪ್ರಭಾವಿಸಿದೆ. ಅವ ಅವನ ಶರಣರು ತಾಯಾಣೆ ಹೇಳತೀನಿ ಅವರು ಮಾತಾಡಿದರ ನಾನೂ ಒಬ್ಬ ಮನುಷ್ಯ ಅನಸತೈತಿ ಎನ್ನುತ್ತಾನೆ. ಆದರೆ ಬಿಜ್ಜಳನಿಗೆ ಜಾತಿ ಬೇಕು. ಯಾಕೆಂದರೆ ತನ್ನ ಜಾತಿಗಿರುವ ಹುಂಬುತನದ ಗುಣದಿಂದಲೇ ತಾನು ಅಧಿಕಾರಕ್ಕೆ ಬಂದೆ ಎಂಬ ಒಳನಂಬಿಕೆಯೂ ಆತನಿಗಿರುವಂತಿದೆ. ಎರಡು: ತನ್ನ ರಾಜ್ಯದ ಬೇರೆ-ಬೇರೆ ಜಾತಿಯ ಜನರನ್ನು ಒಗ್ಗೂಡಿಸಿದ್ದು, ಬೇರೆ ರಾಜ್ಯಗಳೆಲ್ಲಾ ಕಲ್ಯಾಣದ ಬೆಳವಣಿಗೆಯನ್ನು ಕುತೂಹಲದಿಂದ ಗಮನಿಸುತ್ತಿರುವುದು ಬಿಜ್ಜಳನಿಗೆ ಅಭಿಮಾನದ ವಿಷಯ.



ಬಸವಣ್ಣನ ಕ್ರಿಯೆಯ ಬಗ್ಗೆ, ಶರಣತ್ವದ ಬಗ್ಗೆ ಇಷ್ಟೆಲ್ಲಾ ಅಭಿಮಾನ ತಾಳುವ ಬಿಜ್ಜಳನಿಗೆ ಸ್ವತಃ ಶರಣನಾಗಲು ಇಷ್ಟವಿಲ್ಲ. ಕಾರಣ, ಅವನಿಗೆ ರಾಜ್ಯಭಾರ ಮಾಡಬೇಕಿದೆ. ಶರಣತ್ವ ರಾಜ್ಯಭಾರಕ್ಕೆ ಸಹಾಯಕವೆಂದು ಆತ ನಂಬುವುದಿಲ್ಲ. ಅಧಿಕಾರದಲ್ಲಿರುವವರು ಶರಣತ್ವದ ಗಡಿಗಳನ್ನು ಉಲ್ಲಂಘಿಸಬೇಕಾದದ್ದು ಅನಿವಾರ್ಯವೆಂಬ ಅಭಿಪ್ರಾಯ ಆತನದು. ಬಿಜ್ಜಳ ಭಾವುಕನಾದರೂ ವಾಸ್ತವವನ್ನು, ರಾಜಕಾರಣದ ಸೂಕ್ಷ್ಮತೆಗಳನ್ನು ಮರೆತವನಲ್ಲ. ಮರೆತರೆ ಕ್ಷೌರಿಕನಾದ ಬಿಜ್ಜಳನಿಗೆ ರಾಜಕಾರಣದ ಕೇಂದ್ರಕ್ಕೆ ಬರಲು ಸಾಧ್ಯವಿತ್ತೆ? ದೈವತ್ವಕ್ಕಾಗಿ ಹಂಬಲಿಸುವ ಆದರೆ ಪಶುತ್ವ ಬಿಡದ ಮಹಮ್ಮದ್ ಮತ್ತು ಶರಣತ್ವ ಇಷ್ಟಪಡುವ ಆದರೆ ಅನುಸರಿಸಲೊಲ್ಲದ ಬಿಜ್ಜಳ ಇಂಥ ದ್ವಂದ್ವಗಳೊಳಗೆ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ನಿರಂತರ ಹೆಣಗಾಡುತ್ತಾರೆ.

ಗಮನಿಸಬೇಕಾದ ಅಂಶವೆಂದರೆ, ಮಹಮ್ಮದನಿಗಿರುವಷ್ಟು ರಕ್ತದ ಹಪಾಹಪಿ ಬಿಜ್ಜಳನಿಗಿಲ್ಲ. ಅಲ್ಲದೆ, ಮಹಮ್ಮದನನ್ನು ಕಾಡುವಷ್ಟು ಸಂಶಯ ಪಿಶಾಚಿಗಳು ಬಿಜ್ಜಳನನ್ನು ಕಾಡುವುದಿಲ್ಲ. ನಾಟಕದ ಮುಕ್ತಾಯಕ್ಕೆ ಹೋದಂತೆ ಮಹಮ್ಮದ್ ಕ್ರೂರಿಯಾಗುತ್ತಲೇ ಹೋಗುತ್ತಾನೆ. ಆದರೆ ಕೊನೆಗೆ ಬಿಜ್ಜಳ ಮನುಷ್ಯನಾಗುತ್ತಾ ಬರುತ್ತಾನೆ. ವಿಪರ್ಯಾಸವೆಂದರೆ, ಶರಣ ಚಳುವಳಿಯ ಜೊತೆಗೆ ಬೆಳೆದ ಜಗದೇವ

ಕೊನೆಯಲ್ಲಿ ಪಶುವಿನಂತೆ ವರ್ತಿಸುತ್ತಾನೆ. ಇದು ಶರಣ ಚಳುವಳಿಯ ಶಕ್ತಿ ಮತ್ತು ಮಿತಿಗಳೆರಡರ ಸೂಚನೆ ಎಂದು ನಾನು ಭಾವಿಸಿರುವೆ.

ಜಗದೇವ ಮತ್ತು ಸೋಮಿದೇವ ಒಂದೇ ನಾಣ್ಯದ ಎರಡು ಮುಖಗಳು. ತನ್ನ ಹೊಸ ಧರ್ಮವನ್ನು ಸ್ಥಾಪಿಸುವ ಹಂಬಲ ಜಗದೇವನದಾದರೆ, ರಾಜಕಾರಣದ ಕೇಂದ್ರಕ್ಕೆ ಬರುವ ಆತುರ ಸೋಮಿದೇವನದು. ಇಂಥ ಆತುರ ಕ್ರಿಯೆಗಳಲ್ಲಿ ಇಬ್ಬರೂ ಮನುಷ್ಯತ್ವ ಮರೆಯುತ್ತಾರೆ. ಮನುಷ್ಯತ್ವ ಮರೆತ ಧರ್ಮ ಮತ್ತು ಅಧಿಕಾರಗಳೆರಡೂ ಬಸವಣ್ಣನ ಆಶಯಗಳ ಆಚೆಯ ಸಂಗತಿಗಳೇ ಆಗಿದ್ದವು.

ಧರ್ಮ ಮತ್ತು ರಾಜಕಾರಣದ ಅಂಶಗಳೇ ಈ ನಾಟಕಗಳಲ್ಲಿ ಮನುಷ್ಯ ಸಂಬಂಧಗಳ ಸ್ವರೂಪವನ್ನು ಕೂಡ ನಿರ್ಧರಿಸಿವೆ. ಮನುಷ್ಯ ಸಂಬಂಧಗಳಿಗಿಂತ ದೈವತ್ವದ ಸಂಬಂಧಗಳಿಗೆ ಹಾತೊರೆಯುವುದು ಮಹಮ್ಮದನ ವ್ಯಕ್ತಿತ್ವದ ಇನ್ನೊಂದು ವೈಶಿಷ್ಟ್ಯ. ಮನುಷ್ಯರೊಂದಿಗೆ ಸಂವಾದದ ಸಾಧ್ಯತೆಗಳೆಲ್ಲ ಮೊಟಕುಗೊಂಡಂತೆನಿಸಿದಾಗ ಆತ ದೇವರೊಡನೆ ಸಂವಾದ ಹೂಡುತ್ತಾನೆ. ತನ್ನ ಮನದ ಗಾಯಗಳಿಗೆ ಔಷಧಿ ಬೇಡುತ್ತಾನೆ. ದೈವದ ಎದುರು ಮಗುವಾಗುವ ಮಹಮ್ಮದ್ ಅಧಿಕಾರದೆದುರು ರಾಕ್ಷಸನಾಗಿ ನಿಲ್ಲುತ್ತಾನೆ. ಹೊಸಧರ್ಮದ ನಂಬಿಕೆಗಳ ನೆಲೆಯಲ್ಲಿ ಕೆಲಸಮಾಡುವ ಬಸವಣ್ಣ ಜನತೆಯೊಂದಿಗಿನ ಕರಳುಬಳ್ಳಿಯ ಸಂಬಂಧವನ್ನು ಗಾಢಗೊಳಿಸಿಕೊಳ್ಳುತ್ತಲೆ ಹೋಗುತ್ತಾನೆ. ಇತ್ತ ಪುರೋಹಿತರೊಂದಿಗಿನ ಸಂಬಂಧ ಎಣ್ಣೆ ಸೀಗೆಕಾಯಿಯದು. ಬಸವಣ್ಣ ಸ್ಥಾಪಿಸಿಕೊಂಡ ಮಾನವೀಯ ಸಂಬಂಧಗಳನ್ನು ನಾಟಕದಲ್ಲಿ ಆತನ ಪ್ರವೇಶದೊಂದಿಗೆ ಗುರುತಿಸಬಹುದು. ಬಿಜ್ಜಳನ ಭಂಡಾರದ ಕೆಲಸ ಅವನಿಗೆ ಎಷ್ಟು ಮುಖ್ಯವೊ ಕಲ್ಯಾಣದ ಮುದುಕಿ ಗುಡ್ಡೆವ್ವನ ಸಂಸಾರದ ಸುಖ ದುಃಖವೂ ಮುಖ್ಯ. ಜನರಿಗೆ ಬಸವಣ್ಣನ ಕೆಲಸಗಳು ಪವಾಡದಂತೆ ಗೋಚರಿಸುತ್ತವೆ. ಸಹಜ ಮನುಷ್ಯರಂತೆ ಬದುಕಬಯಸುವ ಬಸವಣ್ಣನಿಗೆ ಜನರ ದೃಷ್ಟಿಯಲ್ಲಿ ಹೀಗೆ ದೇವರಾಗುವುದು ಇಷ್ಟವಿಲ್ಲ. ಅನೇಕ ಸಂದರ್ಭಗಳಲ್ಲಿ ಆತ ಮುಜುಗರ ಪಡುತ್ತಾನೆ. ಬಿಜ್ಜಳ ಮತ್ತು ಬಸವಣ್ಣನ ಸಂಬಂಧ ನಮ್ಮ ಚರಿತ್ರೆಯ ರೋಚಕ ಸಂಗತಿಗಳಲ್ಲಿ ಒಂದು.

ಕೊಲೆ ಧರ್ಮ ಮತ್ತು ರಾಜಕಾರಣದ ತಂತ್ರವಾಗಿ 'ತುಘಲಕ್' ಮತ್ತು 'ತಲೆದಂಡ'ದಲ್ಲಿ ಕಾಣಿಸಿಕೊಂಡಿದೆ. ಕೊಲೆಗಳ ಮೂಲಕವೇ ಅಧಿಕಾರಕ್ಕೆ ಬಂದ ಮಹಮ್ಮದ್ ಕೊಲೆಗಳಿಂದಲೇ ಅಧಿಕಾರವನ್ನು ಭದ್ರವಾಗಿಟ್ಟುಕೊಳ್ಳಬಹುದೆಂದು ನಂಬಿದವನು. ಹೀಗಾಗಿ ಶೇಖ್ ಇಮಾಮುದ್ದೀನ್, ಶಿಹಾಬುದ್ದೀನ್, ಮಲತಾಯಿ ಮುಂತಾದವರು ಅವನ ಹತಾಶ ರಾಜಕಾರಣಕ್ಕೆ ಬಲಿಯಾಗುತ್ತಾರೆ. ಬಿಜ್ಜಳ ಕೂಡ ಶರಣರ ಅದನಂಬಿಕೆಗೆ ಒಳಗಾಗಿ ಕೊಲ್ಲಲ್ಪಡುತ್ತಾನೆ. ಎರಡೂ ನಾಟಕಗಳಲ್ಲಿ ಕೊಲೆಯ ಮುಂಚೆ ಹುಟ್ಟಿಕೊಳ್ಳುವ ಆತಂಕ ಒಂದೆಡೆಯಾದರೆ, ನಂತರದ ವಿಷಾದ ಇನ್ನೊಂದೆಡೆ. ದೈಹಿಕವಾಗಿ ಕೊಲ್ಲುತ್ತ ಹೋದವರು ನೈತಿಕವಾಗಿ ತಮ್ಮನ್ನು ತಾವು ಕೊಂದುಕೊಳ್ಳುತ್ತ ಹೋಗುವುದನ್ನು ಇಲ್ಲಿ ಮರೆಯುವಂತಿಲ್ಲ.

ವಿಚಿತ್ರ ಸಂಗತಿಯೆಂದರೆ ಮಹಮ್ಮದನ ರಾಜಕಾರಣದ ತಂತ್ರಗಳು ಅವನನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸುತ್ತವೆ. ಅವನಲ್ಲಿ 'ಜಾಣ್ಮೆ' ಇತ್ತೆ ಹೊರತು 'ವಿವೇಕ' ಇರಲಿಲ್ಲ. ಮನುಷ್ಯತ್ವ ಕಳೆದುಕೊಂಡ ಆತನ ಜಾಣ್ಮೆಯೆಲ್ಲಾ ಅಧಿಕಾರ ಉಳಿಸಿಕೊಳ್ಳುವಲ್ಲಿ ಮತ್ತು ಸೇಡು ತೀರಿಸಿಕೊಳ್ಳುವಲ್ಲಿ ಪೋಲಾಗುತ್ತದೆ. ಆತ ಹೊಸ ಕಾನೂನುಗಳನ್ನು ಸೃಷ್ಟಿಸಿದಂತೆ ಆ ಕಾನೂನುಗಳನ್ನು ಮುರಿಯುವ ಶಕ್ತಿಗಳು ಇನ್ನಷ್ಟು ಪ್ರಬಲಗೊಳ್ಳುತ್ತವೆ. ಆತ ಶಾಂತಿ ಬಯಸಿದಷ್ಟು ಕೊಲೆಗಳು, ವಂಚನೆಗಳು ಇಮ್ಮಡಿಗೊಳ್ಳುತ್ತವೆ. ರಾಜಧಾನಿಯ ವರ್ಗಾವಣೆ ಕಳ್ಳರಿಗೆ ಸುಲಭ ದಾರಿ ತೆರೆದಿದೆ. ಮಹಮ್ಮದನ ಜಾಣ್ಮೆಗೆ ಪ್ರತಿಜಾಣ್ಮೆ ಹೆಣೆಯುವ ಅಜೀಜ್ ಮಹಮ್ಮದನೇ ನಿರ್ಮಿಸಿದ ವ್ಯವಸ್ಥೆಯ ಉತ್ಪಾದನೆಯಾಗಿದ್ದಾನೆ. ಅವನು ನಿರ್ಮಿಸಿದ ವ್ಯವಸ್ಥೆ ಅವನನ್ನೇ ಅಣಕಿಸುತ್ತ ಸಾಗುತ್ತದೆ.

ಬಿಜ್ಜಳನದು ಮಹಮ್ಮದನಿಗಿಂತ ತೀರಾ ಭಿನ್ನವಾದ ಮನಸ್ಥಿತಿ. ಅಷ್ಟು ಬೇಗನೆ ಆತ ಉದ್ವಿಗ್ನಗೊಳ್ಳುವವನಲ್ಲ. ಬಸವಣ್ಣ ಎಷ್ಟೆಲ್ಲಾ ಎದಿರೇಟಿನ ಉತ್ತರ ಕೊಟ್ಟರೂ ಬಿಜ್ಜಳ ಕೋಪಿಸಿಕೊಳ್ಳುವುದಿಲ್ಲ. ಬಸವಣ್ಣನ ಶಕ್ತಿ ಅವನಿಗೆ ಗೊತ್ತು. ಸಾಮ್ರಾಜ್ಯಕ್ಕಾಗಿ ಬಸವಣ್ಣನನ್ನು ಹೇಗೆ ದುಡಿಸಿಕೊಳ್ಳಬೇಕೆಂಬ ವಿವೇಕವೂ ಆತನಿಗಿದೆ. ಮಡ್ಡೂರಿನಲ್ಲಿ ಶರಣರಿಗೂ, ಜೈನರಿಗೂ ಬಡಿದಾಟವಾಗಿದೆ. ಅದನ್ನು ನಿಭಾಯಿಸಲು ಬಸವಣ್ಣನೇ ಯೋಗ್ಯ ಎಂಬುದನ್ನು ಬಿಜ್ಜಳ ಬಲ್ಲ. ಹೀಗಾಗಿ ಅವನನ್ನೆ ಅಲ್ಲಿಗೆ ಕಳುಹಿಸುತ್ತಾನೆ.

ಕುತೂಹಲದ ಸಂಗತಿಯೆಂದರೆ 'ತಲೆದಂಡ'ದಲ್ಲಿ ಬಸವಣ್ಣ ಮತ್ತು ಬಿಜ್ಜಳ ವಿರುದ್ಧ ದಿಕ್ಕಿನ ಪಾತ್ರಗಳಂತೆ ಕಾಣಿಸುವುದಿಲ್ಲ. ಬಸವಣ್ಣನನ್ನು ಒಳಗೊಳಗೇ ಮೆಚ್ಚುವ ಬಿಜ್ಜಳ ಪರಿಸ್ಥಿತಿಯ ಒತ್ತಡದಿಂದ ಕೆಲಕಡೆ ವಿರೋಧ ಸೂಚಿಸುತ್ತಾನೆ. ಒಂದರ್ಥದೊಳಗೆ ನಾಟಕದಲ್ಲಿ ಬಸವಣ್ಣನ ಅನುಯಾಯಿಯಾಗಿ ಕಾಣಿಸಿಕೊಳ್ಳುವ ಜಗದೇವನೆ ಬಸವಣ್ಣನ ವಿರುದ್ಧದ ಪಾತ್ರ. ಜಗದೇವನ ಆತುರ, ಹಿಂಸಾಪ್ರಿಯತೆ ಶರಣ ಚಳುವಳಿ ಒಡಿದ ಗೊಂದಲದ ಮುನ್ಸೂಚನೆಯಂತಿದೆ.

ಬರುಬರುತ್ತಾ ಬಿಜ್ಜಳನ ರಾಜಕಾರಣದ ತಂತ್ರಗಳು ಕೂಡ ವಿಫಲಗೊಳ್ಳುತ್ತವೆ. ಇತ್ತ ಶರಣರಿಗೂ ಸಮಾಧಾನ ಪಡಿಸುವ ಅತ್ತ ವೈದಿಕರನ್ನೂ ಮೆಚ್ಚಿಸುವ ಇಬ್ಬಂದಿತನದಲ್ಲೆ ಆತನ ದುರಂತವಿದೆ. ಕೊನೆಗೆ ಇಬ್ಬರಿಂದಲೂ ಮೋಸ ಹೋಗುತ್ತಾನೆ. ಮಗನ ಹೇಡಿತನ ಖಂಡಿಸುವ ಬಿಜ್ಜಳ ಹೇಡಿ ಮಗನಿಂದಲೇ ಒದೆ ತಿಂದು ಅಧಿಕಾರ ಕಳೆದುಕೊಳ್ಳುವುದು ಚರಿತ್ರೆಯ ವ್ಯಂಗ್ಯಕ್ಕೆ ಸಾಕ್ಷಿ.

ಬಿಜ್ಜಳನ ವ್ಯಕ್ತಿತ್ವ ಅಷ್ಟು ಅಪಾಯಕಾರಿ ಅಲ್ಲ. ಹಿಂಸೆ ಆತನಿಗೆ ಅಷ್ಟಾಗಿ ಹಿಡಿಸದು. ಅನೇಕ ಸಂದರ್ಭಗಳಲ್ಲಿ ಅವನಾಡುವ ಮಾನವೀಯ ಮಾತು ಮತ್ತು ಕೃತಿಗಳನ್ನು ಗಮನಿಸಿದರೆ ಶರಣತ್ವವನ್ನು ಬಿಜ್ಜಳ ಅನುಸರಿಸಲು ಇಷ್ಟವಿಲ್ಲವೆಂದು ಹೇಳಿದರೂ ಅದರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಆತನಿಗೆ ಸಾಧ್ಯವಾಗಿಲ್ಲವೆನಿಸುತ್ತದೆ. ಬಸವಣ್ಣನನ್ನು ಸಂಶಯಿಸುವ ಮಗನನ್ನು ಖಂಡಿಸುವಲ್ಲಿ; "ಬಸವಣ್ಣನ ಲೆಕ್ಕ ಅದು ಬ್ರಹ್ಮಲಿಖಿತ. ಒಮ್ಮೆ ಬರದರೆ ಒಂದಂಕಿ ಅಳಗ್ಯಾಡೂದಿಲ್ಲ. ಅದಕ್ಕ ಭಂಡಾರಿ ಮಾಡೀನವಗ....", ಆಳನ್ನು ಬೆನ್ನಮೇಲೆ ಹತ್ತಿಸಿಕೊಳ್ಳುವಲ್ಲಿ , ಶರಣ ಚಳುವಳಿ ಕುರಿತು ಹೆಂಡತಿಯೊಡನೆ ಆತನಾಡುವ ಮಾತುಗಳು ನಮ್ಮ ಹೃದಯವನ್ನು ಆರ್ದ್ರವಾಗಿ ಕಲಕುತ್ತವೆ.

ಆದರೆ ಮಹಮ್ಮದನ ಸ್ನೇಹಗರಗಸದಲ್ಲಿ ಸುಖವಾಗಿ ಉಳುಕೊಂಡವರು ಕಡಿಮೆ. ಮೊದಲಿನಿಂದಲೂ ಮಾನವೀಯ ನೆಲೆಯಲ್ಲಿ ವರ್ತಿಸುವ ಬರನಿ ಮಹಮ್ಮದನ ಸಾಮೀಪ್ಯದಿಂದಾಗಿ ಕೊನೆಯಲ್ಲಾಡುವ ಹಿಂಸೆಯ ಮಾತುಗಳನ್ನು ಗಮನಿಸಿ; ".... ಆದರೆ ಆ ನೀಚ ಅಗಸ.... ಅವನಿಗೆ ಮಾತ್ರ ಬಹುಮಾನ! ಇದು ಯಾವ ನ್ಯಾಯ? ಕೊಲ್ಲುವದಿದ್ದರೆ ಅವನನ್ನು ಕೊಲ್ಲಬೇಕು. ಅವನ ಔದ್ಧತ್ಯಕ್ಕೆ ದೇಹಾಂತದ ಶಿಕ್ಷೆಯಾದರೂ ಕಡಿಮೆಯೇ. ಅವನನ್ನು ಚೀಲದಲ್ಲಿ ತುರುಕಿ ಕುದುರೆಯ ಕಾಲಿಗೆ ಕಟ್ಟಿ ಓಡಿಸಿದರೂ ಕಡಿಮೆಯೇ. ಅವನ ನಾಲಿಗೆಯನ್ನು ಎಳೆಸಿ, ಕಳವಳಿಸಿ ಕೊಂದರೂ ಕಡಿಮೆಯೇ....." ಈ ಮಾತುಗಳಿಗೆ ಮಹಮ್ಮದನೇ ಅಚ್ಚರಿಗೊಂಡು "ಬರನಿ, ಚಿತ್ರಹಿಂಸೆಯ ಇಷ್ಟು ಪ್ರಕಾರಗಳು ಆ ಅಗಸನಿಗೂ ಗೊತ್ತಿರಲಿಕ್ಕಿಲ್ಲ ನೋಡು" ಎನ್ನುತ್ತಾನೆ.

ಮಹಮ್ಮದನ ಸಾಮೀಪ್ಯಕ್ಕೆ ಬಂದವರು ಒಂದೋ ಅವನ ಆಲೋಚನೆಗೆ ಒಗ್ಗಬೇಕು. ಇಲ್ಲವೆ, ಪ್ರತಿರೋಧ ಸೂಚಿಸಬೇಕು. ಪ್ರತಿರೋಧವ ಸೂಚನೆ ಸಾವನ್ನು ಆಹ್ವಾನಿಸಿದಂತೆ. ಹೀಗಾಗಿ ಇರಲೂ ಸಾಧ್ಯವಾಗದ ಮತ್ತು ಪ್ರತಿಭಟಿಸಲೂ ಆಗದ ಬರನಿ ಸಾಮ್ರಾಜ್ಯವನ್ನೆ ಬಿಟ್ಟು ತೆರಳುತ್ತಾನೆ.

ಅಧಿಕಾರದ ಅಭದ್ರತೆಯಲ್ಲಿ ಮಹಮ್ಮದನ ವ್ಯಕ್ತಿತ್ವ ಎಷ್ಟು 'ಅತೀ'ಗೆ ಹೋಗಿಬಿಟ್ಟಿದೆ ಎಂದರೆ, ಅದನ್ನು ಸುಧಾರಿಸುವ ಪ್ರಯತ್ನಗಳೆಲ್ಲ ವಿಫಲವಾಗಿವೆ. ಮಲತಾಯಿ, ಇಮಾಮುದ್ದೀನ್, ಬರನಿ ಮುಂತಾದವರೆಲ್ಲ ಸುಧಾರಿಸಲು ಯತ್ನಿಸಿ ಕೈಚೆಲ್ಲುತ್ತಾರೆ. ಆತನ ಸುಧಾರಣೆ ಒಟ್ಟು ಪರಿಸ್ಥಿತಿಯ ಸುಧಾರಣೆಯ ಸಂಕೇತವೂ ಹೌದು: ಆದರೆ ಅದರ ಸಾಧ್ಯತೆಗಳೆಲ್ಲ ಮೊಟಕುಗೊಂಡಿವೆ.

ಕಾರ್ನಾಡರ ಈ ಎರಡೂ ನಾಟಕಗಳಲ್ಲಿ ಜನತೆ ಅಂಚಿನ ಸ್ಥಾನದಲ್ಲಿ ನಿಂತುಕೊಂಡಿದ್ದಾರೆ. ಅವರದು ಹೆಚ್ಚಾಗಿ ಕುರಿಮಂದೆಯ ತರಹದ ನಡವಳಿಕೆ. 'ತುಘಲಕ್'ದಲ್ಲಿಯ ಅಗಸ, ಕಳ್ಳ ಕೂಡ ವಂಚನೆಯ ಇನ್ನೊಂದು ಮುಖವಾಗಿ ಬರುತ್ತಾರೆ. ತಲೆದಂಡದಲ್ಲೂ ಅಷ್ಟೆ, ಅವರೇನಿದ್ದರೂ ದೊಂಬಿದಾಸರು. ಅವರು ತಮ್ಮ ಸಾಮೂಹಿಕ ನೈತಿಕ ಶಕ್ತಿಯಿಂದ ಮಹಮ್ಮದ್ ಮತ್ತು ಬಿಜ್ಜಳನ ವ್ಯಕ್ತಿತ್ವದಲ್ಲಿ ಪಲ್ಲಟ ಉಂಟುಮಾಡಬಲ್ಲವರಲ್ಲ. ('ಅಗ್ನಿ ಮತ್ತು ಮಳೆ'ಯಲ್ಲಿ ಜನತೆ ಸೃಜನಶೀಲವಾಗಿ ನಾಟಕದ ಭಾಗವಾಗುವುದನ್ನು ಗಮನಿಸಿ). 'ತುಘಲಕ್' ನಾಟಕದಲ್ಲಿ ಶೋಷಣೆಗೆ ಪಕ್ಕಾದ ಜನ, ತೀವ್ರವಾದ ಬದಲಾವಣೆ ಕಂಡು ತಲ್ಲಣಕ್ಕೊಳಗಾಗುತ್ತಾರೆ. ನ್ಯಾಯಸ್ಥಾನದ ಎದುರು ಕೈಕಟ್ಟಿಕೊಂಡು ನಿಲ್ಲುವ ಅರಸನ ನಡವಳಿಕೆ ಅವರಿಗೆ ಇನ್ನಷ್ಟು ಭಯ ಹುಟ್ಟಿಸುತ್ತದೆ. ಮಹಮ್ಮದನ ಆವೇಶ, ಉನ್ಮಾದದ ಮಾತುಗಳಲ್ಲಿ ಮೈಮರೆತ ಜನ ಅವನೊಳಗಿನ ಹುನ್ನಾರಗಳನ್ನು ಅರಿತುಕೊಳ್ಳುವುದಿಲ್ಲ. ಸಂದಿಗ್ಧತೆಯಲ್ಲಿ ಬದುಕು ಸವೆಸುತ್ತಾರೆ. ಇಲ್ಲವೆ, ಪ್ರತಿಸಂಚು ಹೂಡುವಲ್ಲಿ ನಿರತರಾಗಿದ್ದಾರೆ. ಕಾರ್ನಾಡರ ನಾಟಕಗಳಲ್ಲಿ ಜನತೆಗಿರುವ ಸ್ಥಾನದ ಕುರಿತು ಇನ್ನಷ್ಟು ಸೂಕ್ಷ್ಮ ಚರ್ಚೆ ಅಗತ್ಯ.

ನಾಟಕದ ಭಾಷೆಯ ಕುರಿತು ಎರಡು ಮಾತು: 'ತುಘಲಕ್' ನಾಟಕದ ಕಾವ್ಯಾತ್ಮಕ ಭಾಷೆ ಸಂದರ್ಭಗಳನ್ನು ಹೆಚ್ಚು ನಾಟಕೀಯಗೊಳಿಸಿದೆ. ಮಹಮ್ಮದನ ಸ್ವಗತದ ಮಾತುಗಳಿಗಿರುವ ಶಕ್ತಿ ಅಸಾಧಾರಣವಾದುದು. ಇವು ಆತನ ಮನಸ್ಸಿನ ಗೊಂದಲಗಳನ್ನು ಸರಿಯಾಗಿ ಅಭಿವ್ಯಕ್ತಿಸಿವೆ. ಕೊನೆಯಲ್ಲಿ ಅಝೀಝ್ ಆಡುವ ಮಾತುಗಳಿಗೂ ಈ ಗುಣವಿದೆ. ಮಲತಾಯಿಯ ಭಾಷೆ ಇನ್ನಷ್ಟು ಪರಿಣಾಮಕಾರಿ ಆಗಬೇಕಿತ್ತು. ಆಕೆಯ ದುಗುಡು ದುಮ್ಮಾನಗಳಿಗೆ ಜೀವಂತ ಅಭಿವ್ಯಕ್ತಿಯಿಲ್ಲ.




'ತಲೆದಂಡ'ದ ಬಸವಣ್ಣ-ಬಿಜ್ಜಳರ ಮಾತುಗಳು ಕೂಡ ಕಾರ್ನಾಡರ ಭಾಷಿಕ ಸಾಮರ್ಥ್ಯಕ್ಕೆ ದೊಡ್ಡ ನಿದರ್ಶನ. ಇಲ್ಲಿ ಪ್ರಾದೇಶಿಕ ಭಾಷೆ ಬಳಸಿದ್ದಕ್ಕೆ ಕಾರಣವಿದೆ. ಎಲ್ಲಾ ಜಾತಿ, ಜನಾಂಗಗಳ ಜನ ನಾಟಕದ ಭಾಗವಾಗಿ ಬರುವುದರಿಂದ ಅವರ ವ್ಯಕ್ತಿತ್ವಕ್ಕೆ ತಕ್ಕುದಾದ ಪ್ರಾದೇಶಿಕ ಭಾಷೆ ಅಗತ್ಯವಿತ್ತು. ಗ್ರಾಂಥಿಕ ಅಥವಾ ಕಾವ್ಯಾತ್ಮಕ ಭಾಷೆ ವಸ್ತುವಿನ ಸ್ವರೂಪಕ್ಕೆ ಕೃತಕವೆನಿಸುತ್ತಿತ್ತು. ಈ ಅಪಾಯ ಕೊಂಚ 'ತುಘಲಕ್' ನಾಟಕಕ್ಕಿದೆ. ಅಲ್ಲಿ ಅಗಸ, ಕಳ್ಳ, ಸಂತ, ದೊರೆ, ಮಂತ್ರಿ ಎಲ್ಲರ ಮಾತು ಒಂದೇ ರೀತಿ ಕಾಣಿಸಿದೆ.

ಕಾರ್ನಾಡರು ತಮ್ಮ ಹೊಸ ನಾಟಕ 'ಟಿಪ್ಪೂಸುಲ್ತಾನ ಕಂಡ ಕನಸು' ವಿನ ಮೂಲಕ ಚರಿತ್ರೆಯ ಕೊಂಡಕ್ಕೆ ಇನ್ನೊಮ್ಮೆ ಹಾಯ್ದಿದ್ದಾರೆ. ಹೀಗೆ ಚರಿತ್ರೆಯ ಮುಖೇನ ನಮ್ಮ ಕಾಲದ ವೈರುಧ್ಯಗಳ ನಿರ್ವಚನೆಗೆ ಯತ್ನಿಸುವ ಕಾರ್ನಾಡರ ಪ್ರತಿಭೆ ನಮ್ಮ ನಾಟಕ ಸಾಹಿತ್ಯದ ಅಚ್ಚರಿಗಳಲ್ಲಿ ಒಂದು.

ಸಾಹಿತ್ಯ ಸಂಪದ

- ಜಯದೇವಪ್ಪ ಜೈನಕೇರಿ

ಕವಿಯ ಮನದಲ್ಲಿ ಹುಡುಕಾಟ, ತಲ್ಲಣಗಳಿದ್ದಾಗ ಶ್ರೇಷ್ಠವಾದ ಕಾವ್ಯ ಜನ್ಮತಳೆಯುತ್ತದೆ. ಶ್ರೇಷ್ಠ ಕಾವ್ಯದಲ್ಲಿ ಭಾವ, ಚೆಲುವು ಸೌಂದರ್ಯಗಳು ಮೇಳೈಸಿರುತ್ತವೆ. ಕಾವ್ಯ ನಿಂತ ನೀರಲ್ಲ ಅದು ಚಲನಶೀಲ, ಸದಾ ಹರಿಯುವ ನದಿಯಂತೆ ನಿರ್ಮಲ. ಹೊಸ ಹೊಸ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ ಉತ್ತರವನ್ನು ಹೇಳುತ್ತಾ ಹೋಗುತ್ತದೆ. ಓದುಗರಲ್ಲಿ ರೋಮಾಂಚನವನ್ನುಂಟು ಮಾಡುವುದು ಉತ್ತಮ ಕಾವ್ಯದ ಲಕ್ಷಣ. ಸಾಹಿತಿಯ ಅನುಭವಗಳು ಆತನ ಕಾವ್ಯದಲ್ಲಿ ಹರಳುಗಟ್ಟಿರುತ್ತವೆ. ಕನ್ನಡ ಸಾಹಿತ್ಯ ಅನುಭವ ಸಮೃದ್ಧವಾದದ್ದು. ಅಭಿವ್ಯಕ್ತಿಯ ತಾಜಾತನ, ಸರಳತೆ ಅನನ್ಯವಾದದ್ದು, ಅದ್ಭುತವಾದದ್ದು. ಜಗತ್ತಿನ ಶ್ರೇಷ್ಠ ಸರಳ ಅನುಭಾವ ಕಾವ್ಯಗಳೆಂದರೆ ಶರಣರ ವಚನಗಳು. ಅನುಭಾವ ಮತ್ತು ರಮಣೀಯತೆಗಳ ನಡುವೆ ಸಮನ್ವಯತೆಯನ್ನು ವಚನಗಳಲ್ಲಿ ಕಾಣಬಹುದು. ೧೨ನೇ ಶತಮಾನ ಕನ್ನಡ ಭಾಷಾ ಸಾಹಿತ್ಯದ ಉದಯಕ್ಕೆ ಉಜ್ವಲವಾದ ಕಾಲವಾಗಿತ್ತು.



ಕನ್ನಡ ಸಾಹಿತ್ಯ ಲೋಕದಲ್ಲಿ ಪುನಃ ಅಂತಹ ಕಾಲ ಒದಗಿ ಬಂದದ್ದು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಎನ್ನಬಹುದು. ಕನ್ನಡದ ದಿಗ್ಗಜರುಗಳಾದ ಕುವೆಂಪು, ಪು.ತಿ.ನ., ಬೇಂದ್ರೆ, ಗೋಕಾಕ, ಮಧುರಚೆನ್ನರಂಥ ಶ್ರೇಷ್ಠ ಸಾಹಿತಿಗಳು ಹುಟ್ಟಿಬಂದದ್ದು ಕನ್ನಡದ ಪುಣ್ಯ. ಈಗ ಪುನಃ ಕನ್ನಡ ಸಾಹಿತ್ಯ ಲೋಕದಲ್ಲಿ ನಿರ್ವಾತ ಉಂಟಾಗಿದೆ. ಅಂತಹ ದಿಗ್ಗಜರು ಕಂಡುಬರುತ್ತಿಲ್ಲವೆಂಬುದು ಕಟುವಾದರೂ ಸತ್ಯ ಸಂಗತಿ. ಉತ್ತಮ ಸಂಸ್ಕೃತಿಯ ನಿರ್ಮಾಣವೇ ಸಾಹಿತ್ಯದ ಪರಮ ಪ್ರಯೋಜನವೆಂದು ಈ ದಿಗ್ಗಜರು ಅರಿತಿದ್ದರು. ಕಾವ್ಯದ ಓದಿನಿಂದ ಸಂಸ್ಕಾರ, ಸಹೃದಯತೆಗಳು ದಕ್ಕುವಂತಾಗಬೇಕೆಂಬುದು ಅವರ ನಿಲುವು ಆಗಿತ್ತು. ಸೂಕ್ಷ್ಮಮತಿಯಾದ ಸಹೃದಯನು ಕೈಗೊಳ್ಳುವ ವಿಹಾರ ಯಾತ್ರೆ ಎಂದರೆ, ಕಾವ್ಯವಾಚನ ಮತ್ತು ಕಾವ್ಯ ರಸಾಸ್ವಾದನೆ ಎಂಬ

ನಂಬಿಕೆ ದಟ್ಟವಾಗಿತ್ತು. ಕಾವ್ಯಸೃಷ್ಟಿ ಒಂದು ಅಂತರಂಗದ ಕ್ರಿಯೆ, ರಹಸ್ಯಕ್ರಿಯೆ. ಕವಿ ಸ್ವಪ್ರತಿಭೆಯಿಂದ ಸೃಷ್ಟಿಸಿದ ಕಾವ್ಯದ ಅಂತರಂಗ ತಿಳಿಯಲು, ಸೂಕ್ಷ್ಮಗಳನ್ನು ಅರಿಯಲು, ಅಧ್ಯಯನ ಮತ್ತು ಗುಣಗ್ರಾಹಿತ್ವಗಳು ಅಗತ್ಯ. ಕಾವ್ಯದಲ್ಲಿ ರಸಾಸ್ವಾದಕ್ಕೆ ಹೆಚ್ಚಿನ ಮಹತ್ವ. ಸಜ್ಜನಿಕೆ ಔದಾರ್ಯಗಳು ಸಾಹಿತಿಯ ಸುಪ್ತ ಪ್ರತಿಭೆಯನ್ನು ಅರಳಿಸುತ್ತವೆ. ಈ ಕಾರ್ಯವನ್ನು ನಮ್ಮ ನವೋದಯ ಕವಿಗಳು ಸಮರ್ಥವಾಗಿ ಮಾಡಿದ್ದಾರೆ. ಕನ್ನಡ ಕಾವ್ಯಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ಕವಿಗಳ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಮತ್ತು ಸಂಸ್ಕೃತ ಕಾವ್ಯದ ಪ್ರಭಾವವನ್ನು ಕನ್ನಡದ ಸಂದರ್ಭಕ್ಕೆ ಒದಗಿಸಿಕೊಳ್ಳುವುದರಲ್ಲಿ ಸಫಲರಾಗಿದ್ದಾರೆ.

ಎಲ್ಲ ಕ್ಷೇತ್ರಗಳಲ್ಲಿರುವಂತೆ ಸಾಹಿತ್ಯ ಕ್ಷೇತ್ರದಲ್ಲೂ ಸ್ಪರ್ಧೆ ನುಸುಳಿದೆ. ಆರೋಗ್ಯಕರ ಸ್ಪರ್ಧೆಯಾದರೆ ಕನ್ನಡದ ಅಭಿವೃದ್ಧಿಗೆ ಪೂರಕ. ಆದರೆ ಅದು ಅಸಹಜ, ಅನಾರೋಗ್ಯಕರ ಸ್ಪರ್ಧೆ ಆದರೆ, ಪ್ರಶಸ್ತಿ, ಪುರಸ್ಕಾರಗಳಿಗಾಗಿ ನಡೆಯುವ ಲಾಬಿ ಆದರೆ, ಕನ್ನಡ ಭಾಷೆಗೆ ಗೌರವ ಸಿಗಲಾರದು. ಸಾಹಿತಿಗೂ ಜನರ ಪ್ರೀತಿಯಿಂದ ವಂಚಿತರಾಗುವ ಸಂಭವವಿರುತ್ತದೆ. ಉತ್ತಮ ಸಾಹಿತ್ಯ ಸೃಷ್ಟಿಗೆ ಜೀವನಾನುಭವ ಮತ್ತು ನಿರ್ಲಿಪ್ತತೆಯ ಅಗತ್ಯತೆ ಇದೆ. ಪ್ರತಿಷ್ಠೆಗಾಗಿ, ಕೀರ್ತಿಗಾಗಿ ಆತುರ ಪಡದೆ ನಿರಂತರ ಅಧ್ಯಯನ, ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಳ್ಳಬೇಕಾಗುತ್ತದೆ. ಈ ಕಾರ್ಯದಲ್ಲಿ ಕನ್ನಡ ಪ್ರೀತಿ ಮತ್ತು ಶ್ರದ್ಧೆಗಳೂ ಪ್ರಮುಖವಾಗುತ್ತವೆ. ಒಂದು ಕೃತಿ ಸಮಕಾಲೀನರ ಅವಜ್ಞೆಗೆ ಗುರಿಯಾದರೆ ಸಾಹಿತಿಯ ಸೃಜನಶೀಲತೆಗೆ ಹಿನ್ನಡೆ ಉಂಟಾಗುತ್ತದೆ. ಗಂಭೀರ ಚಿಂತನೆಗೆ ಒಳಗಾದ ಕೃತಿ ಮತ್ತು ಕೃತಿಕಾರ ಜನಮನ್ನಣೆಗೆ ಪಾತ್ರನಾಗುತ್ತಾನೆ. ನಿರ್ಲಿಪ್ತತೆ ಮತ್ತು ತನ್ಮಯತೆಯಿಂದ ಸೃಷ್ಟಿಯಾದ ಒಂದು ಚಿಕ್ಕ ಕವಿತೆಯೂ ಕೃತಿಕಾರನಿಗೆ ಅಪಾರ ಪ್ರೀತಿ, ಜನಮನ್ನಣೆ ತರಬಲ್ಲದು. ಅಂತರಂಗದ ತುಮುಲಗಳನ್ನು ನೋವು ನಲಿವುಗಳನ್ನು ದ್ವಂದ್ವಗಳನ್ನು ಎಲ್ಲ ಕಾಲಗಳಲ್ಲಿಯೂ ಕವಿ ಕವನಿಸುತ್ತಲೇ ಬಂದಿದ್ದಾನೆ. ಯಾವುದು ಅನುಭವಗಮ್ಯವೋ, ಅದನ್ನು ಮತ್ತೊಂದು ಹೃದಯಕ್ಕೆ ತಲುಪಿಸುವ ಕಾರ್ಯ ಕವಿಯಿಂದ ಮಾತ್ರ ಸಾಧ್ಯ.

ಯಾಂತ್ರೀಕೃತ ನಗರ ಜೀವನದ ಎದುರಾಗಿ ಗ್ರಾಮೀಣ ಪರಿಸರದ ಪ್ರಕೃತಿ, ಪ್ರೀತಿ ತುಂಬಿದ ಜೀವನ ವಿಧಾನದ ಮುಖಾಮುಖಿ, ಕವಿಯ ಪ್ರಿಯವಸ್ತು. ಪ್ರಕೃತಿಯನ್ನು ಬಣ್ಣಿಸಿ ದಣಿದ ಕವಿ ಯಾರೂ ಇರಲಾರರು. ಅದು ನಿತ್ಯ ನೂತನ, ಹಿಂದೂ, ಇಂದೂ, ಮುಂದೂ ಸಹ. ಇಹದ ಬದುಕಿನ ಕುರಿತ ಪ್ರಬುದ್ಧ ಚಿಂತನೆ, ಸಂಕ್ಷಿಪ್ತತೆ, ಜೀವಪರ ನಿಲುವು, ಕಲೆಗಾರಿಕೆ ಕಾಲದೇಶಗಳನ್ನು ದಾಟಬಲ್ಲ ಶಕ್ತಿಯುತ ಸಾಲುಗಳು, ಕವಿತೆಗೆ ಮಹತ್ವದ ಆಯಾಮವನ್ನು ನೀಡುತ್ತವೆ. ನಿರ್ಲಿಪ್ತತೆ ಮತ್ತು ಶ್ರದ್ಧೆಗಳು ಪರಸ್ಪರ ವಿರೋಧಿಗಳಂತೆ ಕಂಡರೂ, ಅವುಗಳನ್ನು ಪರಸ್ಪರ ಪೂರಕವಾಗಿ ಬಳಸಿಕೊಳ್ಳಬೇಕಾದ ಅನಿವಾರ್ಯತೆ ಕವಿಗಿದೆ. ಸೃಜನಶೀಲ ಕವಿಗೆ ಸೂಕ್ಷ್ಮತೆ ಜೊತೆಗೆ ಚಿಕಿತ್ಸಕ ಮನೋಧರ್ಮವಿರಬೇಕು. ಅನ್ಯರನ್ನು ದ್ವೇಷಿಸುವ, ದೂರುವ, ವಾತಾವರಣವನ್ನು ಕಲುಷಿತಗೊಳಿಸುವವರು ಸಾಹಿತ್ಯ ಸೃಷ್ಟಿಗೆ ಮಾರಕರಾಗುತ್ತಾರೆ. ಹೃದಯದಿಂದ ಹೃದಯಕ್ಕೆ ಸಹನೆ, ಕರುಣೆಗಳನ್ನು ತಲುಪಿಸುವ ಸೇತುವೆಯಾಗಬೇಕು ಸಾಹಿತ್ಯ. ಸಾಹಿತಿ ತನಗೆ ಅನಿಸಿದ್ದನ್ನೆಲ್ಲ ಬರೆಯಲಾಗದು. ತಾನು ಹೇಳಬೇಕಾಗಿರುವುದನ್ನು ಬರವಣಿಗೆಯ ತಂತ್ರಗಾರಿಕೆಯನ್ನು ಬಳಸಿಕೊಂಡು, ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸಬೇಕು. ಕ್ರಮಬದ್ಧ ಶೈಲಿ ಮತ್ತು ಕಸುಬುದಾರಿಕೆಗಳು ಶ್ರೇಷ್ಠ ಸಾಹಿತಿಯ ಮಾನದಂಡಗಳು, ಸಾಮಾಜಿಕ ಕಳಕಳಿ, ಜೀವಪರ ನಿಲುವುಗಳು ಸಾಹಿತ್ಯದಲ್ಲಿ ಬಿಂಬಿತವಾಗಬೇಕು. ನವೋದಯ ಮತ್ತು ನವ್ಯದ ಕಾಲಕ್ಕಿಂತ ಈಗ ಹೆಚ್ಚು ಪ್ರತಿಭೆಗಳು ಸಾಹಿತ್ಯ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿವೆ. ಆದರೆ ಹೊಸತನ್ನು ಸ್ವೀಕರಿಸಲಿಕ್ಕೆ ಹೊರಟ ನವೋದಯದ ವಿಮರ್ಶಕರ ಬೆರಗಾಗಲಿ ಅಥವಾ ಅತ್ಯಾಧುನಿಕತೆಗೆ ಹಾತೊರೆಯುತ್ತಿದ್ದ ನವ್ಯ ಕಾಲದ ವಿಮರ್ಶಕರ ಉತ್ಸಾಹವಾಗಲಿ

ಈಗ ಕಾಣಿಸುತ್ತಿಲ್ಲ ಎನ್ನಬಹುದು. ಬಂಡಾಯ ನವ್ಯ, ನವ್ಯೋತ್ತರ ಮುಂತಾದ ಯಾವುದೇ ಪ್ರಕಾರಗಳಿಗೆ ಅಂಟಿಕೊಳ್ಳದೆ, ಕನ್ನಡಭಾಷೆ ನಮ್ಮ ಮಾತೃಭಾಷೆ, ಜೊತೆಗೆ ಸಂಸ್ಕೃತಿಯ ಕೊಂಡಿಯೂ ಹೌದು, ಎಂಬ ಭಾವನೆಯಿಂದ ಸೃಜನಶೀಲ ಸಾಹಿತ್ಯ ರೂಪುಗೊಳ್ಳಬೇಕು. ಸಾಹಿತ್ಯ ಸೃಷ್ಟಿಗೆ ಸಂವೇದನೆಗಳು ಮುಖ್ಯವೇ ಹೊರತು, ಸಾಹಿತ್ಯ ಪ್ರಕಾರವಲ್ಲ ಎಂಬ ಎಚ್ಚರ ಸಾಹಿತಿಗಿರಬೇಕಾಗುತ್ತದೆ.

ಜನಪ್ರಿಯ ಕವಿಗಳು ಪ್ರಾಮಾಣಿಕವಾಗಿ ಬರೆಯುವುದರಿಂದ ಎತ್ತರಕ್ಕೆ ಬೆಳೆಯಲು ಸಾಧ್ಯ. ಕೇವಲ ಜನಮನ್ನಣೆಗಾಗಿ ಬರೆಯುವವರು ಅಪ್ರಮಾಣಿಕರಾಗುವ ಸಾಧ್ಯತೆಗಳಿರುತ್ತವೆ. ಜನ ಸಂಪರ್ಕ, ಉತ್ಸಾಹ, ಪ್ರತಿಭೆಗಳು ಆರೋಗ್ಯಕರ ಸಂಸ್ಕೃತಿಗೆ ಪೂರಕವಾಗಿರುತ್ತವೆ. ಕನ್ನಡದ ಸಂದರ್ಭದಲ್ಲಿ ಹಲವಾರು ಕವಿಗಳು ತಮಗೆ ತೀವ್ರವಾದುದನ್ನು ಜನರಿಗೆ ತಲುಪುವಂತೆ ಬರೆಯುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ. ಆಯಾ ಕಾಲಕ್ಕೆ ಪ್ರಸ್ತುತ ಎನಿಸುವ, ತನಗೆ ಸರಿ ಎನಿಸಿದ್ದನ್ನು ಅಭಿವ್ಯಕ್ತಿಸುವ ಧೈರ್ಯ ಕವಿಗಿರಬೇಕಾಗುತ್ತದೆ. ತನ್ನನ್ನು ತಾನು ನಂಬಿ ಬರೆಯುವ ಸಾಹಿತಿ ಓದುಗರಿಗೂ ಆಪ್ತನಾಗುತ್ತಾನೆ. ಯುವ ಮನಸ್ಸುಗಳನ್ನು ಆಕರ್ಷಿಸುತ್ತಲೇ ಕನ್ನಡವನ್ನು ಎಲ್ಲ ರೀತಿಯಲ್ಲಿಯೂ ಬೆಳೆಸುವ ಆಸಕ್ತಿ ಲೇಖಕನಿಗಿರಬೇಕು. ಕಾವ್ಯರಸಾಸ್ವಾದನೆಗೆ ಯಾವುದೇ ಸಂಕೋಚ, ಮಿತಿಗಳು ಇರುವುದಿಲ್ಲ, ರಸಿಕ ಮನಸ್ಸಿಗೆ ಮುದ ನೀಡುವುದೇ ಕಾವ್ಯದ ಉದ್ದೇಶ. ಜೀವನದುದ್ದಕ್ಕೂ ಪಡೆದ ಅನುಭವಗಳನ್ನು ಸಮೃದ್ಧವಾಗಿ ಬಳಸಿಕೊಂಡು, ವೈವಿಧ್ಯಮಯ ಪ್ರಯೋಗಗಳೊಂದಿಗೆ ನಿರಂತರ ಅನುಸಂಧಾನ ಮತ್ತು ಸಂವಾದ ನಡೆಸುತ್ತಾ, ಸೃಷ್ಟಿಯಾದ ಕಾವ್ಯ ಸೃಜನಶೀಲವಾಗಿ ಯಶಸ್ಸು ಪಡೆಯುತ್ತದೆ. ಸಹೃದಯ ಕವಿಯ ಮಹತ್ವಾಕಾಂಕ್ಷೆ, ಮಹತ್ವವಾದದ್ದನ್ನು ಸಾಧಿಸಬೇಕೆಂಬ ಹಂಬಲ, ಹೊಸದನ್ನು ಸೃಷ್ಟಿಸಬೇಕೆಂಬ ತುಡಿತಗಳು, ಮಹಾಕಾವ್ಯದ ರಚನೆಗೆ ಕಾರಣವಾಗುತ್ತವೆ. ಸೃಜನಶೀಲ ಮತ್ತು ಸಂವೇದನಾಶೀಲ ವ್ಯಕ್ತಿಗಳು ತಮ್ಮ ಪರಿಸರಕ್ಕೆ, ಸಮಕಾಲೀನ ಸಂದರ್ಭದ ಆಗುಹೋಗುಗಳಿಗೆ ತೋರುವ ಪ್ರತಿಕ್ರಿಯೆಗಳು ಸಹಜವಾಗಿಯೇ ಬದುಕನ್ನು ಅರ್ಥೈಸಿಕೊಳ್ಳುವ ಮನೋಧರ್ಮದೊಂದಿಗೆ ಒಳ್ಳೆಯದನ್ನು ಸ್ವೀಕರಿಸುವ ಸಹನೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಭಾಷೆ ಮತ್ತು ಸಂಸ್ಕೃತಿಯ ಪ್ರೀತಿಗೆ ಭಾವನಾತ್ಮಕ ನಿಲವು ತಳೆಯಬೇಕಾಗುತ್ತದೆ. ಅವುಗಳ ಹಿರಿಮೆಗೆ ಕುಂದುಂಟಾಗುವ ಸಂದರ್ಭಗಳಲ್ಲಿ ಪ್ರತಿಭಟಿಸುವ ಧೈರ್ಯ ಕೆಚ್ಚು ಸಾಹಿತಿಗಿರಬೇಕು. ಕನ್ನಡ ಸಂಸ್ಕೃತಿಗೆ ಸಂವೇದನಾಶೀಲ ಸಂಶೋಧಕ ಬುದ್ಧಿ ಪೂರಕವಾಗಿರಬೇಕು.

ಜಾಗತೀಕರಣ, ಉದಾರೀಕರಣ; ಇಂಟರ್‌ನೆಟ್‌ಗಳ ಭರಾಟೆಗಳ ನಡುವೆ ಕನ್ನಡ ಸಂಸ್ಕೃತಿ ಮತ್ತು ಭಾಷೆಗಳು ಆತಂಕವನ್ನೆದುರಿಸುತ್ತಿವೆ. ಸೃಜನಶೀಲತೆ, ವೈಚಾರಿಕತೆಗಳು ತತ್ತರಿಸುತ್ತಿರುವ ಸಂಧಿಕಾಲದಲ್ಲಿದ್ದೇವೆ. ಸ್ವಾತಂತ್ರ್ಯಾನಂತರ ಹಲವು ಚಳುವಳಿಗಳನ್ನು ಎದುರಿಸಿರುವ ಕನ್ನಡ ಸಾಹಿತ್ಯ, ಸಮೃದ್ಧವಾಗಿ ವೈವಿಧ್ಯಮಯವಾಗಿ ಪ್ರಕಟಗೊಳ್ಳುತ್ತಿದೆ. ಆದರೆ ಕಾವ್ಯಪ್ರತಿಭೆ ನಿಂತ ನೀರಾಗಿದೆ. ಹೊಸ ಕನಸುಗಳ ವಿಸ್ಮಯಗಳ ಹುಡುಕಾಟದಲ್ಲಿ ಸಾಹಿತಿಗಳಿದ್ದಾರೆ. ಮಹತ್ವಾಕಾಂಕ್ಷೆಯ ಮಹಾಕಾವ್ಯಗಳ ಸೃಷ್ಟಿಯೂ ಸ್ಥಗಿತಗೊಂಡಿದೆ. ಹೊಸಮಾರ್ಗದ ನಿರೀಕ್ಷೆಯಲ್ಲಿ ಕಾವ್ಯಗಳ ಸೃಷ್ಟಿಗಾಗಿ ಕಾವ್ಯಾಸಕ್ತರು ಎದುರು ನೋಡುತ್ತಿದ್ದಾರೆ. ಪ್ರತಿಯೊಂದು ಪ್ರಾದೇಶಿಕ ಆಡುನುಡಿಗೂ ಒಂದು ಅವ್ಯಕ್ತ ಕ್ರಮವಿರುತ್ತದೆ. ಪ್ರಾದೇಶಿಕ ಸೊಗಡನ್ನು ಬಳಸಿ ಸೃಷ್ಟಿಸುವ ಸಾಹಿತ್ಯ ಓದುಗರಿಗೆ ಆಪ್ತತೆಯನ್ನು ತರುತ್ತದೆ. ಪ್ರತಿಯೊಬ್ಬ ಕವಿಗೂ ತನ್ನದೇ ಆದ ನಿರೂಪಣಾ ಕ್ರಮವೂ ಇರುತ್ತದೆ. ಹಲವು ಪ್ರತೀಕಗಳ ಮೂಲಕ ಹಿಡಿದಿಡುವ ಕಾವ್ಯ ಹೃದಯಕ್ಕೆ ಹತ್ತಿರವಾಗುತ್ತದೆ. ಇಂತಹ ಸಾಹಿತ್ಯದ ಹುಟ್ಟಿಗೆ ಕವಿಯ ಪರಿಸರ, ಅದಕ್ಕೆ ಹಿನ್ನೆಲೆಯಾದ ಆತನ ಮನೆಯ ಸಾಹಿತ್ಯಿಕ ವಾತಾವರಣ ಮತ್ತು ಪ್ರಕಾಶನದ ಅವಕಾಶಗಳು ಕಾರಣವಾಗುತ್ತವೆ. ತಾನು ರಚಿಸಿದ ಕವಿತೆ ಓದುಗರ ಕೈಗಳಿಗೆ, ಕಿವಿಗಳಿಗೆ ತಲುಪಬೇಕೆಂಬ ಹಂಬಲ ಪ್ರತಿಯೊಬ್ಬ ಕವಿಗೂ ಇರುತ್ತದೆ.

ಕವಿಗೂ ಕಾವ್ಯಕ್ಕೆ ಬಿಡಿಸಲಾಗದ ನಂಟು. ಕವಿ ಕವಿತೆಯ ಜೀವ ಸೆಲೆಯನ್ನು ನಿರಂತರವಾಗಿ ಕಾಪಾಡಿಕೊಳ್ಳಬೇಕು. ಪ್ರತಿಭೆ ಆಕಸ್ಮಿಕವಾಗಿ ಇಂಗಿ ಹೋಗುವುವಂಥದಲ್ಲ. ಮೈ ಮನಸ್ಸು ಕಣ್ಣುಗಳನ್ನು ಸದಾ ಚುರುಕಾಗಿ ಇಟ್ಟುಕೊಂಡು, ಸಮರ್ಥವಾಗಿ ಕಾವ್ಯ ಸೃಷ್ಟಿ ಕಾರ್ಯ ನಡೆಯುತ್ತಿರಬೇಕು. ಪುನಃ ಪುನಃ ಓದಿ ಪರಿಷ್ಕರಿಸಬೇಕು. ಅನುಭವ ಪ್ರಪಂಚ ವಿಶಾಲವಾದಂತೆ ಪ್ರೌಢ ಕಾವ್ಯ ಮೈದಳೆಯುತ್ತದೆ. ಹದಿಹರೆಯದ ಮನಸ್ಸುಗಳು ತೀವ್ರವಾಗಿ ಸಂಭ್ರಮಿಸಿ, ಸ್ಪಂದಿಸಿದಾಗ ಸೊಗಸಾದ ಕಾವ್ಯ ಸೃಷ್ಟಿ ಸಾಧ್ಯ. ಜೊತೆಗೆ ಪ್ರಾಮಾಣಿಕ ಅಭಿವ್ಯಕ್ತಿ ಕೂಡಿದರೆ ಕಾವ್ಯ ಖಿಷಿ ಕೊಡುತ್ತದೆ. ಕನ್ನಡ ಕಾವ್ಯ ಪರಂಪರೆಯೊಂದಿಗಿನ ನಿರಂತರ ಸಂವಾದ ಸೃಜನಶೀಲ ಸಾಹಿತ್ಯ ಸೃಷ್ಟಿಗೆ ಹೊಸ ಆಯಾಮವನ್ನು ನೀಡಬಲ್ಲದು. ಯುವ ಕವಿಗಳು ಸಾಹಿತಿಗಳು ಈ ದಿಕ್ಕಿನಲ್ಲಿ ಚಿಂತಿಸಬೇಕಾದ ಅಗತ್ಯ ಎಂದಿಗಿಂತಲೂ ಈಗ ಹೆಚ್ಚಾಗಿದೆ.

ಸಾಹಿತಿಯ ಬದುಕಿನ ನೋವುಗಳು ತಲ್ಲಣಗಳು ಸೃಜನಶೀಲ ಪ್ರೇರಣೆಗಳನ್ನು ಪೋಷಿಸಿಕೊಂಡು ಬಂದ ಸ್ಥಾಯೀ ಭಾವ ಎನ್ನಬಹುದು. ಆದರೆ ಸೃಜನಶೀಲ ಅನುಭವಗಳ ಹಿಂದೆ ಸಾಹಿತಿಯ ಜೀವನೋಲ್ಲಾಸ, ಪ್ರೀತಿ ಸೌಂದರ್ಯಪ್ರಜ್ಞೆ, ಕಲ್ಪನೆಯ ಹಂಬಲಗಳು ಇರುತ್ತವೆ. ಈ ಹಂಬಲಗಳ ಘರ್ಷಣೆ, ಬದುಕಿನ ವಾಸ್ತವವೂ ಹೌದು. ಸಾಹಿತ್ಯ ಯಾ[illegible] ಒಂದು ವರ್ಗದ, ಜಾತಿಯ ಸ್ವತ್ತಲ್ಲ, ಅದೊಂದು ಸಹೃದಯ ಸಂಸ್ಕಾರ, ಭಾವನಾತ್ಮಕ ವ್ಯವಹಾರ, ಅಂತರಂಗದ ಆರ್ದ್ರತೆ, ಪ್ರತಿಭೆ ಇರುವವರನ್ನು ಅದು ಕೈ ಬೀಸಿ ಕರೆಯುತ್ತದೆ. ಕಾವ್ಯ ವಿವಿಧ ಕಾಲಘಟ್ಟಗಳಲ್ಲಿ ಅನೇಕ ಚಳುವಳಿಗಳ ಮೂಲಕ ಪ್ರಭಾವಿತವಾಗಿದೆ. ಕಳೆದ ಶತಮಾನದ ಆದಿಯಲ್ಲಿ ನೂರಾರು ಕವಿಗಳು ಏಕಕಾಲಕ್ಕೆ ವಿವಿಧ ಮಗ್ಗಲುಗಳಿಂದ ಕನ್ನಡ ಸಾಹಿತ್ಯ ಲೋಕವನ್ನು ಪ್ರವೇಶಿಸಿದರು. ವಿದ್ಯಾಭ್ಯಾಸದ ಅನುಕೂಲತೆಗಳು ಹೆಚ್ಚಿದಂತೆ ಸಾಹಿತ್ಯ, ಸಂಗೀತ, ಕಲೆಗಳು ಅಂದಿನ ಯುವಕರನ್ನೂ ಆಕರ್ಷಿಸಿದವು. ಪೇಟೆ ಪಟ್ಟಣ ವಾಸಿಗಳು ಮಾತ್ರವಲ್ಲ ಗ್ರಾಮಾಂತರ ಪ್ರದೇಶದಲ್ಲಿ ಅಲ್ಪಸ್ವಲ್ಪ ವಿದ್ಯೆ ಪಡೆದವರೂ ರಾಮಾಯಣ ಮಹಾಭಾರತಗಳ ಜತೆಗೆ ಆಧುನಿಕ ಸಾಹಿತ್ಯದತ್ತ ಒಲವು ಬೆಳೆಸಿಕೊಂಡರು. ಸ್ವಾತಂತ್ರ್ಯನಂತರವೂ ಕವಿತೆ ನವೋದಯ, ನವ್ಯ, ನವ್ಯೋತ್ತರ, ಬಂಡಾಯ ಎಂಬ ವಿವಿಧ ಕಾಲಘಟ್ಟಗಳಲ್ಲಿ ಓದುಗರ ಅಂತರಂಗವನ್ನು ಅರಳಿಸುತ್ತ ಬಂದಿದೆ.

ಕವಿತೆ ಸರಳವಾಗಿರಬೇಕು, ಜನ ಸಾಮಾನ್ಯರಿಗೂ ಅರ್ಥ ತಿಳಿಯುವಂತಿರಬೇಕು, ಎಂಬ ಭಾವನೆ ಇದ್ದಿತು. ಪಂಡಿತರ ಸ್ವತ್ತಾಗಿದ್ದ ಕಾವ್ಯ, ಸಾಮಾನ್ಯರ ಬಳಿಗೆ ಬರುವಂತಾಗಿದ್ದು ಕನ್ನಡ ಸಂದರ್ಭದ ಬಹುಮುಖ್ಯ ಬೆಳವಣಿಗೆ. ಇಂದಿಗೂ ಕಾವ್ಯವನ್ನು ಎಲ್ಲರೂ ಪ್ರೀತಿಸಲಾರರು, ಕಾವ್ಯದ ಸತ್ವವನ್ನು ಎಲ್ಲರೂ ಅರಿಯಲಾರರು, ರಸಾಸ್ವಾದನೆಗೆ ಸಹೃದಯ ಸಂಸ್ಕಾರ ಬೇಕಾಗುತ್ತದೆ. ಹಣವಂತರು, ಮೇಲ್ವರ್ಗದವರು ಕಾವ್ಯದಿಂದ ಎಲ್ಲಾ ಕಾಲಗಳಲ್ಲೂ ದೂರ ಇರುತ್ತಾರೆ. ಅವರ ಮನರಂಜನೆಯ ಮಾಧ್ಯಮಗಳೇ ಬೇರೆ. ಇನ್ನು ಕಡುಬಡವರು, ಅನಕ್ಷರಸ್ಥರು, ಕಾವ್ಯ ಸಾಹಿತ್ಯಗಳ ಬಳಿ ಸುಳಿಯಲಾರರು. ಅವರ ಆದ್ಯತೆಗಳೇ ಬೇರೆ. ಹೊಟ್ಟೆ ತುಂಬಿಸಿಕೊಳ್ಳುವುದೇ ಹೋರಾಟವಾದವರಿಗೆ ಕಾವ್ಯ ರಸಸ್ವಾದನೆ ಅಸಂಗತವಾಗಿ ಕಾಣುತ್ತದೆ. ಭಾರತೀಯ ಸಂದರ್ಭದಲ್ಲಿ ಇಂತಹವರ ಮನರಂಜನೆ ಎಂದರೆ ಅಗ್ಗದ ಸಿನಿಮಾಗಳು ಮತ್ತು ಸಂಭೋಗ ಮಾತ್ರ. ಸಾಹಿತ್ಯ ಸಂಗೀತ, ಕಲೆ ಮುಖ್ಯವಾಗಿ ಮಧ್ಯಮ ವರ್ಗದವರ ಮಾಧ್ಯಮ. ಕವಿತೆ ಓದುವುದು, ಹಾಡುವುದು, ಕಾವ್ಯ ಚರ್ಚೆ, ಕಾವ್ಯ ರಚನೆ, ಕಾವ್ಯವಾಚನಗಳಿಂದ ಜೀವನದ ಸಂತೋಷವನ್ನು ಕಾಣುತ್ತಾರೆ. ಪುಸ್ತಕ ಸಂಸ್ಕೃತಿಯನ್ನು ಜೀವಂತವಾಗಿರುವವರಲ್ಲಿ ಮಧ್ಯಮ ವರ್ಗದವರ ಪಾಲು ಹೆಚ್ಚಿನದು. ಕವಿಗಳು ಹುಟ್ಟಿ ಬರುವುದೂ ಬಹುಪಾಲು ಮಧ್ಯಮ ವರ್ಗದಿಂದಲೇ ಎನ್ನಬಹುದು. ಪ್ರೀತಿಗೆ, ಒಲಿದವರಿಗೆ, ಸಹೃದಯರಿಗೆ ಸಂತೋಷ ಕೊಡುವುದು ಕವಿತೆ, ಸಾಹಿತ್ಯ, ಸಂಗೀತ, ಕಲೆಗಳು. ವಿಚಾರ ಪೂರ್ಣವಾದ ಸಾಹಿತ್ಯ ಸರಳವಾಗಿ ಓದಿಸಿಕೊಳ್ಳುತ್ತದೆ. ಓದುಗರಿಗೆ ಸಂತೋಷ, ನೆಮ್ಮದಿ ನೀಡುತ್ತದೆ. ಸಾವಿರಾರು ವರ್ಷಗಳಿಂದ ಬಳಸಿದ ಅವೇ ಅಕ್ಷರಗಳು, ಅವೇ ಮಾತುಗಳನ್ನು ಬಳಸಿ ಹೊಸದಾಗಿ ಕಾವ್ಯ ಕಟ್ಟಬೇಕು. ಅವರಿವರ ಮಾತುಗಳು, ಪದಕಟ್ಟುಗಳು ಸೇರಿದರೂ ಹೊಸ ಅರ್ಥ ಸ್ಫುರಿಸುವ ಕಾವ್ಯ ಅಪ್ತವಾಗುತ್ತದೆ.

ರವಿ ಕಾಣದ್ದನ್ನು ಕವಿ ಕಾಣುತ್ತಾನೆ ಎಂಬ ಮಾತಿದೆ. ಕೆಲವೊಮ್ಮೆ ಇದ್ದದ್ದೂ ಕಾಣಿಸುವುದಿಲ್ಲ. ಮತ್ತೆ ಕೆಲವು ಬಾರಿ ಇಲ್ಲದ್ದೂ ಕಾಣಿಸುತ್ತದೆ. ಏನೂ ಕಾಣಿಸದಿದ್ದಾಗ ಮತ್ತೇನೋ ಕೇಳಿಸಿದಂತಾಗುತ್ತದೆ. ಮಹತ್ವದ್ದೇನೋ ರೂಪುಗೊಳ್ಳುತ್ತದೆ. ಗೊಂದಲಗಳ ಮಧ್ಯೆ ಸೃಜನಶೀಲ ಸೃಷ್ಟಿ ಕಾರ್ಯ ನಿರಂತರವಾಗಿ ನಡೆಯುತ್ತಿರುತ್ತದೆ. ಕಾವ್ಯವೆಂದರೆ, ಅಂತರಂಗದ ಧ್ವನಿ, ರುಚಿಗಳ ಸ್ವಾದ, ಶಬ್ದಗಳ ತರಂಗ, ಇಂದ್ರಿಯಗಳಿಗೆ ಪುಳಕ. ಬದುಕಿನಲ್ಲಿ ನೋವು, ನಿರಾಶೆ ಆತಂಕಗಳು ಸಹಜ, ಇವುಗಳನ್ನು ಪರಿಣಾಮಕಾರಿಯಾಗಿ ಬೌದ್ಧಿಕವಾಗಿ ಎದುರಿಸಲು ಸಾಹಿತ್ಯ ಸಹಕಾರಿಯಾಗುತ್ತದೆ. ಈ ಕಾರಣಕ್ಕಾಗಿ ಕಾವ್ಯ ಎಲ್ಲ ಕಾಲಗಳಲ್ಲಿಯೂ, ಎಲ್ಲರಿಗೂ ಪ್ರಿಯವಾದ ಮಾಧ್ಯಮ. ಬದುಕನ್ನು ಕುರಿತು ನಿಜವಾಗಿ ಚಿಂತಿಸುವ ಚಿಂತನಶೀಲ ವ್ಯಕ್ತಿ ಎಂದರೆ ಕವಿಯೇ. ಜೀವನವನ್ನು ಬದುಕಲು ಸಹ್ಯವಾಗಿಸುವ ಶಕ್ತಿ ಸಾಹಿತಿಗೆ ಸಾಹಿತ್ಯಕ್ಕೆ ಇದೆ. ಪರಂಪರಾಗತ ನಂಬಿಕೆಗಳು, ರೂಢಿಗಳು ಅಪ್ರಸ್ತುತವಾದಾಗ ಅವುಗಳ ವಿರುದ್ಧ ಲೇಖನಿ ಹಿಡಿದವರು ಹನ್ನೆರಡನೇ ಶತಮಾನದ ಶರಣರು. ಕಾವ್ಯ ಉರಿಯುವ ಕೊಳ್ಳಿಯಲ್ಲ, ಬೆಳಕು ನೀಡುವ ದೀವಿಗೆ. ನೋವಿಲ್ಲದ ಸಾವಿಲ್ಲದ, ಅಳಲಿಲ್ಲದ, ಅಳಿವಿಲ್ಲದ ಆತ್ಮಸ್ವರವೆಂದರೆ ಆನಂದಭಾವ, ಚಿಂತನಶೀಲ ಕವಿ ಸದಾಕಾಲ ತನ್ನ ಸುತ್ತ ಆತ್ಮಾನಂದದ ಸ್ವರವನ್ನು ಬಿತ್ತಲು ಬಯಸುತ್ತಾನೆ. ಮಾನವರಲ್ಲಿನ ಮಾನವೀಯತೆಯನ್ನು ಜಾಗೃತಗೊಳಿಸಲು ಕವಿ ಪ್ರಯತ್ನಿಸುತ್ತಾನೆ. ಕವಿ ಕದನ ಕುತೂಹಲಿ ಅಲ್ಲ, ಅವನು ಸದಾಕಾಲ ಕಾವ್ಯ ಕುತೂಹಲಿ.

ಡಾ. ಪಂಚಾಕ್ಷರಪ್ಪ ಹಂಪ್ಲೋಳ್‌ರವರ ಎರಡು ಕವಿತೆಗಳು

ಕಾವು

ಮೂರು ನಾಲ್ಕರವನಿದ್ದಾಗ
ಗೊಣ್ಣೆ ತೆಗೆದು ಮಾಸಿದ್ದನ್ನು
ಮಡಿ ಮಾಡುವುದಕ್ಕೆ
ಅಕ್ಕ-ತಂಗಿ ಬೇಕಾಗಿತ್ತು



ಆರು ಏಳರವನಿದ್ದಾಗ
ಇದ್ದದನ್ನು ಇಲ್ಲದನ್ನು
ಅಕ್ಕಪಕ್ಕದ ಮನೆಯಿಂದ
ತಂದು ತಿಂದು- ತೇಗಿಸುವುದಕ್ಕೆ
ಅಮ್ಮ - ಚಿಕ್ಕಮ್ಮ ಬೇಕಾಗಿತ್ತು

ಹತ್ತು ಹನ್ನೊಂದರವನಿದ್ದಾಗ
ಓರಗೆಯವರಲಿ ಚಿನ್ನಿ, ಗೋಲಿ, ಚಂಡಿನ
ಜಗಳದಲಿ ನನ್ನ ಸೈನ್ಯದವರಾಗಿ
ಅಣ್ಣಾ - ತಮ್ಮ ಬೇಕಾಗಿತ್ತು

ಎರಡನ್ನೆರಡಾಗುವಾಗ
ಅಪಾದ ಮಸ್ತಕದವರಿಗೂ
ಹಣದಭಿಷೇಕ ಮಾಡಲು
ಅಪ್ಪ - ಚಿಕ್ಕಪ್ಪ ಬೇಕಾಗಿತ್ತು.

ಆದರೆ ಇಂದು ಮೀಸೆ ಬಂದು
ಬಯಕೆಯ ಹುಚ್ಚು ಹೊಳೆಯಲಿ
ಕೊಚ್ಚಿ ಹೋಗುವಾಗ
ಅನ್ಯರಲಿ ಜನಿಸಿದ ಅಂಗನೆ
ಮೈಗೆ ಮೈ ತಾಕಿಸಿ ಏನೇನೊ ಪಿಸುಗುಟ್ಟಿ
ಮನದ... ಕಾವಲಿ...ಗೆ
ಬಿಸಿಯುಸಿರ ತಾಗಿಸಿದಾಗ,
ಮೇಲಿನವರ ನೆನಪೆಲ್ಲಾ
ಬೆಣ್ಣೆಯಂತೆ ಕರಗಿ
ಅವಳ ಮಾತೇ
ಸಕ್ಕರೆಯ ಸವಿಯಂತಾಗಿತ್ತು.

ಕೊಟ್ಟದ್ದು



ದಾರಿಗಿರಲೆಂದು ಬುತ್ತಿಯ
ಕಟ್ಟಿಕೊಂಡು ಹೊರಟೆ;
ಸ್ವಲ್ಪ ದೂರದಲಿ
ಹಸಿದ ದಾರಿಗನೊಬ್ಬ ಬೇಡಿದ
ಇರಲೆಂದು ಒಂದು
ಹಿಡಿ ಕೊಟ್ಟೆ.
ಕೊಂಚ ನಡೆದ ನಂತರ
ಹಸಿವಾಗಿ ಗಂಟು ಬಿಚ್ಚಿದೆ
ಕಂಡದ್ದು
ಹಿಡಿ ಮುತ್ತು-ರತ್ನ.


- ಡಾ. ಪಂಚಾಕ್ಷರಪ್ಪ, ದಾವಣಗೆರೆ

ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು

- ಎಂ. ವೆಂಕಟಸ್ವಾಮಿ

ಭಾರತ-ಪಾಕಿಸ್ತಾನ ವಿಭಜನೆಯಾಗಬಾರದಿತ್ತು. ಹಾಗೆ ನೋಡಿದರೆ ಅದಕ್ಕಿಂತ ಮುಂಚೆ ಹಿಂದೂ ಮುಸ್ಲಿಂ ಎಂಬ ಧರ್ಮಗಳು ಹುಟ್ಟಬಾರದಿತ್ತು. ಒಂದು ದೇಶ ಸಮೃದ್ಧವಾಗಿದೆ ಎಂದರೆ ಅದು ಧರ್ಮಗಳಿಂದಲ್ಲ... ಅವರ ಶ್ರಮ, ಶಿಸ್ತು, ಪ್ರೀತಿ, ಭ್ರಾತೃತ್ವದಿಂದ ಎನ್ನುವುದು ಸತ್ಯ. ಅರಿಸ್ಟಾಟಲ್‌ಗೆ ಚರ್ಚ್ ಜನ ವಿಷ ಕುಡಿಸಿದರು ಎಂದರೆ ಆ ಕಾಲದಲ್ಲಿ ಜನ ಬೌದ್ಧಿಕವಾಗಿ, ವೈಜ್ಞಾನಿಕವಾಗಿ ಹಿಂದುಳಿದಿದ್ದರು ಎನ್ನುವುದೇ ಅರ್ಥ. ಅಯೋಧ್ಯೆ - ಬಾಬ್ರಿ ಮಸೀದಿ ಎಂದು ಪ್ರಸ್ತುತ ಕಿತ್ತಾಡುತ್ತಿರುವುದು ಅದೇ ಸಂಕೇತ.

ಪ್ರಪಂಚದಾದ್ಯಂತ ಇಂದು ಬೆಂಕಿ ಹೊತ್ತಿಸಿರುವ ಅಮೆರಿಕಾ ತನ್ನ ಪ್ರೀತಿಯ WTO ಕಟ್ಟಡಗಳು ಉರುಳಿದಾಗ ಹೇಗೆ ಬಡಬಡಿಸಿತು ಎನ್ನುವುದು ಎಲ್ಲರಿಗೂ ತಿಳಿದಿದೆ. ಅದೇ ಅಮೆರಿಕಾ ಪ್ರಪಂಚದಾದ್ಯಂತ ಇಂದು ತನ್ನ ಶಕ್ತಿ ಪ್ರದರ್ಶಿಸಲೆಂದು ಸರ್ವಾಧಿಕಾರಿಯಾಗಿ ಮೆರೆಯುತ್ತಿದೆ. 'ಹಿಂದೂಧರ್ಮ, ಸನಾತನಧರ್ಮ; ಎಲ್ಲರನ್ನು ಪ್ರೀತಿಸುವ ಧರ್ಮ; ಅಧ್ಯಾತ್ಮಿಕತೆ ತುಂಬಿ ತುಳುಕಾಡುತ್ತಿರುವ ಧರ್ಮ' ಎಂದು ಈಗ ಎಲ್ಲೆಲ್ಲೂ ಪ್ರಚಾರ ನಡೆಯುತ್ತಿದೆ. ನೂರಾರು ಸಾವಿರಾರು ವರ್ಷಗಳ ಹಿಂದಿನಿಂದ ಇಂದಿನವರೆಗೂ ಈ ದೇಶದಲ್ಲಿ ಮನುಷ್ಯರ ನಡುವೆ ಯಾವ ರೀತಿಯ ಸಂಬಂಧಗಳಿದ್ದವು ಎನ್ನುವುದು ಕೆಲವರಿಗಾದರು ಗೊತ್ತಿರುವ ವಿಷಯವೆ ಆಗಿದೆ. ಹೀಗೆ ಮಾತನಾಡುವವರೆಲ್ಲ ಈಗ ಹಿಂದೂ ಧರ್ಮದ ವಿರೋಧಿಗಳು, ಪ್ರಗತಿಪರ ಮುಸ್ಲಿಂ ಚಿಂತಕರನ್ನೂ ಕೂಡ ಅನುಮಾನಿಸುವ ಸಂದರ್ಭವಿದೆ. ಹೀಗಾಗಿ ಇಬ್ಬರ ಗತಿಯೂ ಒಂದೇ ಆಗಿದೆ. ಇದೆಲ್ಲ ಈಗ ಏಕೆ..? ಎನ್ನುವ ಗುಮಾನಿ ನಿಮಗೆ ಬಂದಿದ್ದರೆ ಡಾ. ಸರಜೂ ಕಾಟ್ಕರ್ ಅನುವಾದಿಸಿ, ಲೋಹಿಯಾ ಪ್ರಕಾಶನ ಹೊರತಂದಿರುವ



ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು ಎಂಬ ಕವನ ಸಂಕಲನವನ್ನು ಓದಿದಾಗ ಮೇಲಿನ ಪ್ರಶ್ನೆಗಳೆಲ್ಲ ಸಹಜವಾಗಿಯೆ ಕಾಡುತ್ತವೆ.

ಪಾಕಿಸ್ತಾನದಲ್ಲೂ ಮಾನವೀಯತೆ ಮೆರೆವ ಯುದ್ಧ ವಿರೋಧಿ ನಿಲುವಿನ ನೂರಾರು ಕವಿಗಳಿರಬಹುದು. ಹದಿನೆಂಟು ಕವಿಗಳ ಇಪ್ಪತ್ತು ಕವಿತೆಗಳಿರುವ ಈ ಪುಟ್ಟ ಕೃತಿಯನ್ನು ಓದಿ ಮುಗಿಸಿದಾಗ ನಮ್ಮನ್ನು ಹಲವು ಪ್ರಶ್ನೆಗಳು ಕಾಡುತ್ತವೆ. ಕವಿತೆಗಳು ಸರಳ ಮತ್ತು ನೇರವಾಗಿ ಮೂಡಿಬಂದಿದ್ದು ಸಂಕಲನದ ಮೊದಲ ಕವಿತೆ ಹೀಗೆ ಪ್ರಾರಂಭವಾಗುತ್ತದೆ:

ಜಿಹಾದ್ ಹೆಸರಿನಲಿ
ಯುದ್ಧಕ್ಕೆ ಹೊರಟ ನನ್ನ ಗೆಳೆಯರೇ
ಬಂದೂಕನ್ನು ಎತ್ತುವ ಮೊದಲು
ನನಗೆ ಕೆಲವೆ ನಿಮಿಷಗಳನ್ನು ನೀಡಿರಿ - ಎಂದು ಆಹ್ವಾನ ನೀಡುತ್ತದೆ.

ಈ ಕೃತಿಯಲ್ಲಿರುವ ಕೆಲವು ಮುಖ್ಯ ಸಾಲುಗಳು ಮುಂದುವರಿಯುವುದು ಹೀಗೆ:

ಬೆರಳೆಣಿಕೆಯಷ್ಟಿರುವ ಒಂದಿಷ್ಟು ಜನರು
ಜೀವನೋತ್ಸಾಹ ತುಂಬಿ ತುಳುಕುತ್ತಿರುವ
ಎರಡೂ ದೇಶಗಳನ್ನು ಅಪಹರಿಸಿ ಬಿಟ್ಟಿದ್ದಾರೆ.
ಅವರು ರಾಮನ ಹೆಸರಿನಲ್ಲಿ
ಇವರು ಅಲ್ಲಾಹುನ ಹೆಸರಿನಲ್ಲಿ
ಮಂದಿರ ಮಸೀದಿ ಕೆಡವಿದರು
ಇವರಿಗೆ ಅಲ್ಲಾಹು ಸಿಗಲಿಲ್ಲ.
ಅವರಿಗೆ ರಾಮನು ಸಿಗಲಿಲ್ಲ.
ಈಗಲೇ ಗೆಳೆಯರೆ ಈಗಲೇ
ಈ ನದಿಯ ನೀರು ಕುಡಿದು
ಮನದಣೆಯ ನೀರಾಟ ಆಡಿ
ಸಂತೋಷ ಪಡಿ
ಯಾಕೆಂದರೆ ಇನ್ನಷ್ಟು ಹೊತ್ತಿನಲ್ಲಿ
ಈ ಗಾಳಿ ನೀರು, ಬಂದೂಕು
ಗುಂಡು ತೋಪುಗಳ ಹೊಗೆಯಿಂದ
ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಲಿದೆ...
ನಮ್ಮ ಮಕ್ಕಳ ಹೊಟ್ಟೆ ಬಟ್ಟೆ ಕಟ್ಟಿ
ಮಿಸ್ಸೈಲ್ ತಯಾರು ಮಾಡುತ್ತೇವೆ...
ನೆಲವೆಲ್ಲ ಬೂದಿರಾಶಿಯಾಗಿ
ಸ್ಮಶಾನವಾಗಿ ಮಾರ್ಪಾಡಾಯಿತು...

- ಹೀಗೆ ಅನೇಕ ಸಾಲುಗಳು ತಮ್ಮ ಅಸಹಾಯಕತೆಯನ್ನು ತೋಡಿಕೊಳ್ಳುತ್ತವೆ. ಈ ಘೋರವನ್ನು

ಯಾರಾದರೂ ತಡೆಯಬಲ್ಲರೆ? ಕೊನೆಗೆ ರಾಮ... ಅಲ್ಲಾಹು.., ಹೂಂ...ಹು ಯಾರೂ ತಡೆಯಲಾರರು. ಈ ನೆಲದ ಮೇಲೆ ಅಣುಬಾಂಬ್‌ಗಳು ಬಿದ್ದರೆ... ಜೈವಿಕ ಸಮರ ನಡೆದರೆ... ಮೇಲಿನ ಪ್ರಶ್ನೆಗಳನ್ನು ಕೇಳುವುದಕ್ಕಾಗಲಿ, ಹೇಳುವುದಕ್ಕಾಗಲಿ ಯಾರೂ ಉಳಿದಿರುವುದಿಲ್ಲ. ಈ ಭೂಮಿ ಈಗಾಗಲೆ ಇಥಿಯೋಪಿಯ ಚಚೆನಿಯಾ ಹಿರೋಷಿಮ ನಾಗಾಸಾಕಿ ಅಫ್ಘಾನಿಸ್ತಾನಗಳನ್ನು ನೋಡಿ ಬಸವಳಿದು ಹೋಗಿದೆ. ಮನುಷ್ಯರಿಗೆ ಸಮಸ್ತವನ್ನು ನೀಡಿರುವ ಈ ಏಕೈಕ ವಸುಂಧರೆಯನ್ನು ಈ ಧರ್ಮಾಂಧರ ಕೈಯಿಂದ ನಾವೆಲ್ಲರು ಸೇರಿ ಹೇಗಾದರು ಬಿಡಿಸಿಕೊಳ್ಳಬೇಕಿದೆ.

ಇನ್ನು ಕವಿತೆಗಳ ಗಟ್ಟಿತನದ ಬಗ್ಗೆ ಹೇಳಬೇಕಾದರೆ ಯಾವುದೇ ಒಂದು ಕವಿತೆಯ ಗಟ್ಟಿತನ, ಸ್ವಾರಸ್ಯ ಕಾಲಾಂತರದಲ್ಲಿ ಸಡಿಲವಾಗುತ್ತ ಹೋಗುತ್ತದೆ ಎನ್ನುವ ಗುಮಾನಿ ನನಗಿದೆ. ಉದಾ: ಪಾಬ್ಲೊ ನೆರೂಡನ ಕವಿತೆಗಳು ಮತ್ತು ತೆಲುಗಿನ ದಿಗಂಬರ ಕವಿತೆಗಳನ್ನು ಪ್ರಸ್ತುತ ಓದಿದಾಗ ಹಾಗೆ ಅನ್ನಿಸದೆ ಇರುವುದಿಲ್ಲ. ಪ್ರಪಂಚದಲ್ಲಿ ಪ್ರಸ್ತುತ ಚಲಾವಣೆಯಲ್ಲಿರುವ ನಯ ನಾಜೂಕಿನ ಭಾಷೆಗಳಲ್ಲಿ ಉರ್ದು ಕೂಡ ಒಂದು. ಒಬ್ಬನೆ ಕವಿ ಒಂದೇ ವಿಷಯದ ಮೇಲೆ ಬರೆದಂತೆ ತೋರುವ ಈ ಕವಿತೆಗಳನ್ನು ಸರಜೂ ಕಾಟ್ಕರ್ ನೇರವಾಗಿ ತರ್ಜುಮೆ ಮಾಡಿದಂತೆ ತೋರುವುದಿಲ್ಲ. ಅದಕ್ಕೆ ಈ ಸಾಲುಗಳೆ ಸಾಕ್ಷಿ.

ಈ ದೇಶದ ಹಸಿವು ಬತ್ತಲಿನ ನಾವು
ಮತ್ತು ಆ ದೇಶದ ಹಸಿವು ಬತ್ತಲಿನ ಅವರು...
ರಾಸ್ ಪರ್ವತ ಬಿಳಿಯ ಬಟ್ಟೆ
ಕಫನ್‌ನಂತೆ ಮೈ ಮೇಲೆ ಜಗ್ಗಿ

ಸತ್ತುಹೋಯಿತು... ಇತ್ಯಾದಿ ವಿವರಗಳು. ಜೊತೆಗೆ ಈ ಪುಟ್ಟ ಕೃತಿಯಲ್ಲಿ ಅಲ್ಲಲ್ಲಿ ಮುದ್ರಾರಾಕ್ಷಸನ ಹಾವಳಿಯೂ ಇದೆ. ಇದನ್ನು ಪಕ್ಕಕ್ಕಿಟ್ಟು ನೋಡಿದರೂ ಪುಸ್ತಕ ಅಂದವಾದ ಹೊದಿಕೆಯಿಂದ ಚೆನ್ನಾಗಿ ಮೂಡಿ ಬಂದಿದೆ.

ಇಲ್ಲಿ ಕವಿತೆಗಳು ಸೋಲನ್ನು ಕಂಡಿವೆಯೊ ಗೆಲುವನ್ನು ಕಂಡಿವೆಯೊ ಎನ್ನುವುದು ಪ್ರಶ್ನೆಯಲ್ಲ, ಮಾನವೀಯ ಮನಸ್ಸುಗಳು ಎಲ್ಲೆಲ್ಲೂ ಇರುತ್ತವೆ ಎಂಬುವುದಕ್ಕೆ ಸಾಕ್ಷಿ ಸಿಕ್ಕುತ್ತದೆ. ಮಾರ್ವಾಡಿಯಾಗಿ ಅಮೆರಿಕಾ ಹೊತ್ತಿಸಿರುವ ಜಾಗತೀಕರಣವೆಂಬ ಬೆಂಕಿಯಲ್ಲಿ ಪ್ರಪಂಚವೆ ನರಳುತ್ತಿದೆ. ಭಾರತದೊಂದಿಗೆ ಪರಸ್ಪರ ದ್ವೇಷಿಗಳಂತೆ ಕಚ್ಚಾಡುತ್ತಿರುವ ನೆರೆಯ ಪಾಕಿಸ್ತಾನದಿಂದ ಮನುಷ್ಯರನ್ನು ಪ್ರೀತಿಸುವ ಕವಿತೆಗಳ ಗೊಂಚಲು ಹೊರಬಂದಿರುವುದು ಸಂತೋಷ. ಇದು ಯುದ್ಧಭೂಮಿಯಲ್ಲಿ ಒಂದು ಘಳಿಗೆ ತಂಗಾಳಿ ಬೀಸಿದಂತಾಗಿದೆ. ಪಾಕಿಸ್ತಾನದಲ್ಲಿ ಇರುವಂತೆ ಭಾರತದಲ್ಲೂ ಲಕ್ಷಾಂತರ ಶಾಂತಿಪ್ರಿಯರು ಇದ್ದಾರೆ. ಅದನ್ನು ನೆರೆಯ ಬಾಯಿಗಳಿಗೆ ತಿಳಿಸಬೇಕಾದರೆ ನಮ್ಮ ಕವಿಗಳು, ಕಲಾವಿದರು ಬುದ್ಧಿಜೀವಿಗಳು ಸೇರಿ ಒಂದು ಓಡಿ ಕವಿತೆಯ ಗೊಂಚಲನ್ನು ಅವರ ಕಡೆಗೂ ಮೊಗೆದು ಕೊಡಬೇಕಿದೆ. ಹಾಗೆ ಎರಡೂ ದೇಶಗಳ ನಡುವೆ ಸಾಹಿತ್ಯ ಸಾಂಸ್ಕೃತಿಕ ವಿನಿಮಯ ಮೆರೆಯಬೇಕಾಗಿದೆ. ಯುದ್ಧವಿರೋಧಿ ನಿಲುವುಗಳನ್ನು ಜನಸಾಮಾನ್ಯರಿಗೂ ಮುಟ್ಟಿಸಲು ಕವಿ ಕಲಾವಿದರ ಪಾತ್ರ ಬಹಳ ಮಹತ್ವದ್ದು. ಆದರೆ ರಾಜಕೀಯದ ಹುನ್ನಾರಿನಲ್ಲಿರುವ ಎರಡೂ ದೇಶಗಳ ನಾಯಕತ್ವಕ್ಕೆ ಸಾಂಸ್ಕೃತಿಕ ಕಾಳಜಿ ಮಹತ್ವವಾಗಬೇಕಲ್ಲವೆ? ಇಷ್ಟಾಗ್ಯೂ ಯುದ್ಧ ದಾಹವನ್ನು ಹಾಗೂ ಅದರಿಂದ ಮುಂದೆ ನಡೆಯುವ ಘೋರವನ್ನು ತಪ್ಪಿಸಲು ಎಲ್ಲರೂ ಸೇರಿ ಶ್ರಮಿಸಬೇಕಿದೆ.


ಪ್ರತಿಕ್ರಿಯೆಗೊಂದು ಮರು ಟಿಪ್ಪಣಿ:

ಪುಸ್ತಕ ಬರೆದ ಮೇಲೆ ನಮ್ಮ ಪಾಡು

- ದೇಶ ಕುಲಕರ್ಣಿ

'ಅನ್ವೇಷಣೆ'ಯ ೬೫ನೆಯ ಸಂಚಿಕೆಯಲ್ಲಿ ಡಾ. ಎಸ್.ವಿ. ಪ್ರಭಾವತಿಯವರು ಬರೆದ ಪ್ರತಿಕ್ರಿಯೆಯನ್ನು ಓದಿದ ಮೇಲೆ ನಾನೂ ಕೆಲವು ಮಾತು ಹೇಳಬೇಕೆನಿಸಿ ಈ ಟಿಪ್ಪಣಿಯನ್ನು ಬರೆಯುತ್ತಿದ್ದೇನೆ. ಆ ಪ್ರತಿಕ್ರಿಯೆಯ ಮೂರನೆಯ ಪ್ಯಾರಾ ಮಾತ್ರ ನನ್ನ ಪ್ರಸ್ತುತ ವಿಷಯ.

ಪ್ರಕಟಿತ ಪುಸ್ತಕ ಗ್ರಂಥಾಲಯ ಇಲಾಖೆಯಿಂದ ಖರೀದಿಗೆ ಆಯ್ಕೆಯಾದ ಮೇಲೆ ವಿತರಣೆಗೆ ಎರಡು ವಿಧಾನವಿದೆ. ಒಂದನೆಯದು ಪ್ರಭಾವತಿ ಹೇಳಿದಂತೆ ಮಧ್ಯವರ್ತಿಗಳಿಗೆ ಪ್ರತಿಶತ ೫೦ ರಂತೆ ಪುಸ್ತಕ ಒಪ್ಪಿಸುವುದು. ಈ ಮಧ್ಯವರ್ತಿಗಳಿಗೆ ಎಲ್ಲಿಲ್ಲದ ಪ್ರಭಾವ ಇರುತ್ತದೆ. ಆದರೆ ನಮ್ಮೆಲ್ಲರ ಪುಸ್ತಕಗಳನ್ನೂ ಅವರು ತೆಗೆದುಕೊಳ್ಳಬೇಕಲ್ಲ! ತೆಗೆದುಕೊಂಡರೂ ನಮಗೆ ಸಲ್ಲಬೇಕಾದ ರೊಕ್ಕ ಯಾವಾಗ ಬರುತ್ತದೋ ಯಾರು ಬಲ್ಲರು? ಅದಕ್ಕಾಗಿ ಎಷ್ಟು ಸೈಕಲ್ಲು ತುಳಿಯಬೇಕೋ?



ಎರಡನೆಯ ವಿಧಾನ ರಾಜ್ಯದ ಎಲ್ಲ ೪೩ (ಬಹುಶಃ ಹೆಚ್ಚು) ಗ್ರಂಥಾಲಯಗಳಿಗೆ ಅಹವಾಲು ಬರೆದು ನನ್ನ ಪುಸ್ತಕ ಆಯ್ಕೆಯಾಗಿದೆ; ದಯಮಾಡಿ ಖರೀದಿಸಿ ಎಂದು ಅಂಗಲಾಚಿಕೊಳ್ಳುವುದು. ಆ ಗ್ರಂಥಾಲಯಗಳು ಜವಾಬು ಕೊಟ್ಟರೆ ನಮ್ಮ ಪೂರ್ವಜನ್ಮದ ಸುಕೃತ. "ಕೂಡಿಕೊಂಡ ಸಾಲು" ಎಂಬ ನನ್ನ ಕವನ ಸಂಕಲನ ಈ ಪ್ರಯೋಗಕ್ಕೆ ಒಳಗಾದಾಗ ಕೇವಲ ೫ ಗ್ರಂಥಾಲಯಗಳಿಂದ ಕರೆ ಬಂತು, ಎಷ್ಟೋ ಕಾಲ ಸಂದ ಬಳಿಕ; ಅದಾಗಿ ಮತ್ತಷ್ಟು ಕಾಲ ಸಂದಮೇಲೆ ಪಾವತಿ ಬಂತು. ಈ ವಿಧಾನಕ್ಕೆ ನನ್ನ ನಾಟಕ 'ಪಾರುಪತ್ಯ'ವನ್ನು ಒಳಪಡಿಸಿ ಎರಡು ವರ್ಷವಾಯಿತು! ಎರಡೇ ಎರಡು ಗ್ರಂಥಾಲಯಗಳು ಕೆಲವು ಪ್ರತಿಗಳನ್ನು ಕೇಳಿದುವು. ನಿಯತವಾಗಿ ಜ್ಞಾಪಕ ಪತ್ರಗಳನ್ನು ಎಲ್ಲ ಗ್ರಂಥಾಲಯಗಳಿಗೂ ಕಳಿಸಿದುದರ ಫಲ ಇದು.

ನಮ್ಮಂಥವರು ಅಚ್ಚು ಹಾಕಿಸುವದು ೫೦೦ ಪ್ರತಿಮಾತ್ರ. ಇದರಲ್ಲಿ ಸುಮಾರು ೨೦೦ ಪ್ರತಿ ಉಚಿತವಾಗಿ ಕನ್ನಡದ ವಿದ್ವನ್ಮಣಿಗಳಿಗೆ ಮೀಸಲು.

ಇಲ್ಲವಿದ್ದರೆ ಅವರಿಗೆ ಗೊತ್ತಾಗುವ ಬಗೆ ಹೇಗೆ? ಬೆಂಗಳೂರಿನ ಅಂಗಡಿಗಳಲ್ಲಿ ೫೦ ಪ್ರತಿ ಹೋಗಬಹುದು ಎಂದು ಪ್ರಭಾವತಿ ಹೇಳಿದ್ದಾರಷ್ಟೆ? ಒಂದಿಷ್ಟು ನನ್ನ ಅನುಭವವನ್ನು ಕೇಳಿ:

ಕವನ ಸಂಕಲನದ ಎರಡೇ ಎರಡು ಪ್ರತಿ ಕೊಳ್ಳಿರಿ ಎಂದು ಬಳೇಪೇಟೆಯ ಖ್ಯಾತ ಬುಕ್‌ಸ್ಟಾಲಿನ ವರ್ತಕರನ್ನು ಕೇಳಿದಾಗ ಆತ, ಇವನ್ನೆಲ್ಲ ನೀವು ಯಾಕೆ ಮಾಡುತ್ತೀರಿ? ಇದು ನಿಮ್ಮ ಕೆಲಸ ಅಲ್ಲ. ಯಾವುದಾದರೂ ಕಾದಂಬರಿ ಬರೆದು ಕೊಡಿ, ಅದೂ ಹೆಣ್ಣುಮಕ್ಕಳ ಹೆಸರಿನಲ್ಲಿ, ನಾನು ಪ್ರಕಟಿಸುತ್ತೇನೆ! ಎಂದು ಉರಿದುಬಿದ್ದು ಕಳಿಸಿಬಿಟ್ಟರು. ಪೇಟೆಯ ಇನ್ನೊಂದು ಅಂಗಡಿಯಲ್ಲಿ ವಿಮರ್ಶಾಸಂಗ್ರಹವನ್ನು ಕೊಡಲು ಹೋದಾಗ, ನಮ್ಮ ಪ್ರಕಟಣಾಲಯದ ಅನುಮತಿ ಬೇಕು ಎಂದ. ಅನುಮತಿ ಪಡೆಯಲು ಅಲ್ಲಿಗೆ ಧಾವಿಸಿದಾಗ, ವಿಕ್ರಿ ಇದಕ್ಕೆಲ್ಲ ಇಲ್ಲಿಗೆ ಬರುತ್ತೀರ. ಅಲ್ಲಿಗೇ ಹೋಗಿ ಎಂದು ಅಪ್ಪಣೆ ಕೊಡಿಸಿದ. ಕಡೆಗೆ ಆ ಅಂಗಡಿಯಲ್ಲಿ ಪುಸ್ತಕ ಇರಿಸಿ ಬಂದದ್ದಾಯಿತು. ಇಷ್ಟೆಲ್ಲವೂ ಜುಜುಬಿ ಎರಡು ಪ್ರತಿಗಾಗಿ. ಅಂಗಡಿಯವರು ಹೇಳಿದಂತೆ ಆರು ತಿಂಗಳು ಬಿಟ್ಟು ಹೋದೆ. ಪುಸ್ತಕವನ್ನು ಕಾಣುವಂತೆ ಇರಿಸಿದರೆ ತಾನೆ ಯಾರಾದರೂ ನೋಡಿಕೊಳ್ಳುವದು? ನೂರಾರು ಪುಸ್ತಕಗಳ ಅಡಿಯಲ್ಲಿ ನನ್ನ ಪುಸ್ತಕವನ್ನು ಹೂತು ಹಾಕಿದ್ದರು. ಅಯೋಧ್ಯೆಯ ನೆಲವನ್ನು ಅಗೆದಂತೆ, ಬಗೆದು ಬಗೆದು ನನ್ನ ಪ್ರತಿಗಳನ್ನು ವಾಪಸ್ಸು ಪಡೆದೆ. ಬಸವನಗುಡಿಯ ಒಂದು ಪ್ರಸಿದ್ಧ ಮಳಿಗೆಯಲ್ಲಿ ಈಚಿನ ನನ್ನ ಕವನ ಸಂಗ್ರಹ ಕೊಡಲು ಹೋದಾಗ ಅದರ ಮಾಲೀಕರು ಕಪಾಟನ್ನು ತೋರಿಸುತ್ತ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿರುವ ಕಾವ್ಯವೇ ಹೋಗಿಲ್ಲ, ನೋಡಿ ಎಂದು ಒಪ್ಪಿಸಿದರು. ನನ್ನ ಕವನ ಸಂಗ್ರಹ ನನ್ನಲ್ಲೇ ಉಳಿಯಿತು. ಅದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಮಾತ್ರ ಬಂದಿತ್ತು.

ನಾನು ಯಾವಾಗಲೂ ಅಚ್ಚು ಹಾಕಿಸುವುದು ೫೦೦ ಪ್ರತಿ ಮಾತ್ರ. ಯಾರದೋ ಬುದ್ಧಿ ಮಾತು ಕೇಳಿ ನಾನು ಜೆಪ್ಪನಾಗಿ ಒಮ್ಮೆ ಕವನ ಸಂಗ್ರಹವೊಂದನ್ನು ೬೦೦ ಪ್ರತಿ ಮಾಡಿಸಿಬಿಟ್ಟೆ. ಗ್ರಂಥಾಲಯದ ಆಜ್ಞೆ ಸುದ್ದಿಯಿಲ್ಲ. ಸರಿ ಹಿತೈಷಿಯೊಬ್ಬರು ಶಾಸಕ ಭವನದ ಆವರಣದಲ್ಲಿ ಇರುವ ಮಳಿಗೆಗೆ ಹೋಗಿ ನಾನು ಹೇಳಿದೆ ಅಂತ ಹೇಳಿ ೩೦ ಪ್ರತಿ ಕೊಡಿರಿ. ತಿಂಗಳೊಪ್ಪತ್ತಿನಲ್ಲಿ ಪಾವತಿ ಬರುತ್ತದೆ ಎಂದು ಸಲಹೆ ಮಾಡಿದರು. ಎಲ್ಲವನ್ನೂ ನಂಬುವ ನಾನು (ಇಂಗ್ಲಿಷಿನಲ್ಲಿ ಇದಕ್ಕೆ Good faith ಅನ್ನುತ್ತಾರೆ) ಆ ಮಳಿಗೆಗೆ ಹೋಗಿ ೩೦ ಪ್ರತಿ ಕೊಟ್ಟು, ಚೀಟಿ ಪಡೆದೆ. ಒಂದೆರಡು ತಿಂಗಳು ಉರುಳಿರಬೇಕು, ಚೀಟಿ ತೆಗೆದುಕೊಂಡು ಅಲ್ಲಿಗೆ ಹೋದರೆ, ಆ ಮಳಿಗೆಯೂ ಇಲ್ಲ; ಅದರ ಬೋರ್ಡೂ ಇಲ್ಲ. ಅದೇ ಸಂಗ್ರಹದ ೨೦ ಪ್ರತಿಗಳನ್ನು ಇನ್ಯಾರದೋ ಮಾತು ಕೇಳಿಕೊಂಡು ಸಾಗರದ ಪ್ರಕಾಶಕರೊಬ್ಬರಿಗೆ ರವಾನಿಸಿದೆ. ಅವು ಬಂತೋ ಹೋಯಿತೋ ಗೊತ್ತಾಗಲಿಲ್ಲ. ಎರಡು ಪತ್ರ ಬರೆದೆ. ಜವಾಬಿಲ್ಲ. ಆತ ಸೆಮಿನಾರೊಂದಕ್ಕೆ ಬಂದಾಗ ನನ್ನ ಕಡೆ ದೃಷ್ಟಿಸಿದರು. ನಾನು ಸ್ಪಂದಿಸಲಿಲ್ಲ, ನಾನು ಕ್ಷಮಿಸಬಲ್ಲೆನೇ ಹೊರತು ಮರೆಯಲಾರೆ.

ಸದರಿ ಸಂಗ್ರಹದ ಪ್ರತಿಗಳನ್ನು ನೋಡುನೋಡುತ್ತ ನನಗೆ ಹತಾಶೆ ಹೆಚ್ಚಾಯಿತು. ಎರಡು-ಮೂರು ವರ್ಷವಾಯಿತು ಆಪ್ತರೊಬ್ಬರೊಡನೆ ಸಮಾಲೋಚಿಸಿ, ಅದರ ಎರಡೆರಡು ಪ್ರತಿಗಳನ್ನು ಕಟ್ಟಿ, ಸ್ಟಾಂಪು ಹಚ್ಚಿ, ಸಾಕಷ್ಟು ಕಾಲೇಜುಗಳಿಗೆ ಕಳುಹಿಸಿಕೊಟ್ಟೆ, ಅದರ ಜೊತೆಗೆ ಒಂದು ಪತ್ರ: ನಿಮ್ಮ ಕೈಲಾದರೆ ಇದರ ಬಿಲ್ಲು ಕೊಡಿ; ಇಲ್ಲವಾದರೆ ಇದನ್ನು ನಿಮ್ಮ ಲೈಬ್ರರಿಗೆ ನನ್ನ ದಾನವಾಗಿ ಸ್ವೀಕರಿಸಿ ಎಂದು ಅದರ ಒಕ್ಕಣೆ. ಒಂದೆರಡು ಕಾಲೇಜಿನವರು ರೊಕ್ಕ ಕಳಿಸಿದರು. ಇನ್ನು ಕೆಲವರು ದಾನವಾಗಿ ಸ್ವೀಕರಿಸಿದರು. ಮತ್ತೂ ಕೆಲವರು ರೇಗಿ ಹಿಂತಿರುಗಿಸಿದರು. ಎರಡರಷ್ಟು ಸ್ಟಾಂಪು ಕೊಟ್ಟು ಅದನ್ನೆಲ್ಲ ಮರಳಿ ಪಡೆದೆ. ಹೀಗೆ ಬಂತಲ್ಲ, ಅದರಲ್ಲಿ ಒಂದಂತೂ ಪುಸ್ತಕವಿರದೆ ಬರೇ ಬ್ರೌನ್ ಷೀಟು ವಾಪಸಾಯಿತು!

ಇಷ್ಟೆಲ್ಲ ಪಡಿಪಾಟಲು ಪಟ್ಟು ಹನ್ನೊಂದು ಪುಸ್ತಕಗಳನ್ನು ಮಾಡಿ ಎಲ್ಲ ಬೆರಳುಗಳನ್ನು ಸುಟ್ಟುಕೊಂಡ ಮೇಲೆ, ಹನ್ನೆರಡನೆಯ ಪುಸ್ತಕವನ್ನು ಯಾರಾದರೂ ಪ್ರಕಟಿಸುವರೆ ಎಂದು ಪ್ರಕಾಶಕರನ್ನು ಎಡತಾಕುತ್ತಾ ಬಂದೆ. ಒಂದು ಕಾಲೇಜಿನ ಕನ್ನಡ ಸಂಘವು ನನ್ನ ಎಲ್ಲ ಲೇಖಕ ಮಿತ್ರರ ಪುಸ್ತಕಗಳನ್ನು ಪ್ರಕಟಿಸಿ ಧನ್ಯವಾಗಿತ್ತು. ಸರಿ, ಅವರನ್ನು ಕೇಳಿದೆ. ಆತ, ಒಂದು ಅರ್ಜಿ ಕೊಡಿ ಹಸ್ತಪ್ರತಿಯನ್ನು ಜೂರಿಯ ಮುಂದೆ ಇಡುತ್ತೇವೆ. ಸುಮಾರು ಎರಡು ವರ್ಷ ಆಗಬಹುದು. ನೋಡೋಣ ಅಂದರು. ಇನ್ನೊಬ್ಬ ಮಿತ್ರ ಪ್ರಕಾಶಕರು, ಇದಕ್ಕೆ ಹನ್ನೊಂದು ಸಾವಿರ ರೂಪಾಯಿ ತಗಲುತ್ತದೆ. ನೀವು ಎಂಟು ಸಾವಿರ ಭರಿಸಬೇಕು ಎಂದರು. ಇನ್ನು ಮೂರು ಸಾವಿರಕ್ಕೆ ಅವರ ಋಣಭಾರ ಯಾಕೆ? ಮೂರನೆಯ ಗೆಳೆಯರು, ನನ್ನ ಪ್ರಶ್ನೆಗೆ ಏನು ಹೇಳಬೇಕೆಂದು ತೋಚದೆ, ಅರ್ಥಪೂರ್ಣವಾಗಿ ನಕ್ಕರು.

ಬಸವನಗುಡಿಯಲ್ಲೊಮ್ಮೆ ನನ್ನ ಮಿತ್ರರ ಪುಸ್ತಕವೊಂದು ಬಿಡುಗಡೆಯಾಯಿತು. ಅದರ ಪ್ರಕಾಶಕರು ವಿಸ್ತಾರವಾಗಿ ಪ್ರಾಸ್ತಾವಿಕ ಭಾಷಣ ಮಾಡುತ್ತ, ಆ ಲೇಖಕರಿಗೆ ನಾನು ಹಸ್ತಪ್ರತಿಗಾಗಿ ವಾರ ವಾರ ಸತಾಯಿಸುತ್ತಿದ್ದೆ. ಎಷ್ಟೋ ದುಂಬಾಲು ಬಿದ್ದು ಅದನ್ನು ಅವರಿಂದ ಪಡೆದೆ... ಇತ್ಯಾದಿಯಾಗಿ ಹೇಳಿ ಲೇಖಕರಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು. ಆ ಲೇಖಕರಷ್ಟೇ 'ಹೆಸರು' ಇರುವ ನಾನು ಸಮಾರಂಭ ಮುಕ್ತಾಯವಾದ ಮೇಲೆ, ಪ್ರಕಾಶಕರ ಬಳಿಸಾರಿ, ನನಗೇನು ದುಂಬಾಲು ಬೀಳಬೇಡಿ, ವಿಮರ್ಶೆಯ ಹಸ್ತಪ್ರತಿಯೊಂದು ಸಿದ್ಧವಾಗಿದೆ; ನಾಳೆಯೇ ತರಲೆ, ಪ್ರಕಟಿಸುವಿರಾ? ಎಂದು ಕೇಳಿದೆ. ಆತನು ನನ್ನ ಗೆಳೆಯನೇ. ಆತ ಮುಖ ಕಿವಿಚಿಕೊಂಡು ಈಗಾಗಲೇ ನನ್ನಲ್ಲಿ ೩೭ ಹಸ್ತಪ್ರತಿ ಇವೆಯಲ್ಲ ಎಂದರು. ಹಾಗಿದ್ದರೆ, ದುಂಬಾಲಿನ ಅರ್ಥವೇನು?

ಒಂದು ದಿನ, ಕವಿ ಗೆಳೆಯ ಎಂ.ಎಸ್. ವ್ಯಾಸರಾವ್ ಜೊತೆ ಮಾತಾಡುತ್ತ, ನೋಡು ನನ್ನ ಜೋಲಿಯಲ್ಲಿ ಎರಡು ರಾಶಿ ಇದೆ. ಒಂದು, ಹಸ್ತಪ್ರತಿಗಳ ರಾಶಿ; ಇನ್ನೊಂದು ಪ್ರಕಟಿತ ಪುಸ್ತಕಗಳ ರಾಶಿ! ಇವೆರಡರ ನಡುವೆ ನನ್ನ ಬಾಳು ಕಳೆದು ಹೋಗುತ್ತಿದೆ ಎಂದೆ. ವ್ಯಾಸರಾವ್ ಬಿದ್ದು ಬಿದ್ದು ನಗತೊಡಗಿದ. ಆ ನಗು ಸ್ನೇಹದ್ದು ಮತ್ತು ಆ ಗಳಿಗೆಯದು. ಆದರೆ ನಮ್ಮ ಹೆಮ್ಮೆಯ ಕನ್ನಡ ನಾಡು ಕೊಟ್ಟಿರುವ ಪ್ರತಿ ಸ್ಪಂದನವೂ ಅಷ್ಟೇ ಅಲ್ಲದೆ, ಬೇರೇನೂ ಇಲ್ಲವಲ್ಲ!

ಒಗ್ಗರಣೆ:

೧. ಒಂದು ಬಾರಿ ಪ್ರೆಸ್ಸಿಗೆ ನಾನು ಹಣ ಸಂದಾಯ ಮಾಡುವ ಸಂದರ್ಭದಲ್ಲಿ ಯಾರದೋ ಕಾರ್ಯನಿಮಿತ್ತವಾಗಿ ಅಲ್ಲಿಗೆ ಬಂದಿದ್ದ ಕವಿಗೆಳೆಯ ಜರಗನಹಳ್ಳಿ ಶಿವಶಂಕರರು, ಇದೀಗ ನೀವು ನಿಜವಾದ ಕವಿ ಎಂದು ಉದ್ಗರಿಸಿದರು. ನಾನು ಆನಂದ ತುಂದಿಲನೂ ವಿಸ್ಮಿತನೂ ಆಗಿ ಸಾರ್ಥಕ ನೋಟವನ್ನು ಅವರತ್ತ ಬೀರಿದೆ. ನಾನು ಕೊಟ್ಟ ಬಿಲ್ಲು ದುಬಾರಿಯೆಂತಲೂ, ನಿಜವಾದ ಕವಿ ಮಾತ್ರ ಇಷ್ಟು ವ್ಯವಹಾರ ಶೂನ್ಯನಾಗಿರಬಲ್ಲ ಎಂತಲೂ ಅವರು ವಿವರಿಸಿ ಕಾರಿನಲ್ಲಿ ನನ್ನನ್ನು ಮನೆಗೆ ಡ್ರಾಪ್ ಮಾಡಿದರು.

೨. ಶಿವಮಗ್ಗಿ ಜಿಲ್ಲೆಯ ಗ್ರಾಮವೊಂದರ ವ್ಯಕ್ತಿಯೊಬ್ಬರು 'ಸಾದರ ಸ್ವೀಕಾರ' ಅಂಕಣದಲ್ಲಿ ನನ್ನ ಪುಸ್ತಕದ ವಿಷಯ ಓದಿ, ತಮಗೆ ಆ ಸಂಗ್ರಹ ಬೇಕೆಂತಲೂ ಹಿಂದುಗಡೆಯಿಂದ ಹಣ ಕಳಿಸುತ್ತೇನೆಂತಲೂ ಪತ್ರ ಬರೆದರು, ನಾನು ಕವನ ಸಂಗ್ರಹ ಕಳಿಸಿದೆ, ಒಂದು ಪತ್ರವನ್ನೂ ಬರೆದೆ: "ಸಂಗ್ರಹ ಕಳಿಸಿದ್ದೇನೆ ರೊಕ್ಕ ಕಳಿಸಬೇಡಿ!" ಅವತ್ತು ರಾತ್ರಿ ನನಗೆ ಬಂದಷ್ಟು ನಿದ್ದೆ ಮತ್ತಾವ ರಾತ್ರಿಯೂ ಬಂದಿರಲಿಲ್ಲ!

- ದೇಶ

ಸೂರ್ಯ ಸಖೀ

- ಸತ್ಯನಾರಾಯಣರಾವ್ ಅಣತಿ

ಭೌತ ಭಾಮಿನಿ ಭೂಮಿ
ಅಗೆದಷ್ಟು ಬೆಳೆಯುವ ಅಕ್ಷಯ ಕಾಯ
ಸ್ವಯಂ ಶಕ್ತಿವರ್ಧಿನಿ ಗಾಯಗೊಳಿಸಿದ ಹೃದಯ
ನಿಶ್ಯಕ್ತಳಾಗಿರುವೆ

ಸೂರ್ಯ ಸಖೀ
ನಿನ್ನಂಗ ರತಿ ರಂಗ ಸುರತ ಕ್ಷಣ
ಕ್ಷಣವು ಹೆರಿಗೆ, ಮಸಣ ಮೆರವಣಿಗೆ
ಲೋಹಗರ್ಭೆ, ಲಾವಣ್ಯದಾಯಿ
ಬಹುಮಹಡಿ ಸೌಧ ಮಾಯೆ
ಕೊಳಗೇರಿ ತಾಯಿ. ಪಶು ಪಕ್ಷಿ
ಕ್ರಿಮಿ ಕೀಟ ಜೀವದಾಟ
ಮರ ಗಿಡ ಬಳ್ಳಿ ಹೂ ಹಣ್ಣು
ಸಸ್ಯ ಸಂಜೀವಿನಿ ಉದರಂಭರಣೆ
ಸ್ವಯಂ ಶುದ್ಧೀಕರಣೆ

ಋತು ಚಕ್ರದುರುಳಿನಲ್ಲಿ
ನಿನ್ನಂಗ ಸಂಗ ಸುಖ
ಕ್ರಿಮಿನಾಶಕ ಕೃತಕ ಗೊಬ್ಬರ
ಮಿಶ್ರ ತಳಿ, ಫಲವತಿ ಪೃಥ್ವಿ
ನಿನ್ನ ಗರ್ಭದಲಿ ಸಿಡಿಸಿದ ಅಣು
ವಿಕಿರಣದ ವ್ರಣ ಒಡೆದು
ಗುಡುಗಿ ಬಾಯ್ದೆರೆಯುವೆಯೊ ?
ಒಳ ಪದರಗಳ ಪರದಾಟದಲ್ಲಿ
ಸೀಳು ಹೋಳಾಗಿ ಕಂಪಿಸುವ ಅಂತರ್ಮುಖಿ
ಸಾವು ನೋವಿನ ಸಖೀ



ಭ್ರಮಣ ಭಾಮೆ ದಿನ ವರ್ಷ
ಚಲನ ಶೀಲೆ ಗುರುತ್ವಾಕರ್ಷ ಸಮ್ಮೋಹಿನಿ
ಸಖನ ನೀಲಿಯ ಕಿರಣ

ಹರಿದ ಪದರವ ತೂರಿ
ಕುದಿವ ಹವೆ ಕೊಪ್ಪರಿಗೆ ಉದರ

ಬವಣೆ ಬಿರು ಬೇಸಿಗೆ
ಮಿಂದು ಮಳೆಯಲ್ಲಿ ತುಂಬಿ ಜೀವಕಳೆ
ಶರತ್ ಶಿಶಿರದ ಮೋಹನಾಂಗಿ
ಚೈತ್ರ ಚೈತನ್ಯದಾಯಿ ಬಹುಮಾಯಿ
ಹಗಲು ರಾತ್ರಿಗಳ ದೃಶ್ಯ ದರ್ಶನದಲ್ಲಿ

ಪುಳಕಿಸುವ ಝಳುಕಿಸುವ
ಗಂಧ ವರ್ಣ

ದಂತ ಕಥೆ

- ಜಯಶ್ರೀ ಕೆ.ಸಿ.

ಇಪ್ಪತ್ತು ವರ್ಷಗಳು ದಾಟಿದರೂ ಅದೇ
ಬದಲಿಲ್ಲದ ಬೇಸರದ ದೈನಂದಿಕ
ನಿನ್ನ ಸುತ್ತಾಮುತ್ತಾ ಅವೇ ಮುಖಗಳು
ಸುಳಿಯುತ್ತಾವೆ ಎಡೆಬಿಡದೆ, ನೀ ಬಯಸದೇ.

ಪಾತ್ರಗಳನ್ನೆಲ್ಲಾ ಒಟ್ಟು ಕಲೆ ಹಾಕಿ
ಮರಳಿನಂತೆ ರಾಶಿ ಮಾಡುವೆಯಾ?
ಒಂದೊಂದು ಕಣದಲ್ಲೂ ಹೋಲಿಕೆಯಿಲ್ಲ.
ಇದಕ್ಕೆಲ್ಲ ಹೊಂದುವ ಮುಖವಾಡಗಳ
ಹೊತ್ತ ನೀನು ಒಂದೊಂದಾಗಿ ಕಳಚಿ,
ಕನ್ನಡಿಯಲ್ಲಿನ ನಗ್ನ ಮುಖಕ್ಕೆ ಬೆಚ್ಚಿದೆ
ಚೈತನ್ಯವು ಮಿಣಮಿಣವೆಂದು ಕಿಡಿಯಂತೆ
ಮಿಂಚಿ ಮಿರುಗಿ ಕಾಣದಾಗುತ್ತದೆ,
ದಿನವೂ ನಿನ್ನ ಆತ್ಮಾಹುತಿ.
ನಾನೂ ಬದುಕಬೇಕು ಎಂದು ಕೂಗುವೆ.
ನಾನೂ ಬದುಕಬೇಕೆಂಬಾ ಕೂಗಿಗೆ
ಮತ್ತೆ ತುಳಿಯಲ್ಪಡುವೆ ವ್ಯಸನದಿಂದ
ಕಡೆಗೆ ಹ್ಯಾಮ್ಲೆಟ್‌ನಂತೆ ಮಸೆದಾಡಿ
ನೀನೂ ಸಾಯುವೆ ಹಂತಹಂತವಾಗಿ,
ಹೀಗೆ ನಿನ್ನ ಜನನವೇ
ಒಂದು ದಂತಕಥೆ.



ಎರಡು ಕವಿತೆಗಳು :


ಅಸ್ತಿತ್ವ

ಭೂಮಿ ಕಂಪಿಸಿದರೂ
ಈ ಹಕ್ಕಿ ಹೆದರುವುದಿಲ್ಲ.
ಒಂದು ಕಟ್ಟಡದಿಂದ
ಇನ್ನೊಂದು ಕಟ್ಟಡಕ್ಕೆ
ಹಾರುತ್ತದೆ
ಒಂದು ಮರದಿಂದ
ಇನ್ನೊಂದು ಮರಕ್ಕೆ.

ಅಷ್ಟೇ ಅಲ್ಲ
ಈ ಸೀಮೆ
ಈ ಸರಹದ್ದುಗಳನ್ನೂ
ಮೀರಿ ಹೋದೀತು.

ಅದರ ಪುಟ್ಟ ರೆಕ್ಕೆಗಳಿಗೆ
ಸೀಮೆಗಳಿಲ್ಲ
ಅಪಾರ ವಿಸ್ತಾರ
ನೀಲಿ ಸಾಗರ
ತೇಲುವ ಮುಗಿಲು
ಹಕ್ಕಿಗಿಲ್ಲ ದಿಗಿಲು.

ಅಸ್ತಿತ್ವ ಎಂಬುದು
ಹೇಗೆ ಎಲ್ಲ
ಜೀವಕ್ಕೂ
ಪುಟ್ಟ ದೇಹಕ್ಕೂ.



ಇಲ್ಲಿಯೂ ಬರಬಹುದು

- ಜಿ.ಪಿ. ಬಸವರಾಜು

ತಣ್ಣಗಿದೆ ಗಾಳಿ
ಗೂಡುಗಟ್ಟಿವೆ ಮೋಡ
ಎಲ್ಲಿಯೋ ಸುರಿಯುತ್ತಿದೆ ಮಳೆ

ಅಲ್ಲಿಗೆ ಬಂದದ್ದು ಇಲ್ಲಿಗೂ ಬರುತ್ತದೆಂದು
ಆಶೆಗಣ್ಣಲ್ಲಿ ಕಾದಿದೆ ಜೀವರಾಶಿ
ಉತ್ತ ಭೂಮಿಯ
ಹದ ಮಣ್ಣು
ಕಣ್ಣು ನೆಟ್ಟಿದೆ ಆಕಾಶಕ್ಕೆ,

ಮರಗಿಡಗಳು ಮುಖವೆತ್ತಿ
ಮೋಡಗಳ ನೋಡುತ್ತಿವೆ
ಹಸಿರಲ್ಲಿ ಕುಳಿತ ಹಕ್ಕಿ ಬಳಗ
ಹಾಡುತ್ತಿದೆ ಮೋಡಗಳ ಬಣ್ಣಿಸಿ

ಹೊಲದಲ್ಲೇ ಕುಳಿತವರು
ಮಣ್ಣ ಮುಟ್ಟುತ್ತ
ಮುಗಿಲು ನೋಡುತ್ತ
ದಿಕ್ಕು ದೆಸೆ ಫಲಾಫಲಗಳ ಗುಣಿಸುತ್ತ
ಇಡೀ ಹಗಲು ಕಾಯುತ್ತಾರೆ ಮಳೆಗಾಗಿ.

ದೂರದಲ್ಲಿ ಎಲ್ಲಿಯೋ ಸುರಿಯುವ ಮಳೆ
ಇಲ್ಲಿಗೂ ಬರಬಹುದೆಂದು
ಕಾಯುತ್ತಾರೆ ಆಸೆಯಿಂದ
ಭರವಸೆಯಿಂದ.

ಸುಮ್ಮನೆ

- ಬಿ.ಆರ್. ಪೋಲೀಸ್ ಪಾಟೀಲ





ಆರ್ಯ,
ನಿಮ್ಮನೆ ಸುಮ್ಮನೆ
ಗೆ ಹೋಗಿ ಬಂದೆ ಸುಮ್ಮನೆ
ಒಳಗೆ ನಿಂತಾಗ ಅನ್ನಿಸಿತು
ನಾನು ನಿಂತದ್ದು ಸುಮ್ಮನೆ
ನೀವು ಮಲಗಿದ್ದು ಸುಮ್ಮನೆ
ನಿಲ್ಲಲು ಮಲಗಲು
ಮನೆಯೇಕೆ ಸುಮ್ಮನೆ
ಆ ಬೊಮ್ಮನೆ ಕಟ್ಟಲಿಲ್ಲ ಇರಲೊಂದು ಮನೆ
ಸತ್ಯಕಾಮ ಇಲ್ಲಿಲ್ಲ
ಸತ್ಯಗೋಡೆಗಳ ನಡುವೆ ಬಂದಿಯಲ್ಲ
ಎಂಬರಿವಿನೊಡಲೊಳಗೆ ಎಂಥ ಕಂಪನ
ಅನಂತ ಸ್ಥಾವರಮೂಲದಲ್ಲಿ
ಏಕೆ ಬೆದಕಬೇಕು
ಬದುಕಿನ ಸೌಂದರ್ಯ, ಭೀಭತ್ಸಗಳ ದರ್ಶನ
ಅಲ್ಲೆ ಏಕಾಗಬೇಕು ಸುಮ್ಮನೆ
ಶ್ರೀ ಚಕ್ರದ ವ್ಯೂಹ ಭೇದಿಸಬೇಕು ಎಂದ ಕ್ಷಣವೆ
ಓಂಕಾರದ ಶಂಖನಾದ ಕೇಳಿತಲ್ಲ
ಆ ನಾದದ ಗುಂಜಾರವದೊಂದಿಗೇ ಬಂದ ನಿಲುವು
ತಾಯಿಯಂತೆ ಉಣ್ಣಿಸಿದ್ದು,
ತಂದೆಯಂತೆ ಮೈದಡವಿ ಕೈ ಹಿಡಿದು
ಇಳಿಸಿ, ಇಳಿದು ನಡೆದು ನಾಲ್ಕು ಹೆಜ್ಜೆ
ಮತ್ತೆ ಬಾ ಎಂದು ಅಲ್ಲೆ ನಿಂತದ್ದು
ಸತ್ಯವೆಂದರೆ ನಂಬಲಿಕ್ಕಿಲ್ಲ
ಯಾಕೆಂದರೆ
ಅನುಭವದ ಒರೆಗೆ ನಿಲ್ಲದ್ದು ಶಾಸ್ತ್ರವಲ್ಲ
ಎಂದೂ ನೀವೇ ಹೇಳಿದ್ದೀರಲ್ಲ.
ನನಗೆ ಶಾಸ್ತ್ರಬೇಕಿಲ್ಲ, ನೀವು ಬೇಕು
ನಿಮ್ಮ ಬೆಚ್ಚನೆಯ ಮನೆ ಸುಮ್ಮನೆ.

ಅವರು ಅವ್ವನನ್ನು ಪಾಲು ಮಾಡಿಕೊಂಡರು

- ಅನು: ಜಿ. ಕುಮಾರಪ್ಪ



ಆ ದಿನ
ಅವರು ಅವ್ವನನ್ನು ಪಾಲು ಮಾಡಿಕೊಂಡರು.
ಆಗ
ಆಕಾಶದಲ್ಲಿ ಚಂದ್ರನಿರಲಿಲ್ಲ
ನಕ್ಷತ್ರಗಳೂ ಇರಲಿಲ್ಲ
ದೂರದಲ್ಲೆಲ್ಲೋ
ಕಡಲು ಮಾತ್ರ ಮೊರೆಯುತ್ತಿತ್ತು.

ಆ ದಿನ
ಅವರು ಅವ್ವನನ್ನು
ಪಾಲು ಮಾಡಿಕೊಂಡರು
ಜಮೀನು ಮನೆ
ಕಪ್ಪುತಟ್ಟೆಗಳೊಡನೆ.

ಅವ್ವನ ಹೊಟ್ಟೆ ಬಟ್ಟೆಯ ಖರ್ಚಿನ
ಅರ್ಧವನ್ನು ಅಣ್ಣ ವಹಿಸಿಕೊಂಡ
ಉಳಿದರ್ಧವನ್ನು ತಮ್ಮ
ಹತ್ತು ಸಮಸ್ತರ ಎದುರು
ಅವರು ಅವ್ವನನ್ನು ಪಾಲು ಮಾಡಿಕೊಂಡರು.



ಸುಮ್ಮನೆ ಕುಳಿತಿದ್ದಾಳೆ ಅವ್ವ
ಬರೆದ ಚಿತ್ರದ ರೀತಿ
ಕಡೆದ ಮೂರ್ತಿಯ ರೀತಿ
ವಾರವಿಡೀ ಪೂಜಿಸಿಕೊಂಡ ಮೂರ್ತಿ
ಕೊನೆಯ ಪೂಜೆಯ ನಂತರ
ತನ್ನ ವಿಸರ್ಜನೆಯ
ಕ್ಷಣವ ಕಾಯುತ್ತಿರುವಂತೆ.

ಒರಿಯಾ ಮೂಲ:
ಡಾ॥ ಮನೋರಮಾ ಬಿಸ್ವಾಳ ಮಹಾಪಾತ್ರ

ತಾಯಿ

- ವಿಶ್ವನಾಥ. ಜಿ.ಎಸ್.

ಹೇಳೆ ತಾಯಿ
ನೀ ಯಾಕಾಗಿ ನಗಲಿಲ್ಲ
ನೋವಿದ್ದು ಅಳಲಿಲ್ಲ

ಉಂಡು ಹುಟ್ಟು
ಬೀಗುವ ಹೊತ್ತಿನಲಿ
ಗಂಧದ್ಹಾಂಗೆ ತೇದು
ಪರಿಮಳವಾದೆಯಲ್ಲೆ

ನಲಿದು ಕುಣಿದು
ನವಿಲಾಗಿ ಹಾರುವಲಿ
ಊದುಬತ್ತಿಯ ಹಾಗೆ
ಸುಡು ಸುಡು ಸುಟ್ಟು
ಸುಗಂಧವಾದೆಯಲ್ಲೆ

ಅಂಬೆಗಾಲ ಕೂಸ
ಆಡ್ಸೂವ ಆಟ ತಪ್ಪಿ
ಗಿಲಿಕ್ಕಿಯ ಜೋಗುಳದ
ಸ್ವರ ತಪ್ಪಿತಲ್ಲೆ

ಅಂಬಲಿ, ಸೊಪ್ಪಿನ
ಸಾರಾವ ಹೀರುವಲಿ
ಬಯಲ ತೆವರಿನ ತೆನೆ
ಮುರುಟಿ ಹೋಯಿತಲ್ಲೆ

ಹೇಳೆ ತಾಯಿ
ನೀ ಯಾಕಾಗಿ ನಗಲಿಲ್ಲ
ನೋವಿದ್ದು ಅಳಲಿಲ್ಲ


ಮಡಿಲ ಸೆರಗ ತುಂಬ
ಕೆಂಡಾವ ತುಂಬಿಸಿ
ಯಾಕಾಗಿ ನಿಂತೆ
ಮೌನ ರೋದನವಾದರೂ
ಕಣ್ಣೀರು ಬತ್ತಿತೆ

ಭೂತಾಯಿ ಬಾಯ್ಬಿಗೆದು
ಬಾ ಎಂದು ಕರೆದಾಗು
ಮರವಾಗಿ ನಿಂತೆಯಲ್ಲೆ
ಬೇರಾಗಿ ಇಳಿದೆಯಲ್ಲೆ
ಹಣ್ಣಾಗಿ ಹೋದೆಯಲ್ಲೆ

ಎಲೆ ಎಲೆಯ
ನೆರಳಲೂ ತಂಪಾಗಿ
ಕೂತವರು ಬೆಂಕೀಲೆ
ಸುಟ್ಟರಲ್ಲೆ
ಬುಡಕೆ ಕೊಡಲೀನೆ
ಇಟ್ಟರಲ್ಲೆ

ಬರಸಿಡಿಲು ಬಡಿದು
ಚೂರಾಗಿ ಹೋದರ್ರೂ
ಮಣ್ಣ ಕಣವಾಗಿ ಉಳಿದೆಯಲ್ಲೆ


ಹೇಳೆ ತಾಯಿ
ನೀ ಯಾಕಾಗಿ ನಗಲಿಲ್ಲ
ನೋವಿದ್ದು ಅಳಲಿಲ್ಲ



ರಾಜೀವ ತಾರಾನಾಥ: ಪರಂಪರೆಯ ವಕ್ತಾರ

- ಡಾ. ಯು.ಆರ್. ಅನಂತಮೂರ್ತಿ

ಅರವತ್ತರ ದಶಕದಲ್ಲಿ ರಾಜೀವ ತಾರಾನಾಥ ನನ್ನನ್ನು ನನಗೆ ಸಾಧ್ಯವಾದ ಎತ್ತರಕ್ಕೆ ಏರುವಂತೆ ಪ್ರಚೋದಿಸಿದ್ದ ಗೆಳೆಯ; ಗೆಳೆಯ ಮಾತ್ರನಲ್ಲ, ಗುರು. ಮೊದಲಲ್ಲಿ ನನ್ನನ್ನು ಲೇಖಕನೆಂದು ಗುರಿತಿಸಿದ ಹಿರಿಯರು ಅಡಿಗರು; ತಿದ್ದಿ ತೀಡಿ ಹಂಗಿಸಿ ವಿಸ್ತರಿಸಿ ಹೊಗಳಿ ಬೆಳೆಸಿದವನು ರಾಜೀವ. 'ಪ್ರಶ್ನೆ' ಸಂಕಲನದ ಒಂದೊಂದು ಕಥೆಯೂ ರೂಪುಗೊಂಡಿದ್ದು ರಾಜೀವನ ಅತೃಪ್ತಿಯಲ್ಲಿ. ಹೀಗೆ ತನ್ನ ನಿಲುವಿನಲ್ಲೂ ನನಗಿಂತ ಎತ್ತರದ - ಪಡೆದುದಕ್ಕಿಂತ ಹೆಚ್ಚು ಕೊಡಬಲ್ಲ ರಾಜೀವನ ಔದಾರ್ಯದಲ್ಲಿ ತೊದಲುತ್ತಿದ್ದ ನನ್ನ ಸೃಜನಶೀಲತೆ ಬೆಳೆಯಿತು. ಬರವಣಿಗೆಯಲ್ಲಿ ಮಾತ್ರವಲ್ಲ ನಾನು ಧೈರ್ಯಮಾಡಿ ಮದುವೆಯಾಗಿದ್ದೂ ರಾಜೀವನ ನೆರವಿನಲ್ಲಿ. ನಾವಿಬ್ಬರೂ ನಮ್ಮ ಮೊದಲನೆಯ ಮಗನನ್ನು ಪಡೆದದ್ದೂ ಒಂದೇ ಕಾಲದಲ್ಲಿ. ನಮ್ಮ ಹಲವು ಸಂಜೆಗಳನ್ನು ಕಳೆದದ್ದು ಮೈಸೂರಿನ ಒಂದು ಕಾಫೀ ಹೌಸಿನಲ್ಲಿ. ಮಾರ್ಕೆಟ್ಟಿನಿಂದ ತರಕಾರಿಯನ್ನೂ ಇಂದಿರಾಭವನದಿಂದ ಮಕ್ಕಳಿಗೆ ಸಿಹಿ ತಿಂಡಿಯನ್ನೂ ಒಂದು ಚೀಲದಲ್ಲಿ ತುಂಬಿಕೊಂಡು, ನಮ್ಮ ಜೊತೆ ಕೂತು ಸಿಗರೇಟು ಸೇದಿ, ಕಾಫಿಯನ್ನು ಹಲವು ಅರ್ಧಕಪ್ಪುಗಳಲ್ಲಿ ಕುಡಿದು ಇಡೀ ಸಂಜೆಯನ್ನು ಮಾತಿನ ಲಹರಿಯಲ್ಲಿ ಕಳೆಯುತ್ತಿದ್ದ ಅಡಿಗರ ತೀವ್ರತೆಯಲ್ಲಿ.



ಸಾಹಿತ್ಯದ ಕೃತಿಯೊಂದನ್ನು ರಾಜೀವ ಅದರ ನೇಯ್ಗೆಯ ಒಪ್ಪದಲ್ಲೂ, ಸ್ನಿಗ್ಧತೆಯಲ್ಲೂ, ಅದು ಒಟ್ಟಾಗಿ ಪಡೆಯುವ ಆಕಾರದಲ್ಲೂ ನೋಡಬಲ್ಲ ಧೀಮಂತ. ಇದಕ್ಕೆ ಕಾರಣ ಅವನ ಸಂಗೀತ ಜ್ಞಾನವೇ ಇರಬೇಕು. ಬಡೇ ಗುಲಾಂ ಖಾನರು ಪ್ರಸಿದ್ಧರಾದ ಮುರಾರೀ ಕವಿಗೆ ಹೇಳಿದರೆನ್ನುವ ಮಾತೊಂದನ್ನು ನಾನು

ಕೇಳಿಸಿಕೊಂಡಿದ್ದೇನೆ. ಮರಾಠಿ ಕವಿಗಳು ಒಂದು ಗಂಟೆಗೂ ಹೆಚ್ಚು ಕಾಲ ಖಾನರು ಹಾಡುವುದನ್ನು ಕೇಳಿಸಿಕೊಂಡರಂತೆ. ಅಷ್ಟೊಂದು ವಿಸ್ತಾರದಲ್ಲಿ ಎಲ್ಲೆಲ್ಲೋ ಅನ್ನಿಸುವಂತೆ, ಅನಿರೀಕ್ಷಿತವಾಗಿ ಅಲೆದಾಡುತ್ತ, ಆದರೆ ಒಟ್ಟಂದವಾಗಿ ಬೆಳೆದು ನಿಂತ ಅನುಭವದಲ್ಲಿ ರೋಮಾಂಚಿತರಾದ ಕವಿಗೆ ಖಾನರು ಹೇಳಿದರಂತೆ: 'ಸಂಗೀತ ಒಂದು ಸರ್ವಾಂಗ ಸೌಷ್ಠವದ ವಿಗ್ರಹವಿದ್ದಂತೆ; ಕೊಂಚ ಕಮ್ಮಿಯಾದರೂ ತುಂಬ ಕಮ್ಮಿಯಾಯಿತು ಎನ್ನಿಸಬೇಕು; ಕೊಂಚ ಹೆಚ್ಚಾದರೂ ತುಂಬ ಹೆಚ್ಚಾಯಿತು ಎನ್ನಿಸಬೇಕು'.

ರಾಜೀವ ಎಲ್ಲವನ್ನೂ ಸಂಗೀತದ ಕಣ್ಣಿನಿಂದ ನೋಡುತ್ತಾನೆ; ಸಾಹಿತ್ಯದ ಬಗೆಗಿನ ರಾಜೀವನ ಒಳನೋಟಗಳು ಅವನನ್ನು ನಾನು ಕಂಡ ಅತ್ಯುತ್ತಮ ಮನಸ್ಸುಗಳ ಸಾಲಿನಲ್ಲಿ ನಿಲ್ಲಿಸುತ್ತದೆ. ಆದರೆ ನನಗೆ ದುಃಖದ ವಿಷಯವೆಂದರೆ ಅವನು ಸಾಹಿತ್ಯವನ್ನು ತಿಳಿಯುವ ಆಳದಲ್ಲಿ ಅವನ ಸಂಗೀತವನ್ನು ವಿಶ್ಲೇಷಿಸುವಂತೆ ನಾನು ಬೆಳೆಯಲಿಲ್ಲ. ಅವನಿಂದ ಪಡೆದಷ್ಟು ನಾನು ಅವನಿಗೆ ಕೊಡಲಿಲ್ಲ.

ರಾಜೀವನ ಮೇಲೆ ಮಹತ್ವದ ಪರಿಣಾಮ ಬೀರಿದವರು ಇಬ್ಬರು: ಅವನ ತಂದೆ ಪಂಡಿತ ತಾರಾನಾಥರು ಮತ್ತು ಅವನ ಗುರು ಅಲಿ ಅಕ್ಬರ್ ಖಾನರು. ಈ ಇಬ್ಬರ ಬಗ್ಗೆಯೂ ರಾಜೀವ ಕಥಿಸುವುದರಲ್ಲಿನ ಬೆರಗನ್ನು ಬಲ್ಲವರು ಮಾತ್ರ ಬಲ್ಲರು. ಇಬ್ಬರೂ ಈ ಲೋಕದವರೇ ಆಗಿದ್ದು ರಾಜೀವನ ತಹತಹದ ಕಣ್ಣಿನಲ್ಲಿ ದೈವಿಕ ಆಯಾಮ ಪಡೆಯುತ್ತಾರೆ. ರಾಜೀವನಿಗೆ ಅವನು ಮೀರಲಾರದ ಗುರಿಗಳಾಗಿ ಇವರು ನಮಗೆ ಪ್ರತ್ಯಕ್ಷರಾಗುತ್ತಾರೆ. ನಾವು ರಾಜೀವನನ್ನೇ ಅನನ್ಯನೆಂದು ಮೆಚ್ಚಿಕೊಳ್ಳುವ ಸಂದರ್ಭದಲ್ಲೇ ತನಗಿಂತ ದೊಡ್ಡವರನ್ನು ನಮ್ಮ ಎದುರಿಗೆ ಇವನು ಇಡುತ್ತಾನೆ. ರಾಜೀವನ ಆತ್ಮ ಪ್ರತ್ಯಯ ಹಾಗೂ ಅವನ ವಿನಯ ಒಟ್ಟಾಗಿ ನಮಗೆ ಹೀಗೆ ಭಾಸವಾಗುತ್ತದೆ.

ಪಂಡಿತ ತಾರಾನಾಥರು ಮತ್ತು ಅಲಿ ಅಕ್ಬರ್ ಖಾನರು - ಇಬ್ಬರೂ ನಮ್ಮ ಪರಂಪರೆಯಲ್ಲಿ ಅತ್ಯುತ್ತಮವಾದ್ದನ್ನು ಮೈಗೂಡಿಸಿಕೊಂಡವರು; ಮೈಗೂಡಿಸಿಕೊಂಡು ಮೀರಿದವರು. ಒಬ್ಬರು ಕಲೆಯ ಆವಿಷ್ಕಾರದಲ್ಲಿ; ಇನ್ನೊಬ್ಬರು ಸಾಂಸ್ಕೃತಿಕ ಅಭಿವ್ಯಕ್ತಿಯಲ್ಲಿ. ಒಬ್ಬರು ನೆನಪಾಗಿ ರಾಜೀವನನ್ನು ಕಾಡಿದರೆ ಇನ್ನೊಬ್ಬರು ಸತತ ಸಾಧನೆಯ ನಿಕಷವಾಗಿ ಅವನಿಗೆ ಉಳಿದಿದ್ದಾರೆ. ತೃಪ್ತನಾದ ರಾಜೀವನನ್ನು ನಾನೆಂದೂ ಊಹಿಸಲಾರೆ.

ನಾವಿಬ್ಬರೂ ಒಬ್ಬರ ಬಗ್ಗೆ ಒಬ್ಬರು ಸಿಟ್ಟಾದ್ದಿದೆ; ನಿಷ್ಕಾರಣವಾಗಿ ಹಲವು ಸಲ. ಕಾರಣ ಸಹಿತವಾಗಿ ಕೆಲವು ಸಲ. ಇವತ್ತು ನಾನು ಇಲ್ಲವೆಂದು ಅವನು ಸಿಟ್ಟಾದರೆ ನನಗೆ ಸಂತೋಷವೇ. ಏಕೆಂದರೆ ನಲವತ್ತು ವರ್ಷಗಳ ಹಿಂದಿನ ನಮ್ಮ ಪ್ರೀತಿ ಒಬ್ಬರನ್ನೊಬ್ಬರು ಆಗೀಗ ಹಿಂದಿನಂತೆ ನೋಡದಿದ್ದರೂ ಹಾಗೇ ಉಳಿದಿದೆ ಎಂದು ಅದರ ಅರ್ಥ.

ಈ ಎತ್ತರದ ಮನುಷ್ಯ ನಮ್ಮ ನಡುವೆ ಹಲವು ಕಾಲ ಬಾಳಲಿ.

(೩ ಆಗಸ್ಟ್ ೨೦೦೩ರಂದು ಭಾರತೀಯ ವಿದ್ಯಾಭವನದಲ್ಲಿ ರಾಜೀವ ತಾರಾನಾಥರಿಗೆ ಅಭಿನಂದನೆ ಆದ ಸಂದರ್ಭದಲ್ಲಿ ಆಡಿದ ಮಾತು.)

‘ನಾಡೋಜ’ - ಜಾನಪದಜಂಗಮ ಡಾ. ಎಸ್.ಕೆ. ಕರೀಂಖಾನ್ ಅವರಿಗೆ ಡಾ. ಎಲ್. ಬಸವರಾಜು ಪ್ರಶಸ್ತಿ



ಇತರರ ಬಗ್ಗೆ ಕೆಡುಕಿನ ಯೋಚನೆ ಮಾಡದಿರುವುದೇ ತನ್ನ ಆರೋಗ್ಯದ ರಹಸ್ಯವೆಂಬುದು ಡಾ. ಎಸ್.ಕೆ. ಕರೀಂಖಾನರ ನಂಬಿಕೆ. ಜಾನಪದದ ಜೀವದುಲಿತಗಳಿಗೆ ತನ್ನ ಒಳಗಿವಿಗಳನ್ನು ತೆತ್ತುಕೊಂಡಿರುವ ಕೂಸು ಮನಸಿನ ಈ ಗಾಂಧೀವಾದಿ ಜಾತಿ, ಮತಗಳನ್ನು ಎಂದೂ ತನ್ನತ್ತ ಸುಳಿಯಗೊಡದ ಸಹಜ ಜಾತ್ಯತೀತವಾದಿ. ಶರೀಫಜ್ಜರ ನಂತರದ ಶರೀಫಜ್ಜ.

ಕರೀಂಖಾನ್ ಹುಟ್ಟಿದ್ದು ಹಾಸನದ ಸಕಲೇಶಪುರದಲ್ಲಿ. ತಂದೆ ಆಫ್ಘಾನಿಸ್ತಾನದ ಕಾಬೂಲ್‌ನ ವೀರಯೋಧ ಅಬ್ದುರ್ರಹಮಾನ್ ಖಾನ್. ತಾಯಿ ಅರಬ್ಬೀ ಮೂಲದ ಜೈನಬಿ. ಕರೀಂಖಾನ್ ಓದಿದ್ದು ಕೇವಲ ಎಂಟನೆಯ ಇಯತ್ತೆಯವರೆಗೆ. ಆದರೆ ಗಳಿಸಿದ ಅನುಭವ ಪಾಂಡಿತ್ಯ ಅಪಾರ. ಈ ಶರೀಫಜ್ಜನಿಗೆ ಗುರುಗೋವಿಂದ ಭಟ್ಟರಾಗಿ ಕನ್ನಡ ಸಂಸ್ಕೃತ ಪಾಂಡಿತ್ಯವನ್ನು ಧಾರೆ ಎರೆದವರು ಸಮತಾವಾದಿ ಆಚಂಗಿ ನಾರಾಯಣಶಾಸ್ತ್ರಿಗಳು.

ಮನೆಯ ಮುಂದಿನ ಬಯಲಲ್ಲಿ ಗಾಡಿಗಳ ಸಮೇತ ತಂಗುತ್ತಿದ್ದ ಅಲೆಮಾರಿ ಕಂಚುಗಾರರು ರಾತ್ರಿ ಹಾಡುತ್ತಿದ್ದ ಜಾನಪದ ಗೀತೆಗಳ ಮೋಡಿಗೆ ಒಳಗಾದ ಕರೀಂಖಾನರು ಕಾಲ್ನಡಿಗೆಯಲ್ಲಿ ಹಳ್ಳಿಹಳ್ಳಿ ತಿರುಗಿ ೨೦೦ಕ್ಕೂ ಹೆಚ್ಚು ಜಾನಪದ ಗೀತೆಗಳನ್ನು ಸಂಗ್ರಹಿಸಿದರು. ಈ ನಡುವೆ ‘ಹಿಂದೂ’ ಪತ್ರಿಕೆಯಲ್ಲಿನ ಗಾಂಧೀಜಿ ಕರೆಗೆ ಸ್ಪಂದಿಸಿ ಸ್ವಾತಂತ್ರ್ಯ ಚಳವಳಿಗಿಳಿದರು. ಏಳೆಂಟು ಬಾರಿ ಸೆರೆವಾಸ. ಭಾಷ್ಯಂ, ಸುಬ್ರಹ್ಮಣ್ಯಂ, ಕೆ.ಸಿ. ರೆಡ್ಡಿ, ಟಿ. ಸಿದ್ಧಲಿಂಗಯ್ಯ, ಕೆಂಗಲ್ ಹನುಮಂತಯ್ಯನವರೊಂದಿಗೆ ಒಡನಾಟ. ನಂದಿಬೆಟ್ಟದಲ್ಲಿ ಗಾಂಧಿಯೊಂದಿಗುಳಿವ ಅವಕಾಶ. ಜೈಲಿನಲ್ಲೂ ಇವರ ಹಾಡಿಗೆ ಚಳವಳಿಗಾರರು ಮುಗಿಬೀಳುತ್ತಿದ್ದರು. ಗಾಂಧಿ ವಿಚಾರಗಳ ಉಪನ್ಯಾಸವೂ ನಡೆಯುತ್ತಿತ್ತು. ಹಳ್ಳಿ ಹಳ್ಳಿಗಳಲ್ಲೂ ಹಾಡು ಹೇಳಿ ಜನರಿಗೆ ಕಾಂಗ್ರೆಸ್ ಸದಸ್ಯತ್ವದ ಫಾರಂ ಹಂಚುತ್ತಿದ್ದ ಖಾನ್, ಸೇವಾದಳದಲ್ಲಿ ದುಡಿಸಿಕೊಂಡು ಸಂಭಾವನೆ ನೀಡದೆ ದೂರವಿಟ್ಟಾಗ ರಾಜಕಾರಣ ತೊರೆದರು.

ಜೀವನೋಪಾಯಕ್ಕಾಗಿ ಎಂಭತ್ತು ಕಂಪೆನಿ ನಾಟಕಗಳನ್ನು ಬರೆದಿದ್ದಾರೆ. ‘ಮಧುಮೋಹನ’ ೩೦೦ಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡಿದೆ. ‘ನಿರ್ದೋಷಿ’ಯಲ್ಲಿ ಡಾ. ರಾಜ್ ಸಹ ನಟಿಸಿದ್ದರು. ಹುಮಾಯೂನ್, ಶ್ರೀಕೃಷ್ಣಲೀಲೆ, ಲೈಲಾಮಜ್ನು, ಮಾಗಡಿ ಮಹಾಪ್ರಭು ಕೆಂಪೇಗೌಡ ಮೊದಲಾದವು ಇವರ ನಾಟಕಗಳು.

ಬಲಿದಾನಿ ಹುಸೇನ್, ಮಾತೃಶಾಪ, ಸಮೀರ, ಮುಷೀರ ಹೀಗೆ ಸಾಲು ಸಾಲು ಕಾದಂಬರಿಗಳು ನೀವಾರ, ನೀಹಾರ ಕಥಾಸಂಕಲನಗಳು.

ಇದರ ಜತೆಗೆ ಮದ್ರಾಸ್‌ನ ಸಿನಿಮಾ ಪ್ರಪಂಚದಲ್ಲಿ ಹತ್ತು ವರ್ಷಗಳ ನಿರಂತರ ಹೋರಾಟ. ಊಟ ಕೊಟ್ಟು, ಹಾಡು, ಕಥೆ ಬರೆಸಿಕೊಂಡವರೆಷ್ಟೋ? ಕದ್ದವರೂ ಉಂಟು. ತಮ್ಮ ಹೆಸರಲ್ಲಿ ಬಳಸಿಕೊಂಡವರೂ ಉಂಟು. ಅಂದಾಜು ಇವರು ೨೦೦ಕ್ಕೂ ಹೆಚ್ಚು ಚಿತ್ರಗೀತೆಗಳನ್ನು ರಚಿಸಿದ್ದಾರೆ. ಇಷ್ಟರ ನಡುವೆಯೂ 'ಸ್ವರ್ಣಗೌರಿ'ಗೆ ರಾಷ್ಟ್ರಪ್ರಶಸ್ತಿ ಸಂದಿದೆ. ಇಂದಿಗೂ ಕನ್ನಡದ ನಾಲಿಗೆಗಳ ಮೇಲೆ ನಲಿವ ಮಧುರ ಗೀತೆಗಳಿವು: 'ನಟವರ ಗಂಗಾಧರ...' 'ಜಯತೆ, ಸತ್ಯಮೇವ ಜಯತೇ...' 'ವನಮಾಲೀ ವೈಕುಂಠಪತೀ...' 'ಜಗದೀಶನಾಡುವಾ...' 'ಜಯಗೌರಿ ಜಗದೀಶ್ವರೀ...' 'ನುಡಿಮನ ಶಿವಗುಣ...' 'ಬಾರೇ ನೀ ಚೆಲುವೆ...' 'ಚಿಲಿಪಿಲಿಗುಟ್ಟುವ ಹಕ್ಕಿಯ ಕೊರಳಲಿ...' ಇತ್ಯಾದಿ... ಇತ್ಯಾದಿ. ಇಂತಹ ನೂರಾರು ಅಚ್ಚಗನ್ನಡದ ಹಾಡುಗಳು, ಹಿಂದೂ ಪುರಾಣಗಳ ಕಾವ್ಯಚಿತ್ರಗಳು ಅರಳಿದ್ದು ಕರೀಂಖಾನ್ ಎಂಬ ಕಾಬೂಲಿವಾಲಾನ ಸಹೃದಯದಲ್ಲಿ. ಕರೀಂಖಾನ್ ಹಾಡುತ್ತಿದ್ದರೆ ಹೆಣ್ಣುಮಕ್ಕಳು ಗಳಗಳ ಅತ್ತದ್ದುಂಟು.

ಧಾರವಾಡದ 'ಲೋಕಮಿತ್ರ' ಉಡುಪಿಯ 'ಅಂತರಂಗ' ಪತ್ರಿಕೆಗಳ ಸಂಪಾದಕರೂ ಆಗಿದ್ದ ಕರೀಂಖಾನ್ Royal Indian Navyಯಲ್ಲಿ ನೌಕರಿಯನ್ನೂ ಮಾಡಿದ್ದಾರೆ. ಜಾನಪದ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ೮೦೦೦ ಕಿ.ಮೀ. ಬಸ್ಸಿನ ದಣಿವರಿಯದ ಪ್ರಮಾಣ ನಡೆಸಿ, ಜಾನಪದ ಪ್ರದರ್ಶಕ ಕಲೆಗಳ ಕುರಿತ ಅತ್ಯಮೂಲ್ಯ ೨೪೦ ಗಂಟೆಗಳ ವಿಡಿಯೋ ಚಿತ್ರೀಕರಣ ನಡೆಸಿ, ವಿಶೇಷ ಗಿರಿಜನ ಪ್ರಶಸ್ತಿ ಸ್ಥಾಪಿಸಿ, ಗಿರಿಜನ ಅಧ್ಯಯನಕ್ಕೆ ಒತ್ತು ಕೊಟ್ಟರು.

ಪಡೆದ ಪ್ರಶಸ್ತಿಗಳಿವು: ನಾಡೋಜ (೧೯೯೭), ಜಾನಪದ ಶ್ರೀ (೧೯೯೫), ಗುಲ್ಬರ್ಗ ವಿ.ವಿ.ಯ ಗೌರವ ಡಾಕ್ಟರೇಟ್ (೧೯೮೯), ಜೀಶಂಪ ಪ್ರಶಸ್ತಿ (೧೯೯೫), ಚಿ. ಉದಯಶಂಕರ್ ಚಿತ್ರಸಾಹಿತ್ಯ ಪ್ರಶಸ್ತಿ (೨೦೦೦), ಅಕಾಡೆಮಿಗಳಿಂದ ಅಭಿನಂದನೆ (೧೯೮೯), ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಜಂಗಮ ಹಾಗೂ ಇತ್ತೀಚೆಗೆ ಸಂದ ಚಲನಚಿತ್ರರಂಗದ ಜೀವಮಾನ ಪ್ರಶಸ್ತಿ (೨೦೦೪). ಇದೆಲ್ಲದರೊಂದಿಗೆ ಅನುಕ್ಷಣ ಬದುಕಲಿಕ್ಕಿ ಹೋರಾಡಿದ ಕನ್ನಡಿಗ ಕರೀಂಖಾನರು ಸ್ವಾತಂತ್ರ್ಯ ಯೋಧರ ಪಿಂಚಣಿಯನ್ನು ಕೂಡ ಪಡೆಯುತ್ತಿಲ್ಲ! ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿ ಅಖಂಡ ಕರ್ನಾಟಕವನ್ನೇ ತನ್ನ ಮನೆಯೆಂದು ಭಾವಿಸಿದ್ದ ಕರೀಂಖಾನರಿಗೆ ಇಳಿವಯಸ್ಸಲ್ಲಿ ಇರಲಿಕ್ಕೆ ಇಂದಿಗೂ ಸ್ವಂತ ಮನೆಯಿಲ್ಲ. ಒಡನಾಡಿಗಳಾಗಿದ್ದ ಘಟಾನುಘಟಿಗಳೆಲ್ಲ ಅಧಿಕಾರದಲ್ಲಿದ್ದಾಗ ಆತ್ಮಗೌರವದಿಂದ ದೂರವುಳಿದವರು ಖಾನ್. ಅಜ್ಞಾತ ಕವಿಗಳ ಹಾಡುಗಳು ಕಳೆದು ಹೋದಾವೆಂದು ಸಂಗ್ರಹಿಸಿ ಪ್ರಕಟಿಸಿದರು. ಆದರೆ ಅವರದೇ ನೂರಾರು ಹಸ್ತಪ್ರತಿಗಳು ಪ್ರಕಟವಾಗಲೂ ಇಲ್ಲ; ಅಲೆಮಾರಿ ಬದುಕಲ್ಲಿ ಅವು ಕೊನೆಗೆ ಕಳೆದೇ ಹೋದವು!

ಎಲ್ಲರೂ ದುಡಿಸಿಕೊಂಡು ದೂರವಿಟ್ಟ ನಂತರ ಗಾಂಧೀಬಜಾರಿನ ದ್ವಾರಕಾ ಹೋಟೆಲಿನಲ್ಲಿ ೨೮ ವರ್ಷಗಳ ಏಕಾಂತ ಬ್ರಹ್ಮಚಾರಿ ಜೀವನ ನಡೆಸಿದರು. ನಡೆ-ನುಡಿಯ ಭೇದವರಿಯದ ಕೂಸು ಮನಸಿನ ಈ ಅಜ್ಜನಿಗೆ ೨೦೦೩ನೇ ಸಾಲಿನ ಡಾ. ಎಲ್. ಬಸವರಾಜು ಪ್ರಶಸ್ತಿಯನ್ನು ನೀಡಲು ಸಾಧ್ಯವಾಗಿರುವುದೇ ನಮ್ಮ ಹೆಮ್ಮೆ. ಇದು ಮೂಡಲ ಸೀಮೆಯ ಕನ್ನಡಿಗರ ಪಾಲಿನ ಗೌರವ.

♦ ೨೮.೦೨.೨೦೦೪ರಂದು ಕರೀಂಖಾನ್‌ರಿಗೆ ಬೆಂಗಳೂರಿನ ಅವರ ಮನೆಯಲ್ಲಿ ಪ್ರಶಸ್ತಿಯನ್ನು ಶ್ರೀಮತಿ ವಿಶಾಲಾಕ್ಷಿ ಬಸವರಾಜು ಅವರು ಪ್ರದಾನ ಮಾಡಿದರು. ಅನಾರೋಗ್ಯ ನಿಮಿತ್ತ ಕರೀಂಖಾನ್‌ರು ಕೋಲಾರಕ್ಕೆ ಹೋಗಲಾಗಲಿಲ್ಲ.

ಕಾವ್ಯ ಗಾರುಡಿಗ ದ.ರಾ. ಬೇಂದ್ರೆಯ ಅರಿವಿನ ಪರಿವೆ...

ನೋವಿನ ಬೆಲೆಯು

ಏನಿರಬೇಕು ಏನಿರಬಾರದು ಎಂದು ತಿಳಿದುಕೊಳ್ಳುವದು ಅರಿವು. ಏನಿದೆ ಏನಿಲ್ಲ ಎಂದು ತಿಳಿಯದಿರುವದೇ ಮರೆವು. ಅರಿವು ದೇವರ ಅರುಹು. ಮರೆವು ಜೀವನ ಕುರುಹು. ಮರೆವು ಅರಿವಾದಾಗ ಜೀವ ದೇವನಾಗುವನು. ನೋವಿನ ನೆರವಿನಿಂದ ಮರೆವು ಅರಿವಾಗುವದು. ನೋವಿರದಿದ್ದರೆ ಮರವಿನ ಅರಿವು ಕೂಡ ನಮಗಾಗುತ್ತಿದ್ದಿಲ್ಲ. ಪ್ರಾಣದ ಪರಿವೆಯಾದಾಗಲೇ ಜೀವಕ್ಕೆ ಮರೆವಿನ ಅರಿವಾಗುವದು. ಅರಿವಿನ ಪರಿವೆಗೆ ಮರೆವಿನ ಪರಿವೆ ಎದುರಾಗುತ್ತಲೆ ನೋವು ಉಂಟಾಗುವದು. ನೋವೆಂದರೆ 'ಇತ್ತಿಲ್ಲ ಇತ್ತ' ಎಂದು ಹಾದೀ ತೋರಿಸುವ ಸುಟ್ಟು ಬೆರಳು. ಈ ಬೆಲೆಯನ್ನರಿತವದೆ ಅರಿತನು.

ಒಂದೇ ನೋವಿಗೆ ಹಲವೊಂದು ಹೆಸರಿರುವವು. ತಿಳಿವಿನ ನೋವಿಗೆ ತಪ್ಪೆಂದೂ; ನುಡಿಯ ನೋವಿಗೆ ಹುಸಿಯೆಂದೂ; ನಡೆಯ ನೋವಿಗೆ ಕೇಡೆಂದೂ; ಎದೆಯ ನೋವಿಗೆ ದುಗುಡವೆಂದೂ; ಒಗೆತನದ ನೋವಿಗೆ ಹಗೆತನವೆಂದೂ ಹೆಸರು ಉಂಟು. ತಪ್ಪು ಒಪ್ಪಾಗಲಿಕ್ಕೂ, ಹುಸಿಯು ಹುರುಳಾಗಲಿಕ್ಕೂ, ಕೇಡು ಒಳಿತಾಗಲಿಕ್ಕೂ, ದುಗುಡ ಸೊಗಸಾಗಲಿಕ್ಕೂ, ಹಗೆ ನಗೆಯಾಗಲಿಕ್ಕೂ, ನೋವಿನ ನೆರವು ಬೇಕು. ಮೈ ಕೈ ನೋವು ಮಕ್ಕಳ ಮರಿಗೂ ತಿಳಿಯುವದು. ಮುಂದೆ ಮುಂದಿನ ನೋವು ಮುಪ್ಪಿನವರಿಗೂ ಮಸುಮಸುಕು. ಆ ನೋವನ್ನರಿತವನೇ ಅರಿತನು.

ಕಲ್ಲುಮಣ್ಣಗೆ ಮೈ ಕೈ ನೋವಿಲ್ಲ; ಮನಮಾತಿನ ನೋವಿಲ್ಲ; ತಿಳಿವರಿವಿನ ನೋವಿಲ್ಲ; ಕೂಟದ ಹಿಗ್ಗಿಲ್ಲ; ಬೇಟದ ತಗ್ಗಿಲ್ಲ; ಈ ಹಿಗ್ಗಿಲ್ಲದ ಇರವು ಬೇಡ ಬೇಡ. ಇದನ್ನರಿತವನೇ ಅರಿತನು.

ಒಂದೇ ಓದಿಗೆ ಅವು ಬಿಚ್ಚಿಕೊಳ್ಳುವುದಿಲ್ಲ!

೧. ಹಾರುವ ಹಕ್ಕಿಯ ಬಿಚ್ಚಬಿದ್ದ ಗರಿಗಳು ಕೂಡ ಗಾಳಿಯಲ್ಲಿ ಹಾರಬಲ್ಲವು. ಸರಿಯಾಗಿ ಊದಿದರೆ ಹಾರಿ ಕುಣಿಸಾಡಬಲ್ಲವು. ಒಂದೊಂದು ಭಾಷೆಗೂ ಅದರದರ ಸಿದ್ಧಿಯ ಅಂಶಗಳು ಇರುತ್ತವೆ. ಅದಲ್ಲದೇ, ಕಾವ್ಯ ಓದುವವನು ತನ್ನ ಸಂಸ್ಕೃತಿಯಿಂದ ಕಾವ್ಯದ ಭಾವಾರ್ಥಕ್ಕೆ ಒಪ್ಪ ಹಾಕುತ್ತಾನೆ. ಅಂತೆಯೇ ಕಾವ್ಯ ಸರ್ವಮಾನ್ಯವಾಗುವದಕ್ಕೆ ಕಾಲ ಹಿಡಿಯುತ್ತದೆ. ಹಾಗೆ ಮನ್ನಣೆ ಪಡೆದ ಕಾವ್ಯ ನವೀನ ರಸಾಸ್ವಾದನದಿಂದ ಪುನಃ ಪುಷ್ಟಿಯನ್ನು ಪಡೆಯುತ್ತದೆ.

೨. ಒಂದು ಕವಿ ಕಾವ್ಯ ಜೀವನವು ಸಾಮಾಜಿಕ ಸಂಸ್ಕೃತಿಯ ಅಂಗವಾಗಬೇಕಾದರೆ, ನಾಲ್ಕೂ ದಿಕ್ಕಿನಿಂದ ಹೆಣೆದುಕೊಳ್ಳಬೇಕಾಗುತ್ತದೆ. ಕವಿಯ ವಾಸ್ತವ ಜೀವನ, ಕಾವ್ಯ ಜೀವನ, ರಸಿಕರು ಅದರಲ್ಲಿ ಕಾಣುವ ಭವ್ಯ ನವ್ಯ ಜೀವನ, ವಿಚ್ಛಿನ್ನವಾಗಿ, ಪ್ರಚ್ಛನ್ನವಾಗಿ, ಅವಿಚ್ಛಿನ್ನವಾಗಿ, ಮತ್ತೆ ಮತ್ತೆ ತಲೆದೋರುವ ಸ್ಫೂರ್ತಿ, ಇವು ಪ್ರಾಸಂಗಿಕ ಮತ್ತು ಅಧಿಕ ಪ್ರಾಸಂಗಿಕ ವಿರಸಗಳನ್ನೂ ಮಂಥನ ಮಾಡಿ ಜೀವನರಸದಲ್ಲಿ ನವರಸವನ್ನು ಒಸರಿಸುತ್ತವೆ.

೩. ನನ್ನ ಜೀವನದ ಹೊಯ್ದಾಟ, ಏರಿಳಿತ, ರುದ್ರತಾಂಡವ ತನ್ನದೇ ಆದ ಬೇತಾಳ ರಾಗದಲ್ಲಿ ಕುಣಿಯುತ್ತಿತ್ತು. ಬೇರೊಂದು ಭೂಮಿಕೆಯಲ್ಲಿಯೇ, ಭೂಮಿಕೆಗಳಲ್ಲಿಯೇ ನನ್ನ ಕಾವ್ಯ ತನ್ನ ನೇಪಥ್ಯ ವಿಧಾನ ರಚಿಸಿಕೊಳ್ಳುತ್ತಿರಬೇಕು. ಅದಿಲ್ಲದಿದ್ದರೆ ನನ್ನ ಕವನಗಳು ವಾಸ್ತವಿಕ ವಿರಸದಿಂದಲೋ, ಕಾಲ್ಪನಿಕ ಸರಸದಿಂದಲೋ ಅತಿರಂಜಿತವಾಗಬಹುದಾಗಿತ್ತು. ಅಂಥ ಛಾಯೆ ನನ್ನ ಕವನಗಳನ್ನು ಕವಿದಾಡದೇ ಬಿಡಲಿಲ್ಲ. ಆದ್ದರಿಂದಲೋ ಏನೋ, ನನ್ನ ಭಾವಕವನಗಳಿಗೆ ಪದರು ಪದರು ಹುಟ್ಟಿಕೊಂಡಿವೆ. ಒಂದೇ ಓದಿಗೆ ಅವು ಬಿಚ್ಚಿಕೊಳ್ಳುವದಿಲ್ಲ.

- ದ.ರಾ. ಬೇಂದ್ರೆ

(ಹೊಸಕೋಟೆಯ ವಕೀಲ ಮುತ್ತೂರು ನಾ. ಮನೋಹರ್ ಅವರ ಸಂಗ್ರಹದ 'ಪಂಚಾಮೃತ' ಕೃತಿಯಿಂದ)

ಸಾಹಿತ್ಯ
ಸಂಸ್ಕೃತಿ
ಕಲೆ

ಪುಸ್ತಕ ಸ್ವೀಕಾರ



⊖ **ಕನಕ ಸ್ಫೂರ್ತಿ:**

ಸಂಸ್ಥಾಪಕರು: *ಶ್ರೀ ಬೀರೇಂದ್ರ ಕೇಶವ ತಾರಕಾನಂದಪುರಿ ಸ್ವಾಮಿಗಳು*, *ಗಾ.ಸಂ. ಕವಿಪ್ರಿಯ*, ಪ್ರ: ಕನಕ ಪ್ರತಿಷ್ಠಾನ, ಬೆಂಗಳೂರು ಶಾಖಾಮಠ, ನಂ. ೧೫, ೮೦ ಅಡಿ ರಸ್ತೆ, ಕನಕ ಸಂಕೀರ್ಣ, ಬನಶಂಕರಿ ೧ನೇ ಹಂತ, ೨ನೇ ಬ್ಲಾಕ್, ಬೆಂಗಳೂರು - ೫೬೦ ೦೫೦. ದ್ವೈವಾರ್ಷಿಕ ಚಂದಾ ರೂ. ೧೨೦/- ಆಜೀವ ಚಂದಾ ರೂ. ೨೪೦/- ಆಜೀವ ಸದಸ್ಯತ್ವ ರೂ. ೧೦೦೦/- ಪೋಷಕರು ರೂ. ೨೫೦೦/- ಮಹಾಪೋಷಕರು ರೂ. ೫೦೦೦/-

⊖ ವಚನವಾಹಿನಿ: ಲೇ: *ಡಾ. ವಿಜಯಶ್ರೀ ಸಬರದ*, ಪುಟ ೧೪೬, ಬೆಲೆ ರೂ. ೭೦/- ಪ್ರ: ಪಲ್ಲವಿ ಪ್ರಕಾಶನ, ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಗುಲಬರ್ಗಾ - ೫೮೫ ೧೦೬.

⊖ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು: ಸಂ: *ಎಸ್.ವಿ ಶ್ರೀನಿವಾಸರಾವ್*, ಪುಟ ೧೪೦, ಬೆಲೆ ರೂ. ೬೦/- ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮.

⊖ ಕನ್ನಡದ ಹಾಡುಪಾಡು: (ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಅಧ್ಯಯನ) ಲೇ: *ಕೆ.ಸಿ. ಶಿವಾರೆಡ್ಡಿ*, ಪುಟ ೩೨೦, ಬೆಲೆ ರೂ. ೧೨೫/- ಪ್ರ: ಅಧ್ಯಯನ ಮಂಡಲ, ಆರ್.ವಿ. ರಸ್ತೆ, ಬಸವನಗುಡಿ, ಬೆಂಗಳೂರು - ೫೬೦ ೦೦೪.

⊖ ಬಹುರೂಪಿ: (ಸಾಮಾಜಿಕ ನ್ಯಾಯ ಕುರಿತ ಕಾವ್ಯಾಭಿನಯ) ಸಂ: *ಮೂಡ್ನಾಕೂಡು ಚಿನ್ನಸ್ವಾಮಿ*, ಪುಟ ೧೦೪, ಬೆಲೆ ರೂ. ೬೦/- ಪ್ರ: ನಿರಂತರ ಪ್ರಕಾಶನ, ಸರಸ್ವತಿಪುರಂ, ಮೈಸೂರು - ೫೭೦ ೦೦೯.

⊖ ರಸ ಸಿದ್ಧಿ: (ಕುವೆಂಪು ಕಾವ್ಯ ವಿಮರ್ಶೆ) ಲೇ: *ಡಾ. ಬೈರಮಂಗಲ ರಾಮೇಗೌಡ*, ಪುಟ ೨೨೦, ಬೆಲೆ ರೂ. ೧೨೫/- ಪ್ರ: ಸಮಾನ ಮನಸ್ಕರ ಒಕ್ಕೂಟ, ಬಿ.ಟಿ.ಎಂ. ಬಡಾವಣೆ, ಬೆಂಗಳೂರು - ೭೬.

⊖ **ಬುದ್ಧನೊಡನೆ ಇಪ್ಪತ್ತು ದಿನಗಳು:**

ಲೇಖಕರು: ***ಮೊಳಕಾಲ್ಮೂರು ಶ್ರೀನಿವಾಸಮೂರ್ತಿ***, ಪುಟ ೨೩೦, ಬೆಲೆ ರೂ. ೧೦೦/- ಪ್ರಕಾಶಕರು: ಗುಣಶ್ರೀ ಪ್ರಕಾಶನ, ನಿವೇದಿತಾ, ೭ನೇ ಅಡ್ಡರಸ್ತೆ, ಶಂಕರನಗರ, ಬೆಂಗಳೂರು - ೫೬೦ ೦೯೬.



⊖ **ಸಿನಿಮಾ - ಟಿ.ವಿ. ಡೈರೆಕ್ಟರಿ:**



(ಸಿನಿಮಾ - ಟಿ.ವಿ. ಮಾಧ್ಯಮದ ಸಮಗ್ರ ವಿಳಾಸ ಕೈಪಿಡಿ)

ಸಂ: *ಎಂ.ಜಿ. ಲಿಂಗರಾಜ್,* ಪುಟ ೩೪೪, ಬೆಲೆ ರೂ. ೧೫೦/- ಪ್ರ: ನಂದಿನಿ ಪಬ್ಲಿಕೇಷನ್ಸ್, ನಂ ೧೯/೩, ೧ನೇ ಮಹಡಿ, ೩ನೇ ಕ್ರಾಸ್, ನಾಗಪ್ಪ ಬೀದಿ, ಅರಮನೆ ಗುಟ್ಟಹಳ್ಳಿ, ಬೆಂಗಳೂರು - ೫೬೦ ೦೦೩. ದೂರವಾಣಿ: ೦೮೦ - ೨೩೪೬ ೬೩೧೯

ಕೇಂದ್ರ ಸಾಹಿತ್ಯ ಅಕಾದೆಮಿ, ಸೆಂಟ್ರಲ್ ಕಾಲೇಜ್ ಆವರಣ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - ೫೬೦ ೦೦೧. ಇವರ ಪ್ರಕಟಣೆಗಳು :

⊖ **ರಾಜನಗರ:** (ಬಂಗಾಳಿ ಕಾದಂಬರಿ)

ಮೂಲ: *ಅಮಿಯ ಭೂಷಣ್ ಮಜುಂದಾರ್,* ಅನು: ಮೀರಾ ಚಕ್ರವರ್ತಿ, ಪುಟ ४೩೫, ಬೆಲೆ ರೂ. ೧೮೫/-

⊖ **ಕಾರ್ಮೆಲೀನ:** (ಕೊಂಕಣಿ ಕಾದಂಬರಿ)

ಮೂಲ: *ದಾಮೋದರ ಮಾವಜೊ,* ಅನು: ಶಾ.ಮಂ.ಕೃಷ್ಣರಾಯ, ಪುಟ ೨೭೧, ಬೆಲೆ ರೂ. ೧೦೦/-

⊖ **ಜೀವನಾನಂದರ ಕವಿತೆಗಳು:** (ಬಂಗಾಳಿ ಕವಿತೆಗಳು)

ಮೂಲ: *ಜೀವಾನಂದ ದಾಸ್,* ಅನು: *ಮೀರಾ ಚಕ್ರವರ್ತಿ ಮತ್ತು ಎಂ.ಆರ್. ಕಮಲ,* ಪುಟ ೧೮೦, ಬೆಲೆ ರೂ. ೭೦/-

⊖ **ಅಪ್ಪರ್:**

ಮೂಲ: *ಜಿ. ವಲ್ಮೀಕನಾಥನ್,* ಅನು: *ಎಸ್. ಬಿಳಿಗಿರಿವಾಸನ್,* ಪುಟ ೧೦೪, ಬೆಲೆ ರೂ. ೨೫/-

⊖ **ಅಶ್ವಘೋಷ:**

ಮೂಲ: *ರೊಮಾ ಚೌಧುರಿ,* ಅನು: *ಶ್ರೀರಾಮ ಭಟ್ಟ,* ಪುಟ ೬೮, ಬೆಲೆ ರೂ. ೨೫/-

⊖ **ಭೀಮಾಬೊಯಿ:**

ಮೂಲ: *ಸೀತಾಕಾಂತ ಮಹಾಪಾತ್ರ,* ಅನು: *ಶ್ರೀಧರ ಪಿಸ್ಸೆ,* ಪುಟ ೯೦, ಬೆಲೆ ರೂ. ೨೫/-

⊖ **ಮಹಾಕವಿ ಜಿ. ಶಂಕರ ಕುರುಪ್:**

ಮೂಲ: *ಎಂ. ಲೀಲಾವತಿ,* ಅನು: *ನಾ. ದಾಮೋದರ ಶೆಟ್ಟಿ,* ಪುಟ ೯೮, ಬೆಲೆ ರೂ. ೨೫/-



⊖ **ಭೀಮಾಯಣ:**

ಮೂಲ: *ಎಂ.ಟಿ. ವಾಸುದೇವನ್ ನಾಯರ್,* ಅನು: *ಸಿ. ರಾಘವನ್,* ಪುಟ ೨೭೭, ಬೆಲೆ ರೂ. ೧೦೦/-

⊖ **ಸಂ.ಶಿ. ಭೂಸನೂರಮಠ:**

ಲೇ: *ಶಾಂತಾ ಇಮ್ರಾಪೂರ,* ಪುಟ ೧೫೮, ಬೆಲೆ ರೂ. ೨೫/-

⊖ **ಮುಕ್ತಿಬೋಧ:** ಮೂಲ: *ಜೈನೇಂದ್ರಕುಮಾರ್,*
ಅನು: *ಎ.ಎಂ. ರಾಮಚಂದ್ರ,* ಪುಟ ೧೩೨, ಬೆಲೆ ರೂ. ೮೦/-

⊖ **ಬೆಟ್ಟಕ್ಕೆ ಚಳಿ:**
ಮೂಲ: *ಅನಿತಾ ದೇಸಾಯಿ*, ಅನು: *ಎಚ್.ಆರ್.ಚಂದ್ರವದನರಾವ್*, ಪುಟ ೧೫೫, ಬೆಲೆ ರೂ. ೧೦೦/-

⊖ **ವ.ರಾ (ವ. ರಾಮಸ್ವಾಮಿ):**
ಮೂಲ ಲೇ: *ಪಿ. ವೇಣುಗೋಪಾಲ*, ಅನು: *ಸು. ವೆಂಕಟರಾಮನ್*, ಪುಟ ೮೮, ಬೆಲೆ ರೂ. ೨೫/-

⊖ **ಪದಚರಿತ:**
ಫ್ರೆಂಚ್ ಮೂಲ: *ಜೀನಪಾಲ್ ಸಾರ್ತ್ರ್*, ಅನು: *ಕೆ. ಎಚ್. ಶ್ರೀನಿವಾಸ* ಪುಟ ೨೨೨, ಬೆಲೆ ರೂ. ೭೫/-

⊖ **ಕನ್ನಡ ಸಾನೆಟ್ ಸಂಗ್ರಹ:**
ಸಂ: *ಎಚ್.ಎಸ್. ವೆಂಕಟೇಶಮೂರ್ತಿ*, ಪುಟ ೧೯೫, ಬೆಲೆ ರೂ. ೮೫/-

⊖ **ಅಯ್ಯಪ್ಪ ಪಣಿಕ್ಕರರ ಕೃತಿಗಳು:**
ಮೂಲ: *ಅಯ್ಯಪ್ಪ ಪಣಿಕ್ಕರ್*, ಅನು: *ಸಿ. ರಾಘವನ್*, ಪುಟ ೨೩೨, ಬೆಲೆ ರೂ. ೮೫/-

⊖ **ಚೇರಿಗೆ ನೀರು:**
ಮೂಲ: *ರಾಜಂ ಕೃಷ್ಣನ್*, ಪುಟ ೨೦೦, ಬೆಲೆ ರೂ. ೯೫/-


⊖ **Shri Ramayana Darshanam:** (Epic)
Author: *K.V. Puttappa `Kuvempu'*, Trans: *Shankar Mokashi Punekar, Introduction by G.S. Amur, Pages: 704, Rs.250/-*

⊖ **Krishna's Flute and Other Poems:** (Poetry)
Author: P.T. Narasimhachar, Trans: *D.A. Shankarr, Pages: 76, Rs.40/-*

⊖ **Between You and Me:** (Poetry) Author: *G.S. Shivarudrappa,*
Trans: *O.L. Nagabhushana Swamy, Pages: 121, Rs.60/-*

⊖ **When stone Melts & other Stories:**
(Short Stories) Author: P. Lankesh,
Edited by Vanamala Vishwanatha, Pages: 200, Rs.75/-

⊖ **Ooru Keri:** (An Autobiography)
Author: Siddalingaiah, Trans:S.R. Ramakrishna, Pages: 125, Rs.60/-




⊖ **Inviting Life:** (Poetry)
Author: Channaveera Kanavi, Trans: K. Raghavendra Rao, Pages: 119, Rs.50/-

******

⊖ ಫ್ರೀಲಾನ್ಸಿಗಳ ಖಾಸಗಿ ಕಾಲಂ: (ಏಳು ಲೇಖಕ ಪತ್ರಕರ್ತರ ಬರಹಗಳು) ಲೇ: ವಿವಿಧ ಲೇಖಕರು, ಪುಟ ೭೨, ಬೆಲೆ ರೂ.೨೦/- ಪ್ರ: ಮಾಧ್ಯಮ ಸಂಸ್ಕೃತಿ ಅಭಿವೃದ್ಧಿ ಕೇಂದ್ರ, ಸ್ನೇಹಸಾಗರ ಆಂಗ್ಲಮಾಧ್ಯಮ ವಸತಿ ಶಾಲೆ, ಇಡಗುಂದಿ, ಯಲ್ಲಾಪುರ ತಾ., ಉ.ಕ. ಜಿಲ್ಲೆ - ೫೮೧ ೩೩೭.

- **ಮುಂಬಯಿ ದಿನಾಂಕ:** (ವ್ಯಾಸರಾಯ ಬಲ್ಲಾಳರ ಮುಂಬಯಿ ಬದುಕಿನ ಅನುಭವ ಕಥನ) ಲೇ: *ವ್ಯಾಸರಾಯ ಬಲ್ಲಾಳ,* ಪುಟ ೨೦೦, ಬೆಲೆ ರೂ. ೧೨೫/-



- **ವೇದಗಳಲ್ಲಿ ಜನಸಾಮಾನ್ಯರು:** ಲೇ: *ಬಿ.ವಿ. ವೀರಭದ್ರಪ್ಪ,* ಪುಟ ೧೨೦, ಬೆಲೆ ರೂ. ೬೫/-
- **ಭಾಷೆಯ ಬೆಳಕು:** ಲೇ: *ಡಾ. ಕೆ.ಎಲ್. ಗೋಪಾಲಕೃಷ್ಣಯ್ಯ,* ಪುಟ ೧೬೦, ಬೆಲೆ ರೂ. ೭೦/-
- **ಪ್ರಾಚೀನ ಭಾರತದಲ್ಲಿ ಅಂಧಶ್ರದ್ಧೆಗೆ ಎದುರಾಗಿ ವಿಜ್ಞಾನ:** ಮೂಲ: ಎಸ್.ಜಿ. ಸರ್ದೇಸಾಯಿ, ಅನು: *ಕೆ.ಎಲ್. ಗೋಪಾಲಕೃಷ್ಣರಾವ್,* ಪುಟ ೪೮, ಬೆಲೆ ರೂ. ೧೮/-
- **ಜಾಗತೀಕರಣ ದಕ್ಷಿಣದ ದೃಷ್ಟಿಯಲ್ಲಿ:** ಲೇ: *ಮ. ಮಹೇಶನ್,* ಪುಟ ೨೦೮, ಬೆಲೆ ರೂ. ೯೫/-
- **ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ:** ಮೂಲ: ಎಸ್.ಜಿ. ಸರ್ದೇಸಾಯಿ, ಅನು: *ಕೆ.ಎಲ್. ಗೋಪಾಲಕೃಷ್ಣರಾವ್,* ಪುಟ ೭೨, ಬೆಲೆ ರೂ. ೩೦/-
- **ಬರೆಯದ ದಿನಚರಿಯ ಮರೆಯದ ಪುಟಗಳು:** ಲೇ: *ಬಿ.ವಿ. ಕಕ್ಕಿಲ್ಲಾಯ,* ಪುಟ ೪೪೮, ಬೆಲೆ ರೂ. ೨೦೦/-

ಈ ಎಲ್ಲಾ ಪುಸ್ತಕಗಳ ಪ್ರಕಾಶಕರು:

ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - ೫೬೦ ೦೦೧.

- **ಕರ್ನಾಟಕ ಸಂಘ ಭವನ - ೬೦:** (ಹಸೂಡಿ ವೆಂಕಟಶಾಸ್ತ್ರಿಗಳ ಸಾಹಿತ್ಯ ಭವನ - ನೆನಪಿನ ಸಂಪುಟ) ಸಂ: *ಪ್ರೊ. ಪಾಂಡುರಂಗ ಉಡುಪ ಮತ್ತು ಜಯದೇವಪ್ಪ ಜೈನಕೇರಿ,* ಪುಟ ೧೧೦, ಬೆಲೆ ರೂ. ೫೦/- ಪ್ರ: ಸಂಪಾದಕ ಮಂಡಳಿ, ಕರ್ನಾಟಕ ಸಂಘ (ರಿ) ಶಿವಮೊಗ್ಗ - ೫೭೭ ೨೦೧.
- **ಪವಾಡಗಳ ಒಳಗುಟ್ಟುಗಳು:** (೫೦ ಚಮತ್ಕಾರಗಳಿಗೆ ವೈಜ್ಞಾನಿಕ ವಿವರಣೆ) ಲೇ: *ಸಿದ್ಧರಾಜು, ಕೊತ್ತತ್ತಿ,* ಪುಟ ೧೨೭, ಬೆಲೆ ರೂ.೫೦/- ಪ್ರ: ವಿಕಾಸ ಪ್ರಕಾಶನ, ಕೊತ್ತತ್ತಿ - ೫೭೧ ೪೦೨೨, ಮಂಡ್ಯ ತಾಲ್ಲೂಕು.
- **ಕಡಲ ಧ್ಯಾನ:** (ಕವನ ಸಂಕಲನ) ಲೇ: *ವಸಂತ ಬನ್ನಾಡಿ,* ಪುಟ ೧೦೯, ಬೆಲೆ ರೂ. ೭೫/- ಪ್ರ: ಬಹುರೂಪಿ ಪ್ರಕಾಶನ, ವಡೇರಹೋಬ್ಳಿ, ಕುಂದಾಪುರ - ೫೭೬ ೨೦೧.
- **ನೀಲಿ ಹೂ:** (ಕವನ ಸಂಕಲನ) ಲೇ: *ವಸಂತ ಬನ್ನಾಡಿ,* ಪುಟ ೧೩೮, ಬೆಲೆ ರೂ. ೫೦/-
- **ಬೆಂಕಿಯೂ ನಾನೇ ಆಹುತಿಯೂ ನಾನೇ:** (ಕಡಲ ಧ್ಯಾನ ಕವನ ಸಂಕಲನದ ಕುರಿತ ಬರಹಗಳು) ಸಂ: *ಶಶಿಧರ ಹೆಮ್ಮಾಡಿ,* ಪುಟ ೧೦೦, ಬೆಲೆ ರೂ. ೨೫/-

ಈ ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು:

ತಿಂಗಳ ಬೆಳಕು ಪ್ರಕಾಶನ, ವಿಟ್ಠಲವಾಡಿ, ವಡೇರಹೋಬ್ಳಿ, ಕುಂದಾಪುರ - ೫೭೬ ೨೦೧.

- **ಕನ್ನಡ ಕಾವ್ಯ:** ಲೇ: *ಲೋಕೇಶ ಅಗಸನಕಟ್ಟೆ,* ಪುಟ ೩೦೮, ಬೆಲೆ ರೂ. ೧೬೦/- ಪ್ರ: ಆಲೋಕ ಪ್ರಕಾಶನ, ತರಳಬಾಳು ಬಡಾವಣೆ, ಚಿತ್ರದುರ್ಗ - ೫೭೭ ೫೦೨.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಿಶ್ವೇಶ್ವರಯ್ಯ ಕೇಂದ್ರ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - ೫೬೦ ೦೦೧. ಇವರ ಪ್ರಕಟಣೆಗಳು :

- ಪತ್ರಿಕಾ ಭಾಷೆ: (ಪತ್ರಿಕೋದ್ಯಮ ಪುಸ್ತಕಮಾಲೆ - ೬) ಲೇ: *ಪದ್ಮರಾಜ ದಂಡಾವತಿ*, ಪುಟ ೧೫೫, ಬೆಲೆ ರೂ. ೩೦/-
- ಕ್ರೀಡಾ ಪತ್ರಿಕೋದ್ಯಮ: (ಪತ್ರಿಕೋದ್ಯಮ ಪುಸ್ತಕಮಾಲೆ - ೧೧) ಲೇ: *ಗೋಪಾಲಕೃಷ್ಣ ಹೆಗಡೆ*, ಪುಟ ೮೮, ಬೆಲೆ ರೂ. ೩೦/-
- ಇಂಟರ್‌ನೆಟ್ ಪತ್ರಿಕೋದ್ಯಮ: (ಪತ್ರಿಕೋದ್ಯಮ ಪುಸ್ತಕಮಾಲೆ - ೧೨) ಲೇ: *ಶ್ರೀಧರ ದೀಕ್ಷಿತ್*, ಪುಟ ೪೮, ಬೆಲೆ ರೂ. ೩೦/-
- ಪತ್ರಿಕಾ ಕಾನೂನು: (ಪತ್ರಿಕೋದ್ಯಮ ಪುಸ್ತಕಮಾಲೆ - ೧೩) ಲೇ: *ಎನ್. ಅರ್ಜುನದೇವ*, ಪುಟ ೮೮, ಬೆಲೆ ರೂ. ೩೦/-
- ಪತ್ರಿಕಾ ನೀತಿ ಸಂಹಿತೆ: (ಪತ್ರಿಕೋದ್ಯಮ ಪುಸ್ತಕಮಾಲೆ - ೧೪) ಸಂ: *ಸಿ.ಟಿ. ಜೋಶಿ*, ಪುಟ ೭೮, ಬೆಲೆ ರೂ. ೩೦/-
- ಮಾಧ್ಯಮ ಪಾರಿಭಾಷಿಕ: (ಪತ್ರಿಕೋದ್ಯಮ ಪುಸ್ತಕಮಾಲೆ - ೧೫) ಲೇಖಕರು: *ವಿ ನಾಗರಾಜರಾವ್, ಕೆ.ಎಸ್. ನಾಗಭೂಷಣಂ, ಎನ್. ಅರ್ಜುನದೇವ*, ಪುಟ ೮೦, ಬೆಲೆ ರೂ. ೩೦/-

* * * * *

- ಎಸ್. ಲಕ್ಷ್ಮೀನಾರಾಯಣ್: (ಅಧ್ಯಯನ) ಲೇ: *ಸಿ. ಸೀತಾರಾಮ್*, ಪುಟ ೧೪೬, ಬೆಲೆ ರೂ. ೧೬೦/-
- ಕೊನೆಯ ಸದ್ದು: (ಕಥಾ ಸಂಕಲನ) ಲೇ: *ಶ್ರೀನಿವಾಸ ಜೋಕಟ್ಟೆ*, ಪುಟ ೧೪೭, ಬೆಲೆ ರೂ. ೬೫/-

ಈ ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು:

ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, ೧೭ನೇ ಮುಖ್ಯರಸ್ತೆ, ಬನಶಂಕರಿ ೨ನೇ ಹಂತ ಬೆಂಗಳೂರು - ೭೦.

- ಅಗಾಂತರ: (ಸಣ್ಣಕತೆಗಳು) ಲೇ: *ಕಾ.ತ. ಚಿಕ್ಕಣ್ಣ*, ಪುಟ ೧೩೨, ಬೆಲೆ ರೂ. ೭೦/- ಪ್ರ: ಕಥನ ಪ್ರಕಾಶನ, ವಿಜಯನಗರ, ಬೆಂಗಳೂರು - ೫೬೦ ೦೪೦.
- ಕಾವ್ಯ ನಿಧಿ: ಲೇ: *ಎ.ಜಿ. ರತ್ನ ಕಾಳೇಗೌಡ*, ಪುಟ ೬೪, ಬೆಲೆ ರೂ. ೪೦/- ಪ್ರ: ತೃಪ್ತಿ ಪ್ರಕಾಶನ, ಎಸ್.ಎಫ್.ಎಸ್. ೪೦೭ ಜಿ.ಕೆ.ವಿ.ಕೆ. ಪೋಸ್ಟ್, ಯಲಹಂಕ ಉಪನಗರ, ಬೆಂಗಳೂರು - ೬೫.
- ಮಡೆನೂರು: (ಕಾದಂಬರಿ) ಲೇ: *ಸತ್ಯನಾರಾಯಣ ಜಿ.ಟಿ. ಕರೂರ್*, ಪುಟ ೫೬, ಬೆಲೆ ರೂ. ೩೦/-
- ಹಸಿವು: (ಕಥಾ ಸಂಕಲನ) ಲೇ: *ಪರಮೇಶ್ ಕರೂರು*, ಪುಟ ೫೬, ಬೆಲೆ ರೂ. ೩೦/-

ಈ ಎರಡೂ ಪುಸ್ತಕಗಳ ಪ್ರಕಾಶಕರು:

ಇಂಚರ ಪ್ರಕಾಶನ, ತುಮರಿ, ಸಾಗರ - ತಾ. - ೫೭೭ ೪೦೧. ಶಿವಮೊಗ್ಗ - ಜಿ.

- ಬುದ್ಧಪ್ರಜ್ಞೆ: (ಕೆ.ಎಚ್. ರಂಗನಾಥ್ ಅಭಿನಂದನಾ ಗ್ರಂಥ) ಪ್ರ.ಸಂ.: *ನಾಗತಿಹಳ್ಳಿ ರಮೇಶ್*, ಪುಟ ೨೭೮, ಬೆಲೆ ರೂ. ೧೫೦/- ಪ್ರ: ಸೃಷ್ಟಿ ಪ್ರಕಾಶನ, ಗಾಂಧಿನಗರ, ಬೆಂಗಳೂರು - ೫೬೦ ೦೦೯.

'ಅನ್ವೇಷಣೆ' ಪತ್ರಿಕೆಗೆ ಚಂದಾದಾರರಾಗಿ. ವಾ. ಚಂದಾ ರೂ. 100

ANVESHANE MAG(5) PBR.DECL 127/85-86

ನೀರೆಂಬ ಪ್ರಳಯ ರೌದ್ರವವೂ, ಸಾಹಿತ್ಯವೂ...



ನೀರು ಮನುಷ್ಯ ಬದುಕಿನ ಸಂಜೀವಿನಿ. ಈ ಸಂಜೀವಿನಿಯೇ ಮನುಕುಲದ ಬದುಕಿಗೆ ಕಂಟಕವಾದರೆ? ಬದುಕುವ, ಸಾಧಿಸುವ ಆಕಾಂಕ್ಷೆ ಮನುಷ್ಯನ ಜೀವಕ್ಕೆ ಬೆಲೆ ಇಲ್ಲದಂತೆ ಮಾಡಿದರೆ? ದೇಶದ ಹಲವೆಡೆ ಕುಡಿವ ನೀರಿಗೆ ಹಾಹಾಕಾರ. ಕೆಲವೆಡೆ ಜಲಪ್ರಳಯ. ಉಕ್ಕಿ ಹರಿವ ನದಿಗಳ ಆರ್ಭಟ. ಏನಿದು ಪ್ರಕೃತಿ ನಿಯಮದ ವೈಚಿತ್ರ್ಯ?

ಅಸ್ಸಾಂ ರಾಜ್ಯದ ದೈನಂದಿನ ಬದುಕು ಕೆಟ್ಟು ಮೂರಾಬಟ್ಟೆಯಾದದ್ದು ಈ ನೀರಿನ ರೌದ್ರತೆಯಿಂದ. ಸಾವಿರಾರು ಮನೆಗಳು ಮುಳುಗಿಹೋಗಿವೆ ಇಲ್ಲಾ ಕೊಚ್ಚಿಹೋಗಿವೆ. ಅಷ್ಟೇ ಸಂಖ್ಯೆಯ ಜನ ಜಾನುವಾರುಗಳ 'ಸಾವು' ಸಂಭವಿಸಿದೆ. ಮಳೆ ಶುರುವಾಯಿತೆಂದರೆ ಅಸ್ಸಾಂ, ಬಿಹಾರ, ಪಶ್ಚಿಮ ಬಂಗಾಳ ಹಾಗೂ ಒರಿಸ್ಸಾದ ಕೆಲಭಾಗಗಳು ಜಲಾವೃತ್ತವಾಗುವುದು ಸರ್ವೇಸಾಮಾನ್ಯ ಅನ್ನುವಂತಾಗಿದೆ. ಆ ರಾಜ್ಯಗಳತ್ತ ಎರಡು ಬಾರಿಯ ನನ್ನ ಪ್ರವಾಸದ ಕಣ್ಣೆದುರಿನ ದೃಶ್ಯ.... ಎಲ್ಲಿಯವರೆಗೆ ದೃಷ್ಟಿ ಹಾಯಿಸಿದರೂ ಸಮತಟ್ಟಾದ ಭೂಮಿಯೇ ಭೂಮಿ, ಹೊಲಗದ್ದೆಗಳ ತುಂಬಾ ಪ್ರವಾಹದೋಪಾದಿ ನೀರು. ನೀರಲ್ಲಿಯೇ ಬೊಂಬಿನಿಂದ ತಯಾರಿಸಿದ ಮನೆಗಳು. ಇಳಿಜಾರು ಭೂಮಿ, ಹಳ್ಳಕೊಳ್ಳ, ನದಿಗಳು - ಇವ್ಯಾವೂ ಕಣ್ಣಿಗೆ ಕಾಣದಷ್ಟು ದೂರ. ಎಲ್ಲೆಲ್ಲೂ ನೀರು.. ನೀರು... ಹೀಗಾಗಿ ಜನಸಾಮಾನ್ಯರ ಬದುಕು ಅಸ್ತವ್ಯಸ್ತ. ಇದು ಪ್ರತಿವರ್ಷದ ಆತಂಕದ ಸುದ್ದಿ. ಅಸ್ಸಾಂ ಹಳ್ಳಿಯೊಂದರ ಮಹಿಳೆ ತನ್ನ ಜೀವ ಲೆಕ್ಕಿಸದೆ, ತನ್ನ ಮಗು ಬದುಕಿದರೆ ಸಾಕೆಂದು ಕತ್ತಿನವರೆಗೂ ಬಂದ ನೀರಲ್ಲಿ ನಡೆದು, ಹೆಗಲಲ್ಲಿ ಪುಟ್ಟ ಮಗು ಹೊತ್ತುಹೋಗುವ ದೃಶ್ಯ, ಬಾಳೆದಿಂಡುಗಳನ್ನು ತೆಪ್ಪ ಮಾಡಿಕೊಂಡು ಜೀವ ಉಳಿಸಿಕೊಳ್ಳಲು ತಲ್ಲಣಿಸುವ ಇಡೀ ಕುಟುಂಬ, ಪ್ರಾಣಭಯವಿಲ್ಲದೆ ವಿದ್ಯುತ್ ಕಂಬ ಏರಿದ ಬಾಲಕ, ಸತ್ತ ತಾಯಿಯ ಶವ ಹೂಳಲು ಅಥವಾ ಸುಡಲು ನೆಲವೇ ಕಾಣದಾಗ ಅದನ್ನು ಹುದುಗಿ ಬೊಂಬಿನ ಮೇಲೆ ಹೆಣ ಸಾಗಿಸುತ್ತಿದ್ದ ಜನ ದೃಶ್ಯ ಕರುಣಾಜನಕ. ....ಇಂಥ ಎಷ್ಟೋ ಆತಂಕಗಳ ನಡುವೆ ಸಂವೇದನಾಶೀಲ ಮನಸ್ಸುಗಳು ಸೃಷ್ಟಿಸುವ ಸಾಹಿತ್ಯಕ್ಕೆ ಯಾವ ಬೆಲೆ ಬಂದೀತು? ಕಣ್ಣೆದುರೇ ನೀರಲ್ಲಿ ಮುಳುಗಿ ಹೋಗುವ ಪುಟ್ಟ ಮಕ್ಕಳ ಜೀವ ಹಾಗೂ ಕನಸನ್ನು ಹಿಡಿದಿಡಲು ಲೇಖಕನಿಗೆ ಸಾಧ್ಯವೆ? ಪ್ರವಾಹದ ವಿರುದ್ಧ ಸಾವು ಬದುಕಿನ ಹೋರಾಟದ ಪತ್ರಿಕಾ ವರದಿ, ಚಿತ್ರ; ಸುದ್ದಿ ಚಾನಲ್‌ಗಳ ಪ್ರತ್ಯಕ್ಷ ಚಿತ್ರಣ ನಮ್ಮನ್ನು ತಲ್ಲಣಿಸದೇ ಹೋದೀತೆ?

— — — — — — — — —

ವರ್ಷದಿಂದೀಚೆಗೆ ಕರ್ನಾಟಕದ ಸಾಂಸ್ಕೃತಿಕ ವಲಯದ ಹಿರಿಯ-ಕಿರಿಯ ಸಾಧಕರನ್ನು ಕಳೆದುಕೊಂಡಿದ್ದೇವೆ. ಅವರಲ್ಲಿ ರೈತನಾಯಕ, ಕಾನೂನುತಜ್ಞ ಪ್ರೊ. ಎಂ.ಡಿ. ನಂಜುಂಡಸ್ವಾಮಿ (ನನಗೆ ಕಾನೂನು ಕಾಲೇಜಿನಲ್ಲಿ ಗುರುಗಳು) ಮೈಸೂರು ಮಲ್ಲಿಗೆ ಕವಿ ಕೆ.ಎಸ್. ನರಸಿಂಹಸ್ವಾಮಿ, ಪ್ರಗತಿಪರ ಆಲೋಚನೆಯ ಕಲಾವಿದ ಆರ್.ಎಂ. ಹಡಪದ್ ಹಾಗೂ ಸಾಹಿತ್ಯದಲ್ಲಿ ತನ್ನ ಖಾತೆ ತೆರೆದಿದ್ದ ಯುವಪ್ರತಿಭೆ ವಿಭಾ ತಿರುಕಪಡಿ - ಮುಂತಾದವರು ನಮ್ಮನ್ನಗಲಿದ್ದಾರೆ. ಅವರ ಸ್ಮರಣೆಯ ಬರಹಗಳು ತಡವಾದರೂ ಈ ಸಂಚಿಕೆಯಲ್ಲಿ ದಾಖಲಾಗಿವೆ. ಕನ್ನಡ ಸಾಹಿತ್ಯ ಸಂಸ್ಕೃತಿ ಕಾಳಜಿಯ ಚಿಂತಕರು ಹರಿಸಿದ ವಿಚಾರ ಇಲ್ಲಿವೆ. ಇವು ನಿಮಗೆ ಭಿನ್ನವಾಗಿ ತೋರಿದರೆ ಸಂತೋಷ.

ತಡವಾಗಿ ಬರುತ್ತಿರುವ 'ಅನ್ವೇಷಣೆ' ಸ್ವೀಕರಿಸಿ ಓದಿ, ಮುಕ್ತವಾಗಿ ಬರೆಯಿರಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

೨೫.೦೭.೨೦೦೪

ಆರ್.ಜಿ. ಹಳ್ಳಿ ನಾಗರಾಜ್

ANVESHANE Edited - Printed - Published & Owned by R.G. Halli Nagaraj,
37/2 A 'Nisarga', Nagarabhavi Rd., Vijayanagar, BANGALORE - 40. ☎ : 2340 4244 / 5760 6488